ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 29, 2020

ಸಂಪುಟ : 47 ಸಂಚಿಕೆ : 140 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com

## ಕೃಷಿ ಕಾಯ್ದೆಗಳ ವಿರುದ್ಧ ಬೃಹತ್ ಪ್ರತಿಭಟನೆ

ಬೆಂಗಳೂರು, ಸೆ. 28 - ಕೃಷಿ ಕಾಯ್ದೆಗಳನ್ನು ವಿರೋಧಿಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ರೈತ ಸಂಘ ಮತ್ತು ಕನ್ನಡ ಪರ ಸಂಘಟನೆಗಳು ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ನಡೆಸಿದವು.

ರೈತರ ಬೆಂಬಲಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಧ್ವನಿಗೂಡಿಸಿ, ಅವರ ಚಳುವಳಿಯಲ್ಲಿ ಪಾಲ್ಗೊಂಡಿದ್ದರು.

**ಶಾಂತಿಯುತ ಪ್ರತಿಭಟನೆಯಲ್ಲಿ ಬಿಜೆಪಿ ಸರ್ಕಾರಗಳ ವಿರುದ್ಧ ಆಕ್ರೋಶ**

ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆ ಯಾವುದೇ ಅಹಿತಕರ ಘಟನೆ ನಡೆಯದೆ, ಶಾಂತಿಯುತವಾಗಿತ್ತು. ಕೆಲವೆಡೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪ್ರತಿಕೃತಿಗಳನ್ನು ಸುಟ್ಟು ತಮ್ಮ ಕೋಪ ತೀರಿಸಿಕೊಂಡರು.

ಮತ್ತೆ ಕೆಲವೆಡೆ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಬಂದ್ ಮಾಡಿ, ಸಂಚಾರ ತಡೆಹಿಡಿಯಲಾಗಿತ್ತು. ಬೆಂಗಳೂರು ನಗರ ಸೇರಿದಂತೆ ರಾಜ್ಯದ ಕೆಲವು ಕೇಂದ್ರಗಳಲ್ಲಿ ರೈತರು ಬೃಹತ್ ರ್‍ಯಾಲಿ ಮತ್ತು ಪ್ರತಿಭಟನೆಗಳನ್ನು ನಡೆಸಿ, ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ರೈತರು ಬೀದಿಗಿಳಿಯುತ್ತಿದ್ದಂತೆ ಎಚ್ಚೆತ್ತುಕೊಂಡ ಮುಖ್ಯಮಂತ್ರಿಯವರು ತುರ್ತು ಪತ್ರಿಕಾಗೋಷ್ಠಿ ನಡೆಸಿ, ನಮ್ಮ ಸರ್ಕಾರ ರೈತ ವಿರೋಧಿ ಅಲ್ಲ, ಅವರು ಬೆಳೆದ ಬೆಳೆಗೆ ಬೆಲೆ ತರುವ ಉದ್ದೇಶದಿಂದ ಕಾಯ್ದೆಗಳನ್ನು ತಂದಿದ್ದೇವೆ. ಅವರು ಚಳುವಳಿ ಮುಗಿಸಿದ ನಂತರ ಅವರ ಜೊತೆ ಮಾತುಕತೆ ನಡೆಸಲು ಸಿದ್ಧ ಎಂದರು.

ನಗರದಲ್ಲಿ ರೈತ ಕಾರ್ಮಿಕ, ದಲಿತ ಸಂಘಟನೆಗಳು ಸೇರಿದಂತೆ 32 ಕ್ಕೂ ಹೆಚ್ಚು ಕನ್ನಡ ಪರ ಸಂಘಟನೆಗಳು ನಗರದ ಟೌನ್ ಹಾಲ್‌ನಿಂದ ರ್‍ಯಾಲಿ ನಡೆಸಿ, ಬೃಹತ್ ಪ್ರತಿಭಟನೆ ನಡೆಸಿದರು. ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದಲ್ಲದೆ, ಕೃಷಿ ಕಾಯ್ದೆಯನ್ನು ಹಿಂದಕ್ಕೆ (6ನೇ ಪುಟಕ್ಕೆ)

# ಅನ್ನದಾತನ ಬಂದ್‌ಗೆ ಉತ್ತಮ ಸ್ಪಂದನೆ

## ಕೇಸರಿ ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸಿದ ಹಸಿರು ಶಾಲು, ಕೆಂಬಾವುಟ



ದಾವಣಗೆರೆ, ಸೆ. 28 - ಕೃಷಿ ಹಾಗೂ ಕಾರ್ಮಿಕ ವಲಯದ ಕಾನೂನುಗಳಿಗೆ ತಿದ್ದುಪಡಿ ವಿರೋಧಿಸಿ, ರೈತ ಹಾಗೂ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಸೋಮವಾರದ ಬಂದ್‌ಗೆ ನಗರದಲ್ಲಿ ಉತ್ತಮ ಸ್ಪಂದನೆ ದೊರೆತಿದೆ.

ನಗರದ ಪ್ರಮುಖ ಪ್ರದೇಶಗಳು, ಮಾರುಕಟ್ಟೆಯಲ್ಲಿ ವಹಿವಾಟು ಸ್ತಬ್ಧವಾಗಿತ್ತು. ನಗರ ಬಸ್ ಸಂಚಾರ ಸ್ಥಗಿತವಾಗಿದ್ದರೆ, ಆಟೋಗಳು ಕೆಲವೇ ಸಂಖ್ಯೆಯಲ್ಲಿ ಬೀದಿಗಿಳಿದಿದ್ದವು. ಖಾಸಗಿ ಬಸ್‌ಗಳೂ ಬೀದಿಗೆ ಬರಲಿಲ್ಲ. ಸೋಮವಾರ ಬಂದ್‌ಗೆ ಕರೆ ನೀಡಿದ್ದರಿಂದ, ಸಾಕಷ್ಟು ಜನರಿಗೆ ವಾರಾಂತ್ಯದ ಬಿಡುವು ಮುಂದುವರೆದಂತಾಗಿತ್ತು.

ಸರ್ಕಾರಿ ಕಚೇರಿಗಳು ಕಾರ್ಯ ನಿರ್ವಹಿಸಿದರೂ ಸಹ, ಬ್ಯಾಂಕಿಂಗ್ ಕಾರ್ಯ ನಿರ್ವಹಣೆಗೆ ಅಡ್ಡಿಯಾಗಿತ್ತು. ಹಲವಾರು ರಾಷ್ಟ್ರೀಯ, ಸಹಕಾರಿ ಬ್ಯಾಂಕುಗಳು ಕಾರ್ಯ ನಿರ್ವಹಿಸಲು ಸಾಧ್ಯವಾಗಲಿಲ್ಲ. ಆದರೆ, ಮುಖ್ಯ ರಸ್ತೆಗಳಿಂದ ದೂರವಿದ್ದ ಕೆಲ ಬ್ಯಾಂಕ್ ಶಾಖೆಗಳು ಕಾರ್ಯ ನಿರ್ವಹಣೆ ಮಾಡಲು ಸಾಧ್ಯವಾಯಿತು.

ಕೆ.ಆರ್. ಮಾರುಕಟ್ಟೆ, ಬಿನ್ನಿ ಕಂಪನಿ ರಸ್ತೆ, ಮಂಡಿಪೇಟೆ, ಅಶೋಕ ರಸ್ತೆ ಮುಂತಾದ ಪ್ರದೇಶಗಳಲ್ಲಿನ ಅಂಗಡಿಗಳು ಬಹುತೇಕ ಬಂದ್ ಆಗಿದ್ದು, ಒಂದೆರಡು ಅಂಗಡಿಗಳು ಮಾತ್ರ ತೆರೆದಿದ್ದು ಕಂಡು ಬಂತು.

ಹೋಟೆಲ್ ಸಂಘಟನೆಗಳು ಬಂದ್‌ಗೆ ನೈತಿಕ ಬೆಂಬಲ ಮಾತ್ರ ನೀಡುವುದಾಗಿ ಹೇಳಿದ್ದವು. ಆದರೂ, ಮುಖ್ಯ ರಸ್ತೆಗಳ ಬಹುತೇಕ ಹೋಟೆಲ್‌ಗಳು ಬಂದ್ ಆಗಿದ್ದು, ಸಣ್ಣ ಪುಟ್ಟ ಹೋಟೆಲ್‌ಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು.

### ಸರ್ಕಾರಿ ಸಾರಿಗೆ ನಂಬಿ ಅತಂತ್ರರಾದ ಪ್ರಯಾಣಿಕರು

ಸರ್ಕಾರಿ ಸಾರಿಗೆ ಬಸ್‌ಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ ಎಂದು ರಾಜ್ಯ ಸರ್ಕಾರ ತಿಳಿಸಿತ್ತು. ಇದನ್ನು ನಂಬಿಕೊಂಡು ಬಸ್ ನಿಲ್ದಾಣಕ್ಕೆ ಬಂದವರು ಅತಂತ್ರರಾಗಿದ್ದರು. ಬೆಳಿಗ್ಗೆ ಒಂದೆರಡು ಗಂಟೆ ಸಂಚರಿಸಿದ ಬಸ್‌ಗಳು, 10 ಗಂಟೆ ಸುಮಾರಿಗೆ ಪ್ರತಿಭಟನೆಯ ಬಿಸಿಗೆ ಸಿಲುಕಿ ಸ್ತಬ್ಧಗೊಂಡಿದ್ದವು.

ಮುಂದೆ ದಾರಿ ಕಾಣದೇ ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಕುಳಿತಿದ್ದ ಜನರು, ಮುಂದಿನ ಊರಿಗೆ ಹೋಗಲು ಬೈಪಾಸ್ ಬಳಿ ತೆರಳಬಹುದು. ಅಲ್ಲಿ ಬಸ್ ಸಂಚಾರವಿದೆ ಎಂಬ ಸಲಹೆಗಳನ್ನು ನೀಡುತ್ತಿದ್ದುದು ಕಂಡು ಬಂದಿತು.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಹುಬ್ಬಳ್ಳಿಯ ರೊನಾಲ್ಡ್ ಡಿ. ಹಳ್ಳಿ, ನಾನು (5ನೇ ಪುಟಕ್ಕೆ)

ಬೈಕ್‌ನಲ್ಲಿ ತೆರಳುತ್ತಿದ್ದ ಬಂದ್ ಪರ ಸಂಘಟನೆಗಳ ಕಾರ್ಯಕರ್ತರು, ಅಂಗಡಿಗಳನ್ನು ಮುಚ್ಚುವಂತೆ ಮನವಿ ಮಾಡಿಕೊಳ್ಳುತ್ತಿದ್ದುದು ಕಂಡುಬಂತು.

ಕೇಂದ್ರದ ನರೇಂದ್ರ ಮೋದಿ ಸರ್ಕಾರ ಹಾಗೂ ರಾಜ್ಯದ ಬಿ.ಎಸ್. ಯಡಿಯೂರಪ್ಪ ಸರ್ಕಾರಗಳು ಜಾರಿಗೆ ತಂದಿರುವ ಕಾನೂನುಗಳು ರೈತರು ಹಾಗೂ ಕಾರ್ಮಿಕರಿಗೆ ವಿರುದ್ಧವಾಗಿವೆ ಎಂದು ಹಲವೆಡೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿ ಧರಣಿ ನಡೆಸಿದರು.

ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ, (5ನೇ ಪುಟಕ್ಕೆ)

## ಕೇಂದ್ರದ ಕಾಯ್ದೆಗಳ ನಿಷ್ಕ್ರಿಯಕ್ಕೆ ಕಾಂಗ್ರೆಸ್ ರಾಜ್ಯಗಳ ಕ್ರಮ

ನವದೆಹಲಿ, ಸೆ. 28 – ಕೇಂದ್ರ ಸರ್ಕಾರ ಕೃಷಿ ವಲಯಕ್ಕೆ ಸಂಬಂಧಿಸಿದ ಕಾಯ್ದೆಗಳಿಗೆ ಇತ್ತೀಚೆಗೆ ತಂದಿರುವ ತಿದ್ದುಪಡಿಗಳನ್ನು ನಿಷ್ಕ್ರಿಯಗೊಳಿಸಲು ಕ್ರಮ ತೆಗೆದುಕೊಳ್ಳುವಂತೆ ತನ್ನ ಆಡಳಿತದ ರಾಜ್ಯಗಳಿಗೆ ಕಾಂಗ್ರೆಸ್ ತಿಳಿಸಿದೆ.

ಕೇಂದ್ರ ಸರ್ಕಾರ ತಂದಿರುವ ತಿದ್ದುಪಡಿಗಳನ್ನು ನಿಷ್ಕ್ರಿಯಗೊಳಿಸಲು ಸಂವಿಧಾನದ 254 (2) ವಿಧಿಯಡಿ ಇರುವ ಅವಕಾಶಗಳ ಸಾಧ್ಯತೆ ಬಳಸಿಕೊಳ್ಳುವಂತೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ (5ನೇ ಪುಟಕ್ಕೆ)

## ಎಪಿಎಂಸಿ ಮುಚ್ಚುವ ಪ್ರಶ್ನೆಯೇ ಇಲ್ಲ : ಸಿಎಂ



ಬೆಂಗಳೂರು, ಸೆ. 28 - ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಮುಚ್ಚುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ತಿಳಿಸಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ತುರ್ತು ಸುದ್ದಿಗೋಷ್ಠಿ ನಡೆಸಿದ ಮುಖ್ಯಮಂತ್ರಿಯವರು, ರೈತರು ತಾವು ಬೆಳೆದ ಬೆಳೆಯನ್ನು ತಮಗೆ ಇಷ್ಟ ಬಂದೆಡೆ ಮಾರಾಟ ಮಾಡುವ ಎಪಿಎಂಸಿ ಕಾಯ್ದೆಗೆ ಕಾನೂನು ತಿದ್ದುಪಡಿ ತರಲಾಗಿದೆ. ಇದರಿಂದ ರೈತರಿಗೆ ಲಾಭವಾಗಲಿದೆ. ಅವರು ದಲ್ಲಾಳಿಗಳ ಹಿಡಿತದಿಂದ ಬಿಡುಗಡೆಯಾಗಲಿದ್ದಾರೆ ಎಂದರು.

ಕಾಂಗ್ರೆಸ್ ನಾಯಕರ ಚಿತಾವಣೆಯಿಂದ ಕೆಲವು ರೈತರು ಬೀದಿಗೆ ಇಳಿದಿದ್ದಾರೆ. ಅವರು ಹೋರಾಟ ಮಾಡಲಿ. ಹೋರಾಟದ ನಂತರ ಸರ್ಕಾರದ ಜೊತೆ ಮಾತುಕತೆಗೆ ಬಂದರೆ ನಾನು ಸಿದ್ಧನಿದ್ದೇನೆ.

ಎಪಿಸಿಎಂಸಿ ಕಾಯ್ದೆ ಮತ್ತು ಭೂ ಸುಧಾರಣೆ ಕಾಯ್ದೆ ಬಗ್ಗೆ ರೈತರಲ್ಲಿ ತಪ್ಪು ಅಭಿಪ್ರಾಯ ಮೂಡಿದೆ. ಅವರಲ್ಲಿರುವ ಈ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲು ತಾವು ರಾಜ್ಯಾದ್ಯಂತ ಪ್ರವಾಸ ಕೈಗೊಂಡು, ರೈತರ ಬಳಿ ಸಂವಾದ ನಡೆಸುತ್ತೇನೆ ಎಂದರು.

ರೈತರು ತಾವು ಬೆಳೆದ ಬೆಳೆಯನ್ನು ಎಪಿಎಂಸಿ ತಂದಾದರೂ ಮಾರಾಟ ಮಾಡಬಹುದು, ಇಲ್ಲವೇ ತಮಗೆ ಎಲ್ಲಿ ಲಾಭ ದೊರೆಯುತ್ತದೆಯೋ ಅಲ್ಲಿ ಮಾರಾಟ ಮಾಡಲು ಈ ಕಾಯ್ದೆಯಿಂದ ಅವಕಾಶವಿದೆ ಎಂದು ತಿಳಿಸಿದರು.

ಆರು ತಿಂಗಳು, ಇಲ್ಲವೇ ಒಂದು ವರ್ಷ ನೋಡಲಿ. ಅವರಿಗೆ ಈ ಕಾಯ್ದೆಯಿಂದ ಅನ್ಯಾಯವಾಗುತ್ತದೆ ಎನ್ನುವುದಾದರೆ ಮತ್ತೆ ಕಾಯ್ದೆ ತಿದ್ದುಪಡಿ ತರಲು ಸಿದ್ಧನಿರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಇದೊಂದು ಐತಿಹಾಸಿಕ ನಿರ್ಧಾರ. 80 ರಿಂದ 90 ರಷ್ಟು ರೈತರು ಇದರ ಪರವಾಗಿದ್ದಾರೆ. ಈ ತಪ್ಪು ಅಭಿಪ್ರಾಯವನ್ನು ಹೋಗಲಾಡಿಸಲಾಗುವುದು ಎಂದರು.

ಭೂ ಸುಧಾರಣೆ ಕಾಯ್ದೆಯಿಂದ ರೈತರ ಒಂದಿಂಚು ಕೃಷಿ ಭೂಮಿಯು (5ನೇ ಪುಟಕ್ಕೆ)

## ಅರ್ಬನ್ ಬ್ಯಾಂಕಿಗೆ ಮುಪ್ಪಣ್ಣ ಉಪಾಧ್ಯಕ್ಷ



ದಾವಣಗೆರೆ, ಸೆ.28- ನಗರದ ದಾವಣಗೆರೆ ಅರ್ಬನ್ ಕೋ- ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ಉಪಾಧ್ಯಕ್ಷರಾಗಿ ಬ್ಯಾಂಕಿನ ಹಿರಿಯ ನಿರ್ದೇಶಕರಲ್ಲೊಬ್ಬರಾದ ವರ್ತಕ ಅಂದನೂರು ಮುಪ್ಪಣ್ಣ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಸಭಾಂಗಣದಲ್ಲಿ ಇಂದು ನಡೆದ ಬ್ಯಾಂಕಿನ ಆಡಳಿತ ಮಂಡಳಿಯ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ಮುಪ್ಪಣ್ಣ ಅವರ ಹೆಸರನ್ನು ಹಿರಿಯ ನಿರ್ದೇಶಕರೂ ಆದ ಜವಳಿ ಉದ್ಯಮಿ ಬಿ.ಸಿ. ಉಮಾಪತಿ ಅವರು ಸೂಚಿಸಿದ್ದರೆ, ಮತ್ತೋರ್ವ ನಿರ್ದೇಶಕರೂ ಆದ ವರ್ತಕ ಟಿ.ಎಸ್. ಜಯರುದ್ರೇಶ್ ಅವರು ಅನುಮೋದಿಸಿದರು.

ಈ ಸಂದರ್ಭದಲ್ಲಿ ನೂತನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಅವರನ್ನು ಅಭಿನಂದಿಸಿ ಮಾತನಾಡಿದ ನಿರ್ದೇಶಕ ದೇವರಮನಿ ಶಿವಕುಮಾರ್, ಯಾವುದೇ ಸಂಸ್ಥೆಗಳು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋದಾಗ ಮಾತ್ರ ಅಭಿವೃದ್ಧಿಯತ್ತ (7ನೇ ಪುಟಕ್ಕೆ)

## ಕೃಷಿ ಕಾಯ್ದೆ ತಿದ್ದುಪಡಿ ಪ್ರಶ್ನಿಸಿ ಕಾಂಗ್ರೆಸ್ ಸಂಸದ ಸುಪ್ರೀಂ ಮೊರೆ

ನವದೆಹಲಿ, ಸೆ. 28 – ನೂತನವಾಗಿ ಜಾರಿಗೆ ತರಲಾಗಿರುವ ಕೃಷಿ ಕಾಯ್ದೆಯ ಸಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಕೇರಳದ ಕಾಂಗ್ರೆಸ್ ಸಂಸದರೊಬ್ಬರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

ತ್ರಿಸ್ಸೂರು ಕ್ಷೇತ್ರದ ಸಂಸದ ಟಿ.ಎನ್. ಪ್ರತಾಪನ್ ಅವರು ಕೃಷಿ ಉತ್ಪನ್ನಗಳ ಬೆಲೆ ಖಾತ್ರಿ ಹಾಗೂ ಕೃಷಿ ಸೇವೆಗಳ ಕಾಯ್ದೆಗೆ ತಿದ್ದುಪಡಿ ತಂದಿರುವುದು ಸಂವಿಧಾನದ ಉಲ್ಲಂಘನೆ ಎಂದು ಅರ್ಜಿ ದಾಖಲಿಸಿದ್ದಾರೆ.

ನೂತನ ಕಾಯ್ದೆಯ ಪ್ರಕಾರ ಕೃಷಿ ಒಪ್ಪಂದಗಳಿಗೆ ರಾಷ್ಟ್ರೀಯ ಚೌಕಟ್ಟು ನೀಡಲಾಗುವುದು. ಇದರಿಂದಾಗಿ ಕೃಷಿಕರು ಕೃಷಿ ಉದ್ಯಮದಲ್ಲಿ ಹಾಗೂ ಆಹಾರ ಸಂಸ್ಕರಣಾ ಉದ್ಯಮದಲ್ಲಿ ತೊಡಗಬಹುದು. ಸಗಟು ರಫ್ತು ಹಾಗೂ ಚಿಲ್ಲರೆ ವ್ಯಾಪಾರದಲ್ಲಿ ಭಾಗಿಯಾಗಬಹುದು.

ವಕೀಲ ಜೇಮ್ಸ್ ಪಿ. ಥಾಮಸ್ ಮೂಲಕ ಅರ್ಜಿ ದಾಖಲಿಸಿರುವ ಪ್ರತಾಪನ್, ಭಾರತೀಯ ಕೃಷಿ ಹಿಡುವಳಿ ಚಿಕ್ಕದಾಗಿದ್ದು, ಮಳೆ ಹಾಗೂ ಅಸ್ಥಿರವಾಗಿರುವ ಮಾರುಕಟ್ಟೆ ಅವಲಂಬಿಸಿದೆ. ಇದರಿಂದಾಗಿ ಕೃಷಿ ಹೆಚ್ಚು ಅಪಾಯ ಹಾಗೂ ಅದಕ್ಷವಾಗಿದೆ ಎಂದು ತಿಳಿಸಿದ್ದಾರೆ.

ಹವಾಮಾನ ಅವಲಂಬಿಸಿರುವ ಕೃಷಿ ಸಮಸ್ಯೆಗಳನ್ನು ಹಣಕಾಸಿನ ಮೂಲಕ ಬಗೆಹರಿಸಲು ಸಾಧ್ಯವಿಲ್ಲ. ಇದರ ಬದಲು (6ನೇ ಪುಟಕ್ಕೆ)


### ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥ ಶಿವ ॥ ಶ್ರೀ ರೇವಣಸಿದ್ದೇಶ್ವರ ಪ್ರಸನ್ನ ॥

ದಾವಣಗೆರೆ ಎಂ.ಸಿ.ಸಿ 'ಬಿ' ಬ್ಲಾಕ್, 10ನೇ ಮೇನ್, 3ನೇ ಕ್ರಾಸ್ ವಾಸಿ
**ಶ್ರೀಮತಿ ಗುರುಸಿದ್ದಮ್ಮ ಬಾಳೆಹೊಲದ ಮರುಳಸಿದ್ದಪ್ಪ**
ಇವರು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ,

ದಿನಾಂಕ 09.09.2020ನೇ ಬುಧವಾರ ಸಂಜೆ 5.30 ಕ್ಕೆ ನನ್ನ ಪೂಜ್ಯ ಪತಿಯವರಾದ ಹಾಗೂ ದಿನಾಂಕ 26.09.2020ನೇ ಶನಿವಾರ ಮಧ್ಯಾಹ್ನ 12.45 ಕ್ಕೆ ನನ್ನ ಹಿರಿಯ ಪುತ್ರನಾದ



**ಶರಣ ಶ್ರೀ ಬಾಳೆಹೊಲದ ಮರುಳಸಿದ್ದಪ್ಪ**



**ಶರಣ ಶ್ರೀ ಬಾಳೆಹೊಲದ ಬಸವರಾಜ**

ಇವರುಗಳು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 30.09.2020ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ನಿವೃತ್ತ ನೌಕರರ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು :** ಶ್ರೀಮತಿ ಗುರುಸಿದ್ದಮ್ಮ ಬಾಳೆಹೊಲದ ಮರುಳಸಿದ್ದಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ಶ್ರೀಮತಿ ಜಿ.ಬಿ. ಸಾಕಮ್ಮ ಬಾಳೆಹೊಲದ ಬಸವರಾಜ
ಮತ್ತು ಬಿ.ಬಿ. ಸಿಂಧು, ಬಿ.ಬಿ. ಸಿದ್ದೇಶ್

ಮೆ॥ ಬಾಳೆಹೊಲದ ಮರುಳಸಿದ್ದಪ್ಪ ಅಂಡ್ ಸನ್ಸ್, ಎಪಿಎಂಸಿ ಯಾರ್ಡ್ 'ಡಿ' ಬ್ಲಾಕ್, ದಾವಣಗೆರೆ.
ಮೆ॥ ಬಾಳೆಹೊಲದ ಆಗ್ರೋ ಏಜೆನ್ಸೀಸ್, ಮಹಾವೀರ ರೋಡ್, ದಾವಣಗೆರೆ.
ಮೊಬೈಲ್ : 98441 54666, 98457 80707, 98449 87945

ವಿ.ಸೂ. : ಸಮಯದ ಅಭಾವದ ಕಾರಣ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಬೇಕಾಗಿ ನಮ್ಮ ಹಿತೈಷಿಗಳಿಗೆ, ಬಂಧು-ಮಿತ್ರರಿಗೆ ಕೋರುತ್ತೇವೆ.

### ಸಾರ್ವಜನಿಕರ ಪ್ರಕಟಣೆ

ದಾವಣಗೆರೆ ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. # 461, ಕುವೆಂಪು ರಸ್ತೆ, ದಾವಣಗೆರೆ ಸಂಸ್ಥೆಯ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು, (ಈಗ ಸರಕಾರವು ಸದರಿ ಬ್ಯಾಂಕಿಗೆ ಆಡಳಿತಾಧಿಕಾರಿಗಳನ್ನು ನೇಮಿಸಿರುತ್ತದೆ) ಬ್ಯಾಂಕಿನಲ್ಲಿ ಠೇವಣಿ ಮಾಡಿರುವ ಠೇವಣಿದಾರರಿಗೆ ಹಣ ಹಿಂದಿರುಗಿಸದೇ ವಂಚಿಸಿರುವ ಬಗ್ಗೆ ಈಗಾಗಲೇ ದಾವಣಗೆರೆ ನಗರದ ಕೆ.ಟಿ.ಜೆ ನಗರ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರು ಸಂಖ್ಯೆ : 0202/2019 ದಿನಾಂಕ: 22.11.2019 ರಂತೆ ದಾಖಲಾಗಿರುತ್ತದೆ. ಅದರಂತೆ ಮಾನ್ಯ ನ್ಯಾಯಾಲಯದಲ್ಲಿ ಬ್ಯಾಂಕ್ ನವರ ವಿರುದ್ಧ (Karnataka Protection of Interest of Depositors in Financial Establishment Act., 2004) (Karnataka Act. No. 30 of 2005) ಪ್ರಕಾರ ಕ್ರಿಮಿನಲ್ ಎಫ್.ಐ.ಆರ್. ದಾಖಲಾಗಿರುತ್ತದೆ. ಮತ್ತು ಹೆಚ್ಚಿನ ತನಿಖೆಗಾಗಿ ಮಾನ್ಯ COD, Bangalore ಇವರಿಗೆ ವಹಿಸಲಾಗಿದ್ದು ತನಿಖಾ ಹಂತದಲ್ಲಿರುತ್ತದೆ.

ಸದರಿ (KPID Act 2004) ರ ಕಾನೂನಿನಂತೆ ಠೇವಣಿದಾರರಿಗೆ ಹಣ ಹಿಂದಿರುಗಿಸುವ ಸಲುವಾಗಿ ಸದರಿ ಎಲ್ಲಾ ನಿರ್ದೇಶಕರುಗಳ ಚರ ಮತ್ತು ಸ್ಥಿರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಕಾನೂನಿನ ಪ್ರಕ್ರಿಯೆ ನಡೆಯುತ್ತಿರುವುದರಿಂದ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲೆ ಸೂಚಿಸಿದ ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಅವರ ಕುಟುಂಬ ಸದಸ್ಯರುಗಳಿಗೆ ಸೇರಿದ ಯಾವುದೇ ರೀತಿಯ ಸ್ಥಿರಾಸ್ತಿಗಳನ್ನು ಅವರಿಂದ ಖರೀದಿಸುವುದಾಗಲೀ, ದಾನ ಪತ್ರವಾಗಲೀ ಅಥವಾ ವ್ಯವಹರಿಸುವುದಾಗಲೀ ಮಾಡಬಾರದಾಗಿ ವಿನಂತಿಸಿಕೊಳ್ಳುತ್ತೇವೆ. ಹಾಗೊಮ್ಮ ಯಾರಾದರೂ ಆ ರೀತಿ ವ್ಯವಹರಿಸಿದರೆ ಮುಂದೆ ಕಾನೂನಿನ ತೊಂದರೆಗಳನ್ನು ಎದುರಿಸಬೇಕಾಗಬಹುದು. ಯಾರೂ ಮುಂದೆ ಕಾನೂನಿನ ತೊಂದರೆಯಲ್ಲಿ ಸಿಲುಕಿಕೊಳ್ಳಬಾರದೆಂಬ ಸದುದ್ದೇಶದಿಂದ ಈ ಪ್ರಕಟಣೆಯನ್ನು ನೀಡುತ್ತಿದ್ದೇವೆ.

ಸಹಿ/- (ಎ.ಎಸ್. ಪ್ರಭಾಕರ್)
ಅಧ್ಯಕ್ಷರು, ಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.
ಠೇವಣಿದಾರರ ವೇದಿಕೆ, ದಾವಣಗೆರೆ.

### ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ
ತಾಂಡವಪುರ, ಮೈಸೂರು.


**ಉಚಿತ ಡಿಪ್ಲೋಮಾ ಸಿ.ಇ.ಟಿ. ತರಬೇತಿ**

ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ನುರಿತ ಶಿಕ್ಷಕರಿಂದ ಸ್ಥಾಪಿಸಲ್ಪಟ್ಟ 'ಮಹಾರಾಜ ಶಿಕ್ಷಣ ಸಂಸ್ಥೆ'ಯ ಅಂಗ ಸಂಸ್ಥೆಯಾದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ತಾಂಡವಪುರ, ಮೈಸೂರು ಗ್ರಾಮೀಣ ಪ್ರದೇಶದ ಪ್ರತಿಭೆಗಳಿಗೆ ಉತ್ಕೃಷ್ಟ ತಾಂತ್ರಿಕ ಶಿಕ್ಷಣ ನೀಡುವ ಉದ್ದೇಶದಿಂದ 2016 ರಲ್ಲಿ ಸ್ಥಾಪನೆಗೊಂಡಿದೆ. ಸಂಸ್ಥೆಯಲ್ಲಿ ಸಿವಿಲ್, ಕಂಪ್ಯೂಟರ್ ಸೈನ್ಸ್, ಇನ್‌ಫರ್ಮೇಷನ್ ಸೈನ್ಸ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಮತ್ತು ಮೆಕ್ಯಾನಿಕಲ್ ವಿಭಾಗಗಳಿದ್ದು ಪ್ರಸಕ್ತ ಸಾಲಿನಲ್ಲಿ ಶೇ. 67 ವಿದ್ಯಾರ್ಥಿಗಳು ಕ್ಯಾಂಪಸ್ ಸಂದರ್ಶನದ ಮೂಲಕ ಉದ್ಯೋಗಾವಕಾಶ ಪಡೆದಿದ್ದಾರೆ. ಈ ಸಾಲಿನ ಅಂತಿಮ ವರ್ಷದ ಸಿವಿಲ್ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮವಾದ ಫಲಿತಾಂಶ ನೀಡಿದ್ದು, 59 ವಿದ್ಯಾರ್ಥಿಗಳು distinction, 8 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ ಒಬ್ಬ ವಿದ್ಯಾರ್ಥಿ ದ್ವಿತೀಯ ದರ್ಜೆ ಪಡೆದಿದ್ದಾರೆ.

ಸಂಸ್ಥೆಯು ಎರಡನೇ ವರ್ಷದ / ಮೂರನೇ ಸೆಮಿಸ್ಟರ್ ಲ್ಯಾಟರಲ್ ಇಂಜಿನಿಯರಿಂಗ್ ಪ್ರವೇಶಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿಗಳಿಗೆ ಉಚಿತ ಡಿ.ಸಿ.ಇ.ಟಿ. (Diploma Common Entrance Test) ತರಬೇತಿಯನ್ನು ಕಳೆದೆರಡು ವರ್ಷಗಳಿಂದ ನಡೆಸುತ್ತಾ ಬಂದಿದೆ. ಈ ಸಾಲಿನ ತರಬೇತಿಗಳು ಸೆ.30 ರಿಂದ ಅ.8 ರ ವರೆಗೆ ಉಚಿತವಾಗಿ ನಡೆಯಲಿದ್ದು, ಕೋವಿಡ್-19ರಿಂದ ತೊಂದರೆಗೆ ಒಳಗಾಗಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಆನ್‌ಲೈನ್ ಮುಖಾಂತರ ಸಹ ಸುಮಾರು 30 ಪ್ರಾಧ್ಯಾಪಕರು ವಿವಿಧ ವಿಷಯಗಳ ಮೇಲೆ ತರಬೇತಿ ನೀಡಲಿದ್ದಾರೆ. ತರಬೇತಿಗಳಿಗೆ ನೋಂದಾಯಿಸಿಕೊಂಡ ವಿದ್ಯಾರ್ಥಿಗಳು ಸಂಸ್ಥೆಯ ವೆಬ್‌ಸೈಟ್ www.mitt.edu.in ಅಲ್ಲಿ ತರಬೇತಿ ಪಠ್ಯಗಳನ್ನು ಉಚಿತವಾಗಿ ಪಡೆಯಬಹುದು. ತರಬೇತಿಯಲ್ಲಿ ಭಾಗವಹಿಸಲು ಇಚ್ಚಿಸುವವರು ಹೆಚ್ಚಿನ ಮಾಹಿತಿಗಾಗಿ ಪ್ರೊ. ಪ್ರದೀಪ್ ಎನ್ (8310854887) ಅವರನ್ನು ಸಂಪರ್ಕಿಸಬಹುದು.

ಡಿ.ಸಿ.ಇ.ಟಿ. ಪರೀಕ್ಷೆ ಮುಗಿಯುತ್ತಿದ್ದಂತೆಯೇ ಸಂಸ್ಥೆಯ ಪ್ರವೇಶ ಪ್ರಕ್ರಿಯೆ ಪ್ರಾರಂಭವಾಗಲಿದ್ದು, ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರಾದ ಡಾ. ವೈ.ಟಿ. ಕೃಷ್ಣೇಗೌಡ (ಮೊ.ಸಂ. 9620228002) ಹಾಗು ಜಂಟಿ ಕಾರ್ಯದರ್ಶಿಗಳಾದ ಡಾ. ಹೆಚ್. ಕೆ. ಚೇತನ್ (ಮೊ. ಸಂ 9620228009) ಅವರನ್ನು ಸಂಪರ್ಕಿಸಬಹುದು.

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 26.9.2020ರಂದು ನಿಧನರಾದ ದಾವಣಗೆರೆ ಜಿಲ್ಲಾ ರಸಗೊಬ್ಬರ, ಬಿತ್ತನೆ ಬೀಜ, ಕೀಟನಾಶಕ ಮಾರಾಟಗಾರರ ಸಂಘದ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳೂ, ಹಾಲಿ ಉಪಾಧ್ಯಕ್ಷರು, ಶಿವ ಸಹಕಾರಿ ಬ್ಯಾಂಕಿನ ಮಾಜಿ ನಿರ್ದೇಶಕರು, ಸರಳ ಸಜ್ಜನಿಕೆಯ - ಆತ್ಮೀಯ ಸ್ನೇಹಿತರಾದ
**ಬಾಳೆಹೊಲದ ಆಗ್ರೋ ಏಜೆನ್ಸೀಸ್ ಮಾಲೀಕರಾದ**
**ಶ್ರೀ ಬಾಳೆಹೊಲದ ಬಸವರಾಜ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ದಯಾಮಯನಾದ ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಎಸ್.ಜೆ. ಶ್ರೀಧರ್ & ಪ್ರಮೋದ್ ಎಸ್.
  ಶ್ರೀನಿಧಿ ಆಗ್ರೋ ಕೆಮಿಕಲ್ಸ್, ದಾವಣಗೆರೆ.
- ಹೆಚ್.ಪಿ. ಹನುಮಂತಪ್ಪ & ಡಿ.ಕೆ. ಹನುಮಂತ ರಾವ್
  ಆಂಜನೇಯ ಆಗ್ರೋ ಡಿಸ್ಟ್ರಿಬ್ಯೂಟರ್ಸ್, ದಾವಣಗೆರೆ.
- ಬಿರುಲಾಲ್, ಆಶಾಪುರಿ ಫರ್ಟಿಲೈಜರ್ಸ್, ದಾವಣಗೆರೆ.

# ಹರಪನಹಳ್ಳಿಯಲ್ಲಿ ಬಂದ್ ಯಶಸ್ವಿ



ಹರಪನಹಳ್ಳಿ, ಸೆ.28 - ಕೃಷಿ ಮಸೂದೆ, ಭೂ ಸುಧಾರಣೆ ಹಾಗೂ ಎಪಿಎಂಸಿ ತಿದ್ದುಪಡಿ ಸೇರಿದಂತೆ ರೈತ ಹಾಗೂ ಕಾರ್ಮಿಕ ಕಾಯ್ದೆಗಳ ತಿದ್ದುಪಡಿ ವಿರೋಧಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕ್ರಮ ಖಂಡಿಸಿ ರೈತ, ಕಾರ್ಮಿಕ, ದಲಿತ ಸಂಘಟನೆಗಳ ಐಕ್ಯ ಹೋರಾಟ ಸಮಿತಿ ಕರೆ ನೀಡಿರುವ ಕರ್ನಾಟಕ ಬಂದ್ ಸೋಮವಾರ ಬಹುತೇಕ ಯಶಸ್ವಿಯಾಯಿತು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಕೋಡಿಹಳ್ಳಿ ಚಂದ್ರಶೇಖರ್ ಬಣ), ಅಖಿಲ ಭಾರತ ಕಿಸಾನ್ ಸಭಾ, ಆಲ್ ಇಂಡಿಯಾ ಕಿಸಾನ್ ಮಹಾಸಭಾ, ಕರ್ನಾಟಕ ರಾಜ್ಯ ಪ್ರಾಂತ್ಯ ರೈತ ಸಂಘ, ಅಖಿಲ ಭಾರತ ಯುವಜನ ಫೆಡರೇಷನ್, ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ ಬಣ), ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ ಬಣ), ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ), ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ಕಾರ್ಮಿಕರ ಸೇವಾ ಸಂಘ, ಕರ್ನಾಟಕ ರಾಜ್ಯ ದೇವದಾಸಿ ಮಹಿಳಾ ವಿಮೋಚನಾ ಸಂಘ, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಆಲ್ ಇಂಡಿಯಾ ಸ್ಟೂಡೆಂಟ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಈರುಳ್ಳಿ ಬೆಳೆಗಾರರ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ (ಪುಟ್ಟಣ್ಣಯ್ಯ ಬಣ)ಗಳು ಸೇರಿದಂತೆ ತಾಲ್ಲೂಕಿನ ವಿವಿಧ ಸಂಘಟನೆಗಳು ಒಟ್ಟುಗೂಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು. ಪಟ್ಟಣದಲ್ಲಿ ಬೆಳಗಿನಿಂದಲೇ ಬಹುತೇಕ ಅಂಗಡಿ ಮುಂಗಟ್ಟುಗಳು ಮುಚ್ಚಲ್ಪಟ್ಟಿದ್ದವು. ರಸ್ತೆಯಲ್ಲಿ ವಾಹನಗಳ ಸಂಚಾರ ವಿರಳವಾಗಿತ್ತು.

ತಹಶೀಲ್ದಾರ್ ಅನಿಲ್ ಕುಮಾರ್ ಅವರು ಇಜಾರಿ ಶಿರಸಪ್ಪ ವೃತ್ತಕ್ಕೆ ಆಗಮಿಸಿ ಮನವಿ ಪತ್ರ ಸ್ವೀಕರಿಸಿದರು.

ಈ ವೇಳೆ ರಾಜ್ಯ ಈರುಳ್ಳಿ ಬೆಳೆಗಾರರ ಒಕ್ಕೂಟದ ಅಧ್ಯಕ್ಷೆ ಎಂ.ಪಿ.ವೀಣಾ ಮಹಂತೇಶ ಮಾತನಾಡಿದರು.

ನೀಲಗುಂದ ಜಿಲ್ಲಾ ಪಂಚಾಯಿತಿ ಸದಸ್ಯ ಎಚ್.ಬಿ. ಪರಶುರಾಮಪ್ಪ, ವಿವಿಧ ಸಂಘಟನೆಗಳ ಮುಖಂಡರಾದ ಹೊಸಹಳ್ಳಿ ಮಲ್ಲೇಶ್, ಇದ್ಲಿ ರಾಮಪ್ಪ, ಗುಡಿಹಳ್ಳಿ ಹಾಲೇಶ್, ಹೆಚ್.ಎಂ.ಸಂತೋಷ್, ಪುರಸಭಾ ಸದಸ್ಯ ಜಾಕೀರ್ ಸರ್ಖಾವಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಮುತ್ತಿಗೆ ಸಾಬಳ್ಳಿ ಜಂಬಣ್ಣ, ಟಿ.ವಿ.ರೇಣುಕಮ್ಮ, ಲಲಿತಾಬಾಯಿ, ದ್ಯಾಮಜ್ಜಿ ಹನುಮಂತಪ್ಪ, ಹೆಚ್.ವೆಂಕಟೇಶ್, ಹುಲಿಕಟ್ಟಿ ರಾಜಪ್ಪ, ರಹಮತ್ ,ರಮೇಶ್ ನಾಯ್ಕ್, ಸಂದೇರ ಪರಶುರಾಮ, ಶೃಂಗಾರತೋಟ ಬಸವರಾಜ, ಶ್ರೀಕಾಂತ, ಪುರಸಭೆ ಮಾಜಿ ಅಧ್ಯಕ್ಷೆ ಕವಿತ ವಾಗೀಶ, ಬಳಿಗಾನೂರು ಕರೀಮ್ ಸಾಬ್, ಸತ್ತೂರು ಮಹದೇವಪ್ಪ, ಮಾದಾಪುರ ನೀಲಮ್ಮ ಶೃತಿ. ಭಾಗ್ಯಮ್ಮ. ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಶಿವಕುಮಾರ ಶ್ರೀಗಳು ಶರಣರ ಸಂಗಮವಾಗಿದ್ದರು

## ಸಿರಿಗೆರೆ ಹಿರಿಯ ಜಗದ್ಗುರುಗಳ 28ನೇ ಶ್ರದ್ಧಾಂಜಲಿ ಸಮಾರಂಭದಲ್ಲಿ ಗೊ.ರು.ಚ.



ದಾವಣಗೆರೆ, ಸೆ. 28 - ತರಳಬಾಳು ಹಿರಿಯ ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ಸಕಲ ಶರಣರ ಸಂಗಮವಾಗಿದ್ದರು. 12ನೇ ಶತಮಾನದ ಶಿವಶರಣರ ಪ್ರತೀಕವಾಗಿದ್ದರು ಎಂದು ಜಾನಪದ ತಜ್ಞ ಹಾಗೂ ಸಾಹಿತಿ ಗೊ.ರು. ಚನ್ನಬಸಪ್ಪ ಬಣ್ಣಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಆಯೋಜಿಸಲಾಗಿದ್ದ ತರಳಬಾಳು ಬೃಹನ್ಮಠದ ಹಿರಿಯ ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ 28ನೇ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು. ಬೆಂಗಳೂರಿನ ತರಳಬಾಳು ಕೇಂದ್ರದ ಸ್ವಾಗತ ಸಮಿತಿ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬಸವಣ್ಣನವರ ನುಡಿ ನಿಷ್ಠೆ, ಅಲ್ಲಮ ಪ್ರಭುದೇವರ ಆತ್ಮಜ್ಞಾನ, ಅಕ್ಕಮಹಾದೇವಿ ಅವರ ಸ್ಥೈರಣೆ, ಮರುಳಸಿದ್ಧ ದೇವರ ಪ್ರಸಾದ, ಮುಕ್ತಾಯಕ್ಕನವರ ಅನುಭಾವ ಯೋಗ, ಮಡಿವಾಳ ಮಾಚಯ್ಯನವರ ನಿಷ್ಠೂರತೆಯಂತಹ ಗುಣಗಳನ್ನು ಶ್ರೀಗಳಲ್ಲಿ ಕಾಣಬಹುದಿತ್ತು. ಅವರು ಶಿವಶರಣರ ಪ್ರತೀಕವಾಗಿದ್ದರು ಎಂದರು.

ಹಿರಿಯ ಜಗದ್ಗುರುಗಳಿಗೆ ಕಾಠಿಣ್ಯವೂ ಇತ್ತು ಕಾರುಣ್ಯವೂ ಇತ್ತು, ಶಿಕ್ಷೆ ಹಾಗೂ ಶಿಕ್ಷಣದ ವ್ಯತ್ಯಾಸ ತಿಳಿದಿತ್ತು. ಪಂಥವೂ ಗೊತ್ತಿತ್ತು ಪಂಚಾಯ್ತಿಯೂ ಗೊತ್ತಿತ್ತು ಎಂದ ಗೊ.ರು.ಚ., ಹಿರಿಯ ಶ್ರೀಗಳು ಮಾತಿಗಿಂತ ಕೃತಿಗೆ ಮಹತ್ವ ಕೊಟ್ಟವರು. ಕಾಲದ ಸವಾಲುಗಳನ್ನು ಸಂಕಲ್ಪದಿಂದ ಎದುರಿಸಿದ್ದರು ಎಂದರು.


ಸಿರಿಗೆರೆಯಲ್ಲಿ ಶ್ರೀಗಳು ಮೊದಲು ಶಾಲೆ ಸ್ಥಾಪಿಸಿದ್ದು ಸ್ಮರಣೀಯವಾಗಿದೆ. ನಂತರದಲ್ಲಿ ಅವರು ನೂರಾರು ಶಾಲೆಗಳನ್ನು ಕಟ್ಟಿ ಸಹಸ್ರ ಸಹಸ್ರ ಮಕ್ಕಳಿಗೆ ಜೀವನ ಕಟ್ಟಿ ಕೊಟ್ಟರು. ಅವರು ಆರಂಭಿಸಿದ ಅನುಭವ ಮಂಟಪ ನಾಡಿನ ಹೆಗ್ಗುರುತಾಗಿದೆ ಎಂದರು.

ಶ್ರೀಗಳು ನಡೆದದ್ದು ಹೂವಿನ ಹಾದಿಯಲ್ಲ, ಕಲ್ಲು - ಮುಳ್ಳಿನ ಹಾದಿಯಾಗಿತ್ತು. ಆ ಹಾದಿಯಲ್ಲಿ ನಡೆದ ಶ್ರೀಗಳು, ಕಲ್ಲು - ಮುಳ್ಳು ಸರಿಸಿ ಸಮಾಜದ ಹಾದಿ ಸುಗಮಗೊಳಿಸಿದರು ಎಂದು ಹೇಳಿದರು.

ಶ್ರೀಗಳು ಬರೆದಿರುವ 'ಆತ್ಮ ನಿವೇದನೆ' ಕೃತಿಯು ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯಾಗಿದೆ. ಅಂತರಂಗ ಶೋಧನೆಯ ಆಸಕ್ತರು, ಧರ್ಮಗುರು ಆಗ ಬಯಸುವವರು ಹಾಗೂ ಆಗಿರುವವರು ಅದನ್ನು ತಪ್ಪದೇ ಓದಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಶ್ರಾಂತ ಕುಲಪತಿ ಡಾ. ಕೆ. ಸಿದ್ದಪ್ಪ, ಧಾರ್ಮಿಕ ನಡೆ ನುಡಿ ಪಾಲಿಸಿ ಬದುಕಿನ ಎಲ್ಲ ಹಂತಗಳಲ್ಲಿ ಅಭಿವೃದ್ಧಿ ಸಾಧಿಸಬೇಕು ಎಂಬ ಅಚಲ ಗುರಿ ಶಿವಕುಮಾರ ಶ್ರೀಗಳದ್ದಾಗಿತ್ತು. ಸಮಾಜದಲ್ಲಿ ಹಲವಾರು ಹೊಸ ರೀತಿಯ ನವ ನವೀನ ಸುಧಾರಣೆಗಳನ್ನು ಅವರು ತಂದರು ಎಂದು ಹೇಳಿದರು.

### ದ್ರೋಣರ ಶಿಷ್ಯ ದ್ರೋಹ ಏಕೆ ಪರಿಗಣಿಸಲಿಲ್ಲ?



ಗುರು ದ್ರೋಹ ಪಾಪ ಎಂಬ ಭಾವನೆ ಇದೆ. ಇದೇ ಭಾವನೆಯಿಂದ ದ್ರೋಣಾಚಾರ್ಯರು ಕೇಳಿದಾಗ ಏಕಲವ್ಯ ಹೆಬ್ಬೆರಳು ಕೊಡಬೇಕಾಯಿತು. ಆದರೆ, ಏಕಲವ್ಯ ಹೆಬ್ಬೆರಳು ಕತ್ತರಿಸುವಾಗ ಅದನ್ನು ನೋಡಿಯೂ ಸುಮ್ಮನಿದ್ದ ದ್ರೋಣಾಚಾರ್ಯರದ್ದು ಶಿಷ್ಯ ದ್ರೋಹ ಅಲ್ಲವೇ? ಈ ಶಿಷ್ಯ ದ್ರೋಹವನ್ನು ಏಕೆ ಪರಿಗಣಿಸಲಿಲ್ಲ?

ಈ ಪ್ರಶ್ನೆಯನ್ನು ಹಿರಿಯ ಶ್ರೀಗಳಾದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಕೇಳಿದ್ದರು ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದ್ದಾರೆ.

ಮಹಾಭಾರತ ಹಾಗೂ ರಾಮಾಯಣ ಧರ್ಮಗ್ರಂಥಗಳು ಪ್ರಶ್ನಾತೀತ ಎಂಬ ಭಾವನೆ ಇದ್ದ ಸಂದರ್ಭದಲ್ಲಿ ಅವುಗಳನ್ನು ಚಿಕಿತ್ಸಕ ದೃಷ್ಟಿಯಿಂದ ಹಿರಿಯ ಜಗದ್ಗುರು ನೋಡಿ ಪ್ರಶ್ನಿಸುತ್ತಿದ್ದರು ಎಂದು ಗೊ.ರು.ಚ. ಹೇಳಿದರು.

ಸಾವಿರಾರು ವರ್ಷಗಳ ಹಿಂದೆ ಭಾರತ ವಿಶ್ವ ಗುರು ಆಗಿತ್ತು. ವಿಶ್ವಬಂಧು ಮರುಳಸಿದ್ಧರು, ಜಗಜ್ಯೋತಿ ಬಸವಣ್ಣ, ರಾಮಕೃಷ್ಣ ಪರಮಹಂಸ, ವಿವೇಕಾನಂದ ಇವರೆಲ್ಲರೂ ಧರ್ಮ, ಸಂಸ್ಕಾರ ಮಾರ್ಗದರ್ಶನ ಮಾಡುವುದಷ್ಟೇ ಅಲ್ಲದೇ ಬದುಕಿ ತೋರಿಸಿ ಸಾಕ್ಷಾತ್ಕಾರವಾಗುವಂತೆ ಮಾಡಿದವರು. ಇತ್ತೀಚಿನ ದಿನಗಳಲ್ಲಿ ಹಿರಿಯ ಜಗದ್ಗುರುಗಳು ಮಾರ್ಗದರ್ಶನ ಹಾಗೂ ಸಾಕ್ಷಾತ್ಕಾರ ಮಾಡಿದರು ಎಂದು ತಿಳಿಸಿದರು.

ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಇದ್ದ ಅಧ್ಯಾತ್ಮಿಕ ಭಾವವನ್ನು ಮರೆತಿದ್ದರಿಂದ ನಾವೀಗ ಹಿಂದೆ ಬಿದ್ದಿದ್ದೇವೆ. ಅಧ್ಯಾತ್ಮ ಭಾವ ಮರೆತ ಕಾರಣದಿಂದ ಬೆಂಗಳೂರಿನಲ್ಲಿ ನಡೆದ ಗಲಭೆಗಳಂತಹ ಘಟನೆಗಳನ್ನು ಕಾಣುವಂತಾಗಿದೆ. ನಾವೀಗ ಮತ್ತೆ ಅಧ್ಯಾತ್ಮಿಕ ಭಾವ ಹೊಂದಬೇಕಿದೆ ಎಂದು ಡಾ. ಸಿದ್ದಪ್ಪ ತಿಳಿಸಿದರು.

ಕೊರೊನಾ ಕಾರಣದಿಂದ ಇತ್ತೀಚಿನ ತಿಂಗಳಲ್ಲಿ ಸಭೆ - ಸಮಾರಂಭಗಳನ್ನು ನಡೆಸಿರಲಿಲ್ಲ. ಇನ್ನು ಮುಂದೆ ಆನ್‌ಲೈನ್ ಮೂಲಕ ಕಾಲ ಕಾಲಕ್ಕೆ ಸಭೆ, ಸಮಾರಂಭಗಳನ್ನು ನಡೆಸಲು ತರಳಬಾಳು ಕೇಂದ್ರ ನಿರ್ಧರಿಸಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ ಮತ್ತಿತರರು ಆನ್‌ಲೈನ್ ಮೂಲಕ ಭಾಗವಹಿಸಿದ್ದರು.

ತರಳಬಾಳು ಕೇಂದ್ರದ ಸಲಹಾ ಸಮಿತಿಯ ಸದಸ್ಯ ಕೊಂಡಜ್ಜಿ ಷಣ್ಮುಖಪ್ಪ ವಂದಿಸಿದರು.

# ಸಿನಿಮಾ ಸಿರಿಯಿಂದ ಸಂಗೀತ ಸಾಮ್ರಾಟನಿಗೆ ಶ್ರದ್ಧಾಂಜಲಿ



ದಾವಣಗೆರೆ, ಸೆ.28- ನಗರದ ಸಿನಿಮಾ ಸಿರಿ ವತಿಯಿಂದ ಸಂಗೀತ ಸಾಮ್ರಾಟ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಎಸ್.ಪಿ. ಅವರು ಸಂಗೀತ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ಸ್ಮರಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ಟಿ.ಎಂ. ಪಂಚಾಕ್ಷರಯ್ಯ, ಕಾರ್ಯದರ್ಶಿ ಎಂ.ಜಿ. ಜಗದೀಶ್, ಸುರಭಿ ಎಸ್.ಶಿವಮೂರ್ತಿ, ಸಾಲಿಗ್ರಾಮ ಗಣೇಶ್ ಶೆಣೈ, ಹೆಚ್.ವಿ.ಮಂಜುನಾಥ ಸ್ವಾಮಿ, ಈಶ್ವರಿ ಶಿವಕುಮಾರ್, ಗಾಂಧಿ ಮ್ಯೂಸಿಕ್ ಮಲ್ಲಿಕಾರ್ಜುನ್, ಕಣ್‌ಕುಪ್ಪಿ ಮುರುಗೇಶಪ್ಪ, ನಾಗರಾಜ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# 'ಕನ್ನಡ ಕವಿ - ಕಾವ್ಯ - ದರ್ಶನಂ' ವೆಬಿನಾರ್

ದಾವಣಗೆರೆ, ಸೆ.28- ನಗರದ 'ಗ್ರಂಥ ಸರಸ್ವತಿ ಪ್ರತಿಭಾರಂಗ'ದ ವತಿಯಿಂದ ಪ್ರೌಢಶಾಲಾ ಕನ್ನಡ ಶಿಕ್ಷಕರಿಗಾಗಿ 'ಕನ್ನಡ ಕವಿ-ಕಾವ್ಯ-ದರ್ಶನಂ' ವೆಬಿನಾರ್ ಕಾರ್ಯಕ್ರಮ ಹಮ್ಮಿಕೊಂಡಿದೆ. ರಾಜ್ಯ ಪ್ರೌಢಶಾಲಾ ಕನ್ನಡ ಅಧ್ಯಾಪಕರಿಂದ ಕನ್ನಡ ಪ್ರಥಮ, ದ್ವಿತೀಯ ಹಾಗೂ ತೃತೀಯ ಭಾಷಾ ಪಠ್ಯ ಪುಸ್ತಕಗಳ ಪದ್ಯ ಭಾಗದಲ್ಲಿ ಬರುವ ಕಾವ್ಯಗಳ ವಾಚನ, ಕವಿ ಪರಿಚಯ, ಆಶಯ ಭಾವವನ್ನು ವಾಚನ ಮಾಡಲಾಗುವುದು.

ಈ ಪ್ರಯೋಗಶೀಲ ಕಾರ್ಯ ಯೋಜನೆಯಲ್ಲಿ ಪಾಲ್ಗೊಳ್ಳಲು ರಾಜ್ಯದ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕ-ಶಿಕ್ಷಕಿಯರನ್ನು ಆಹ್ವಾನಿಸಲಾಗಿದೆ.

ಆಸಕ್ತರು ತಮ್ಮ ಹೆಸರು, ಶಾಲಾ ವಿಳಾಸ, ಇ-ಮೇಲ್, ಬೋಧಿಸುವ (ಪ್ರ/ದ್ವಿ/ತೃ) ಭಾಷಾ ಪಠ್ಯ ಹಾಗೂ ವಾಟ್ಸಾಪ್ ನಂಬರ್ ಸಹಿತ ಗ್ರೂಪ್‌ಗೆ ಸೇರ್ಪಡೆಯಾಗ ಬೇಕು. ನಂತರ ಪರಸ್ಪರರೊಡನೆ ಚರ್ಚಿಸಿ ಹೊಂದಾಣಿಕೆಯಿಂದ ತಾವು ವಾಚಿಸಲು ಪದ್ಯಭಾಗವನ್ನು ನಿಗದಿ ಮಾಡಿಕೊಂಡು 'ಗೂಗಲ್ ಮೀಟ್' ವೆಬಿನಾರ್ ವೀಡಿಯೋ ನೇರ ಪ್ರಸಾರ ಕಾರ್ಯಕ್ರಮದಲ್ಲಿ ವಾಚಿಸಬೇಕು. ಶಿಕ್ಷಣ ಸಚಿವ ಸುರೇಶ್‌ಕುಮಾರ್ ಅವರನ್ನು ಉದ್ಘಾಟನೆಗೆ ಆಹ್ವಾನಿಸಲಾಗುವುದು. ಮಠಾಧೀಶರು, ಕವಿಗಳು, ಶಿಕ್ಷಣ ತಜ್ಞರು, ಶಿಕ್ಷಣಾಧಿಕಾರಿಗಳು ವೆಬಿನಾರ್‌ನಲ್ಲಿ ಭಾಗವಹಿಸಲಿದ್ದಾರೆ.

http://chat.whatsapp.com/GctZZY-iqosBEH9rDR9dO0Q ಈ ವಾಟ್ಸಾಪ್ ಲಿಂಕ್ ಬಳಸಿ ಗ್ರೂಪ್‌ಗೆ ಸೇರ್ಪಡೆಯಾಗ ಬೇಕು. ಅಕ್ಟೋಬರ್ 4 ರ ಸಂಜೆಯೊಳಗೆ ಹೆಸರು ನೋಂದಾಯಿಸಬೇಕು. ಅಕ್ಟೋಬರ್ 11ರ ಭಾನುವಾರ ಬೆಳಿಗ್ಗೆ 10.30 ಕ್ಕೆ ಕಾರ್ಯಕ್ರಮ ಪ್ರಸಾರವಾಗಲಿದೆ ಎಂದು ಗ್ರಂಥ ಸರಸ್ವತಿ ಪ್ರತಿಭಾ ರಂಗದ ಅಧ್ಯಕ್ಷ ಆರ್. ಶಿವಕುಮಾರ ಸ್ವಾಮಿ ಕುರ್ಕಿ (89709 48221) ತಿಳಿಸಿದ್ದಾರೆ.

# ನಗರದಲ್ಲಿ ಇಂದು ಕಾಂಗ್ರೆಸ್‌ನ 'ಆರೋಗ್ಯ ಹಸ್ತ' ಕಾರ್ಯಕ್ರಮ

ಜಿಲ್ಲಾ ಕಾಂಗ್ರೆಸ್ ಪಕ್ಷದ ವತಿಯಿಂದ ಇಂದು ಏರ್ಪಡಿಸಿರುವ 'ಆರೋಗ್ಯ ಹಸ್ತ' ಕಾರ್ಯಕ್ರಮಕ್ಕೆ ಮಾಜಿ ಸಂಸದರುಗಳಾದ ಆರ್. ಧ್ರುವನಾರಾಯಣ ಮತ್ತು ಚಂದ್ರಪ್ಪ ಅವರುಗಳು ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ತಿಳಿಸಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಕಲಾ ಪ್ರಕಾಶ ವೃಂದ (ದಾವಣಗೆರೆ ಅರ್ಬನ್ ಬ್ಯಾಂಕ್ ಸಮುದಾಯ ಭವನ) ದ ಭವನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್, ಎಸ್. ರಾಮಪ್ಪ, ವಡ್ನಾಳ್ ರಾಜಣ್ಣ, ಡಿ.ಜಿ. ಶಾಂತನಗೌಡ, ಹೆಚ್.ಪಿ. ರಾಜೇಶ್, ಅಬ್ದುಲ್ ಜಬ್ಬಾರ್, ಕೆ.ಎಸ್. ಬಸವಂತಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದರು.


ದಾಮ್‌ಕೋಸ್ ಮಾಜಿ ಅಧ್ಯಕ್ಷರಾದ
ಎಂ.ಎಸ್.ಬಸವರಾಜಪ್ಪನವರಿಗೆ ಮಾತೃ ವಿಯೋಗ



ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿ ಗ್ರಾಮದ ವಾಸಿ,
ದಾಮ್‌ಕೋಸ್ ಮಾಜಿ ಅಧ್ಯಕ್ಷರಾದ
ಎಂ.ಎಸ್.ಬಸವರಾಜಪ್ಪನವರ ತಾಯಿಯವರಾದ
ಶರಣೆ ಶಿವಕ್ಕರ ಸಿದ್ದಮ್ಮನವರು
ದಿನಾಂಕ : 28-9-2020ರ ಸೋಮವಾರ ಮಧ್ಯಾಹ್ನ 2.30ಕ್ಕೆ
ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅವರಿಗೆ 95 ವರ್ಷ ವಯಸ್ಸಾಗಿತ್ತು.
ಇಬ್ಬರು ಪುತ್ರರು, ಸೊಸೆಯಂದಿರು ಮೊಮ್ಮಕ್ಕಳು,
ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು
ಅಗಲಿರುವ ಮೃತರ ಅಂತ್ಯಕ್ರಿಯೆಯು
ದಿನಾಂಕ 29-9-2020ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ
ದಾವಣಗೆರೆ ತಾಲ್ಲೂಕು ರಾಮಗೊಂಡನಹಳ್ಳಿಯಲ್ಲಿರುವ
ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ದು:ಖತಪ್ತ ಕುಟುಂಬ ವರ್ಗ
**ನಟರಾಜ್ ಆರ್.ಬಿ., ವರುಣ್ ಏಜೆನ್ಸಿ,**
ಡಿಸ್ಟ್ರಿಬ್ಯೂಟರ್ ಮ್ಯಾಕ್ ಲೂಬ್ರಿಕೆಂಟ್ಸ್ ಅಂಡ್ ಫ್ಲೀಟ್ ಗಾರ್ಡ್ ಫಿಲ್ಟರ್ಸ್
**ಎಂ.ಎಸ್.ಬಸವರಾಜಪ್ಪ,** ಮಾಜಿ ಅಧ್ಯಕ್ಷರು, ದಾಮ್‌ಕೋಸ್, ದಾವಣಗೆರೆ.
**ಎಸ್.ಆರ್.ಪ್ರಕಾಶ್,** ಮಾಲೀಕರು, ಹಂಸ ಫ್ಯೂಯಲ್ಸ್
ಮೊ: 8105024555, 9480447359

# ರೈತ ಸಂಘಟನೆಗಳು ಕರೆ ನೀಡಿದ್ದ ಕರ್ನಾಟಕ ಬಂದ್‌ಗೆ ಜಗಳೂರಿನಲ್ಲಿ ವ್ಯಾಪಕ ಬೆಂಬಲ

ಜಗಳೂರು, ಸೆ. 28- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತಂದಿರುವ ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆಗಳನ್ನು ಕೂಡಲೇ ಹಿಂಪಡೆಯಲು ಆಗ್ರಹಿಸಿ ವಿವಿಧ ಸಂಘಟನೆಗಳು ನೀಡಿದ್ದ ಕರ್ನಾಟಕ ಬಂದ್‌ಗೆ ಸಾರ್ವಜನಿಕರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಪಟ್ಟಣದ ಮಹಾತ್ಮಾಗಾಂಧಿ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ಕಾಂಗ್ರೆಸ್ ಪಕ್ಷ , ಕರವೇ ಹಾಗೂ ಎಐಎಸ್‌ಎಫ್, ಎಸ್‌ಎಫ್‌ಐ, ಸಿಐಟಿಯು, ಎಐಟಿ ಯುಸಿ, ಕೂಲಿ ಕಾರ್ಮಿಕರ ಸಂಘಟನೆ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಬೆಳಿಗ್ಗೆ 7 ಗಂಟೆಯಿಂದಲೇ ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿಯೊಂ ದಿಗೆ ಸಂಚರಿಸಿ, ಬಂದ್ ಬಗ್ಗೆ ಜಾಗೃತಿ ಮೂಡಿಸಿದರು. ಅಂಗಡಿ ಮುಂಗಟ್ಟುಗಳು, ವ್ಯಾಪಾರಿ ಗಳು, ವರ್ತಕರು, ಬಸ್ ಮಾಲೀಕರು ಸ್ವಯಂ ಪ್ರೇರಿತರಾಗಿ ಬಂದ್‌ಗೆ ಬೆಂಬಲಿಸಿದರು. ನಂತರ ಬಹಿರಂಗ ಸಭೆ ನಡೆಸಿ ತಹಶೀಲ್ದಾರ್ ಡಾ. ನಾಗವೇಣಿ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆಗಳನ್ನು ಹಿಂಪಡೆಯಬೇಕು. ಕಾರ್ಪೊರೇಟ್‌ಗಳ ಸುಪರ್ದಿಗೆ ಜಮೀನು ನೀಡಲು ನಿಂತಿರುವ ಸರ್ಕಾರಗಳು ಬಡ ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ ನಡೆಸುತ್ತಿವೆ ಎಂದು ಮುಖಂಡರು ಆರೋಪಿಸಿದರು.



ಕಂಪನಿಗಳ ಮಾಲೀಕರು, ಬಂಡವಾಳ ಶಾಹಿಗಳು ಕಪ್ಪುಹಣ ಮಾಡಲು ರಾಜಕಾರಣಿಗಳು ಕಾಯ್ದೆಗಳನ್ನು ಜಾರಿಗೊಳಿಸುತ್ತಿದ್ದು, ಕೂಡಲೇ ಕಾಯ್ದೆಗಳನ್ನು ವಾಪಾಸ್ ಪಡೆಯಬೇಕು. ರೈತರ ಜಮೀನುಗಳನ್ನು ಉಳಿಸಬೇಕು ಎಂದು ಆಗ್ರಹಿಸಿದರು.

ಹುಚ್ಚವ್ವನಹಳ್ಳಿ ಮಂಜುನಾಥ್ ಬಣ, ರೈತ ಸಂಘದ ಚಿರಂಜೀವಿ, ಗಂಗಾಧರಪ್ಪ, ಚೌಡಪ್ಪ, ಸತೀಶ್, ಎಐಟಿಯುಸಿ ಮಹ್ಮದ್ ಭಾಷಾ, ಸಿಐಟಿ ಯು ವಕೀಲ ಆರ್. ಓಬಳೇಶ್, ಎಐಎಸ್‌ಎಫ್‌ನ ಮಾದಿಹಳ್ಳಿ ಮಂಜಪ್ಪ, ಯುವರಾಜ್, ಎಸ್‌ಎಫ್‌ಐನ ಅನಂತರಾಜ್, ಮೈಲೇಶ, ಅಂಜಿನಪ್ಪ, ಕಾರ್ಮಿಕ ಸಂಘಟನೆಯ ನಿಂಗರಾಜ್, ಮಹಾಂತೇಶ್, ಕರಿಬಸಪ್ಪ, ಕರವೇ ಸಂಘಟನೆಯ ಅಧ್ಯಕ್ಷ ಮಹಾಂತೇಶ್, ಶಂಭುಲಿಂಗಪ್ಪ, ಸುರೇಶ್ ಸಂಗೊಳ್ಳಿ, ಹಫೀಜ್, ನಿಂಗರಾಜ್, ದಲಿತ ಹೋರಾಟಗಾರ ರಾಜಪ್ಪ, ಗೋವಿಂದರಾಜ್ ಮತ್ತಿತರರು ಭಾಗವಹಿಸಿದ್ದರು.

**ಕಾಂಗ್ರೆಸ್‌ನಿಂದ ಪ್ರತಿಭಟನೆ :** ವಿವಿಧ ಸಂಘಟನೆಗಳು ನೀಡಿದ್ದ ಕರ್ನಾಟಕ ಬಂದ್‌ಗೆ ಬ್ಲಾಕ್ ಕಾಂಗ್ರೆಸ್ ಸಮಿತಿ ಬೆಂಬಲಿಸಿ, ಪ್ರತಿಭಟನೆಯಲ್ಲಿ ಭಾಗವಹಿಸಿತ್ತು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಶೀರ್ ಅಹ್ಮದ್, ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಮತ್ತು ಪದಾಧಿಕಾರಿಗಳು ಕಾರ್ಯಕರ್ತರು ಪ್ರತ್ಯೇಕ ಪ್ರತಿಭಟನಾ ಮೆರವಣಿಗೆ ನಡೆಸಿದರು.

**ಭಗತ್ ಸಿಂಗ್ ಜನ್ಮ ದಿನಾಚರಣೆ :** ಪಟ್ಟಣದ ಮಹಾತ್ಮಗಾಂಧಿ ವೃತ್ತದ ಬಳಿ ಕರ್ನಾಟಕ ಬಂದ್‌ಗೆ ಬೆಂಬಲಿಸಿ, ಹೋರಾಟ ನಿರತ ಸಂಘಟನಾಕಾರರು 113ನೇ ಭಗತ್ ಸಿಂಗ್ ಜನ್ಮ ದಿನಾಚರಣೆ ಆಚರಿಸಿ, ಪುಷ್ಪಾರ್ಚನೆ ಸಲ್ಲಿಸಿ, ಗೌರವ ಸಲ್ಲಿಸಿದರು.

ಭಗತ್ ಸಿಂಗ್ ಅವರು ಸ್ಫೂರ್ತಿಯ ಸೆಲೆ, ತಮ್ಮ ಕ್ರಾಂತಿಕಾರಿ ವಿಚಾರಧಾರೆಗಳು ತ್ಯಾಗ, ಬಲಿದಾನದ ಮನೋಭಾವ ಮತ್ತು ದೇಶದ ಯುವಜನತೆಗೆ ಸ್ವಾತಂತ್ರ್ಯದ ಕಿಚ್ಚು ಹಚ್ಚಿಸಿದ ದಿಟ್ಟ ಹೋರಾಟದ ಬದುಕನ್ನು ಸ್ಮರಿಸಿದರು.

ಸಿಪಿಐ ದುರುಗಪ್ಪ, ಪಿಎಸ್‌ಐ ಉಮೇಶ್ ಬಾಬು ಸ್ಥಳದಲ್ಲಿ ಹಾಜರಿದ್ದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ವ್ಯಾಪಕ ಬಂದೋಬಸ್ತ್ ಕೈಗೊಂಡಿದ್ದರು.

# ಬಂದ್ : ರಾಣೇಬೆನ್ನೂರಿನಲ್ಲಿ ಯಶಸ್ವಿ



ರಾಣೇಬೆನ್ನೂರು, ಸೆ. 28- ವಿವಿಧ ರೈತ ಸಂಘಟನೆಗಳು, ದಿನಗೂಲಿ ನೌಕರರ ಸಂಘ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಮುಖಂಡರು ಒಟ್ಟಾಗಿ ಕರ್ನಾಟಕ ಬಂದ್ ಯಶಸ್ವಿಗೊಳಿಸಿದರು.

ಬೆಳಿಗ್ಗೆ ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟ ಪ್ರತಿಭಟನಾ ಮೆರವಣಿಗೆ ನ್ಯಾಯಾಲಯ ಬಳಿ ರಸ್ತೆ ರೋಖೋ ನಡೆಸಿ, ಪೋಸ್ಟ್ ಸರ್ಕಲ್ ಗೆ ತೆರಳಿ ಅಲ್ಲಿ ಸರ್ಕಾರದ ನ್ಯೂನತೆಗಳ ಬಗ್ಗೆ ಮಾತನಾಡಿ, ಸುತ್ತೋಲೆಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ತಹಶಿಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ರೈತ ಸಂಘಗಳ ಪದಾಧಿಕಾರಿಗಳಾದ ರವೀಂದ್ರಗೌಡ ಪಾಟೀಲ, ಈರಣ್ಣ ಹಲಗೇರಿ, ಹನಮಂತಪ್ಪ ಕಬ್ಬಾರ, ಸುರೇಶ ಗರಡಿಮನಿ, ದಿನಗೂಲಿ ಸಂಘದ ಬಸವರಾಜ ಕೊಂಗಿ, ಜೆಡಿಎಸ್ ನ ಎಸ್ ಡಿ ಹಿರೇಮಠ, ಕಾಂಗ್ರೆಸ್ ನ ಮಂಜನಗೌಡ ಪಾಟೀಲ, ಬಸವ ರಾಜ ಹುಚ್ಚಗೊಂಡರ, ವೀರನ ಗೌಡ ಪೊಲೀಸ್‌ಗೌಡ್ರ, ಬಸವ ರಾಜ ಸವಣೂರ ಮೊದಲಾದವರು ಪಾಲ್ಗೊಂಡಿದ್ದರು.

ನೂರಾರು ಬೈಕ್‌ಗಳಲ್ಲಿ ಹಸಿರು ಧ್ವಜ ಕಟ್ಟಿಕೊಂಡು ಬಂದ ಗ್ರಾಮೀಣ ಭಾಗದ ರೈತರು ಟ್ರ್ಯಾಕ್ಟರ್ ಇನ್ನಿತರೆ ವಾಹನಗಳಲ್ಲಿ ಬಂದ ಪಕ್ಷಗಳ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಬಂದ್ ಯಶಸ್ಸಿಗೆ ಸಾಕ್ಷಿಯಾದರು.

# ಭೂ ಸುಧಾರಣಾ ಕಾಯ್ದೆ : ಪ್ರತಿಭಟನೆ



**ಮಲೇಬೆನ್ನೂರು**

ಮಲೇಬೆನ್ನೂರು, ಸೆ. 28- ರೈತ ವಿರೋಧಿ ಹಾಗೂ ಕಾರ್ಪೊರೇಟ್ ಕಂಪನಿಗಳ ಪರವಾದ ಭೂ ಸುಧಾರಣಾ ಕಾಯ್ದೆ ವಿರೋಧಿಸಿ ಮಲೇಬೆನ್ನೂರಿನಲ್ಲಿ ಸೋಮವಾರ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಧಾರವನ್ನು ವಿರೋಧಿಸಿ, ಪಟ್ಟಣದ ಪ್ರಮುಖ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ ರೈತ ಸಂಘದವರು ನಂತರ ನಾಡ ಕಛೇರಿಗೆ ತೆರಳಿ ಉಪ ತಹಶೀಲ್ದಾರ್ ಆರ್. ರವಿ ಅವರಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ಮಂಜುನಾಥ್ ಕೋಗಳಿ, ಗೌತಮ್ ರಾಜ್ ಕರಡೆಪ್ಪರ, ಚಂದ್ರಶೇಖರ್ ಹಣಚಿಕ್ಕಿ, ಪಿ. ಗಂಗಾಧರಪ್ಪ ಪೂಜಾರ್, ಹೆಚ್.ಆರ್. ಮಂಜುನಾಥ ರೆಡ್ಡಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಪತ್ರಿಕಾ ವಿತರಕ ಶಿವಕುಮಾರ್ ಅವರ ಕುಟುಂಬಕ್ಕೆ ಸಹಾಯ



ದಾವಣಗೆರೆ, ಸೆ.28- ಇತ್ತೀಚೆಗೆ ನಿಧನರಾದ ಚಿತ್ರದುರ್ಗದ ಪತ್ರಿಕಾ ವಿತರಕ ಹೆಚ್.ವಿ.ಶಿವಕುಮಾರ್ ಅವರ ಸ್ವಗೃಹಕ್ಕೆ ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳ ಪತ್ರಿಕಾ ವಿತರಕರು ತೆರಳಿ ಅವರ ಕುಟುಂಬಕ್ಕೆ ಸಾಂತ್ವನ ಹೇಳಿ, ಪತ್ರಿಕಾ ವಿತರಕರಿದ ಸಂಗ್ರಹಿಸಿದ ಹಣವನ್ನು ಅವರ ಕುಟುಂಬಕ್ಕೆ ನೀಡಿದರು.

ಈ ಸಂದರ್ಭದಲ್ಲಿ ದಾವಣ ಗೆರೆಯ ಹಿರಿಯ ಪತ್ರಿಕಾ ವಿತರಕ ಎ.ಎನ್.ಕೃಷ್ಣಮೂರ್ತಿ, ಶಿವಮೊಗ್ಗದ ಸತ್ಯನಾರಾಯಣ್, ಧನಂಜಯ ಹೆಚ್. (ಅರುಣ್), ಮಂಜುನಾಥ್, ಬಿ.ರಾಕೇಶ್, ನಾಗೇಂದ್ರ, ಚಿತ್ರದುರ್ಗದ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ, ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

## ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೌನೇಶ್ವರ ಫೀಡರ್ ವ್ಯಾಪ್ತಿಯ ಹೆಚ್. ಕೆ. ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸ್ಯೆಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್ ರಸ್ತೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಜಯನಗರ ಫೀಡರ್ ವ್ಯಾಪ್ತಿಯ ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್. ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್, ಕಾಳಿಕಾಂಬ ದೇವಸ್ಥಾನ, ಶಕ್ತಿನಗರ ಹಾಗು ಸುತ್ತ ಮುತ್ತಲಿನ ಪ್ರದೇಶಗಳು. ಇ. ಎಸ್.ಐ ಫೀಡರ್ ವ್ಯಾಪ್ತಿಯ ಇ.ಎಸ್.ಐ ಆಸ್ಪತ್ರೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು. ಡಿ.ಸಿ.ಎಂ. ಫೀಡರ್ ವ್ಯಾಪ್ತಿಯ ಶ್ರೀರಾಮ ಬಡಾವಣೆ, ಡಿ.ಸಿ.ಎಂ.ಟೌನ್‌ಶಿಪ್, ಶಕ್ತಿನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

# ಮಾಸ್ಕ್ ಧರಿಸದ ಸವಾರರಿಗೆ ದಂಡ



ಹರಪನಹಳ್ಳಿ ಪುರಸಭೆ ಕ್ರಮ

ಹರಪನಹಳ್ಳಿ, ಸೆ.28 - ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಪಟ್ಟಣದ ಪುರಸಭೆ ವತಿಯಿಂದ ಪ್ರಮುಖ ರಸ್ತೆ, ಬೀದಿ, ವೃತ್ತ, ಸಾರ್ವಜನಿಕ ಸ್ಥಳಗಳಲ್ಲಿ ಫೇಸ್ ಮಾಸ್ಕ್ ಧರಿಸದೆ ಸಂಚರಿಸುತ್ತಿದ್ದ ವಾಹನ ಸವಾರರನ್ನು ಗುರುತಿಸಿ 100 ರೂ. ದಂಡ ವಿಧಿಸಲಾಯಿತು.

ಈ ವೇಳೆ ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ಪಿ.ಮಂಜುನಾಥ್ ಮಾತನಾಡಿ, ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಕೊರೊನಾಗೆ ಬಲಿಯಾಗುತ್ತಿರುವವರ ಮತ್ತು ಸೋಂಕಿಗೆ ಒಳಗಾಗುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಗಣನೀಯವಾಗಿ ಹೆಚ್ಚಾಗುತ್ತಿರುವುದರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿದ ಹಿನ್ನೆಲೆಯಲ್ಲಿ ನಮ್ಮ ಪುರಸಭೆ ವತಿಯಿಂದ ಈ ದಂಡ ವಸೂಲಿ ಪ್ರಕ್ರಿಯೆ ಶುರುವಾಗಿದೆ ಎಂದು ತಿಳಿಸಿದರು.

ನಿಯಂತ್ರಣಕ್ಕೆ ಬಾರದ ಕೊರೊನಾ ಅಟ್ಟಹಾಸ ಮಟ್ಟ ಹಾಕಲು ಫೇಸ್ ಮಾಸ್ಕ್ ಧರಿಸುವುದೇ ಪರಿಹಾರವಾಗಿದ್ದು, ಈ ಬಗ್ಗೆ ಸಾರ್ವಜನಿಕರಿಗೆ ಎಷ್ಟು ಬಾರಿ ಮನವರಿಕೆ ಮಾಡಿದರೂ ಸಹ ಪ್ರಯೋಜನವಾಗದಿರುವ ಹಿನ್ನೆಲೆಯಲ್ಲಿ ಇಂದಿನಿಂದ ಈ ದಂಡ ವಸೂಲಿ ಪ್ರಕ್ರಿಯೆ ಶುರುವಾಗಿದೆ ಎಂದು ತಿಳಿಸಿದರು.

ಈ ವೇಳೆ ಎಎಸ್‌ಐ ಜಾತಪ್ಪ, ಪೇದೆ ಎಂ. ಅಜ್ಜಯ್ಯ, ಪುರಸಭೆ ಸಿಬ್ಬಂದಿ ಶ್ಯಾಮರಾಜ ಮತ್ತಿತರರು ದಂಡ ವಸೂಲಿ ಕಾರ್ಯದಲ್ಲಿ ತೊಡಗಿದ್ದರು.


# ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪ್ ಬ್ಯಾಂಕ್ ಲಿ.,

ವಿಜಯಲಕ್ಷ್ಮಿ ರೋಡ್, ದಾವಣಗೆರೆ - 577 001.

ಫೋನ್ ನಂ. : 08192-271688, ಇ-ಮೇಲ್ : ambabhavaniucbdvg@gmail.com

## 2019-20ನೇ ಸಾಲಿನ ಆಡಿಟ್ ಆದ ಲಾಭ-ನಷ್ಟದ ತಃಖ್ತೆ ದಿನಾಂಕ 31.03.2020ಕ್ಕೆ ಇದ್ದಂತೆ

| ಮೊತ್ತ 31.03.2019 | ನಷ್ಟ | ಮೊತ್ತ ರೂ. ಪೈ. |
|---|---|---|
| 1,10,50,262-00 | ಠೇವಣಿ ಮೇಲಿನ ಬಡ್ಡಿ ಪಾವತಿ | 1,15,25,670-00 |
| 22,87,969-00 | ನೌಕರರ ಸಂಬಳ ಮತ್ತು ಇತರೆ ಪಾವತಿ | 25,78,960-00 |
| 1,35,500-00 | ನಿರ್ದೇಶಕರ ಸಭೆಗಳ ಭತ್ಯೆ | 1,26,000-00 |
| 2,35,800-00 | ಲೆಕ್ಕ ಪರಿಶೋಧನಾ ಶುಲ್ಕ | 2,06,800-00 |
| 7,10,480-00 | ಬಾಡಿಗೆ, ತೆರಿಗೆ, ವಿದ್ಯುತ್ ವೆಚ್ಚ | 7,25,103-00 |
| 2,09,954-00 | ವಿಮೆ | 1,98,117-00 |
| 34,900-00 | ಅಂಚೆ & ತಂತಿ, ದೂರವಾಣಿ ವೆಚ್ಚ | 46,480-00 |
| 72,901-81 | ಮುದ್ರಣ & ಲೇಖನ ಸಾಮಗ್ರಿಗಳು | 85,464-55 |
| 18,361-00 | ಜಾಹೀರಾತು | 37,400-00 |
| 2,36,818-00 | ಸವಕಳಿ | 2,20,091-00 |
| 37,586-58 | ರಿಪೇರಿ ಮತ್ತು ರಿನೀವಲ್ಸ್ | 27,413-08 |
| 21,21,097-10 | ಇತರೆ ವೆಚ್ಚಗಳ ಪಾವತಿ : | 22,14,722-23 |
| 39,749-00 | ಆದಾಯ ತೆರಿಗೆಯ ವಿಶೇಷ ಅವಕಾಶ, ಉತ್ಪಾದನಾ ಆಸ್ತಿ | - |
| 2,83,100-00 | ಅನುತ್ಪಾದನಾ ಆಸ್ತಿ | **3,23,874-00** |
| 13,06,801-00 | ಆದಾಯ ತೆರಿಗೆ | **13,30,150-00** |
| **22,91,373-01** | ಲಾಭ & ನಷ್ಟದ ಖಾತೆ (2019-20) | - |
| - | **ನಿವ್ವಳ ಲಾಭ ಖಾತೆ (2019-2020)** | **26,64,297-78** |
| **2,10,72,652-50** | ಒಟ್ಟು | **2,23,10,542-64** |

| ಮೊತ್ತ 31.03.2019 | ಲಾಭ | ಮೊತ್ತ ರೂ. ಪೈ. |
|---|---|---|
| 1,40,28,998-00 | ಸಾಲಗಳ ಮೇಲಿನ ಬಡ್ಡಿ ಆದಾಯ | 1,39,15,206-00 |
| 62,33,364-00 | ವಿನಿಯೋಗದಿಂದ ಬಂದ ಬಡ್ಡಿ | 72,22,246-61 |
| 8,10,290-50 | ಇತರೆ ಆದಾಯಗಳು | 11,73,090-03 |
| **2,10,72,652-50** | ಒಟ್ಟು | **2,23,10,542-64** |

## 2019-20ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

| 31.03.2019 | ಬಂಡವಾಳ ಮತ್ತು ಜವಾಬ್ದಾರಿಗಳು | ಮೊಬಲಗು ರೂ. ಪೈ |
|---|---|---|
| **3,00,00,000-00** | **ಅಧಿಕೃತ ಪಾಲುಧನ** | **3,00,00,000-00** |
| **1,49,49,390-00** | **ಪಾವತಿಯಾದ ಪಾಲುಧನ** | **1,53,12,490-00** |
| 1,39,91,100-00 | ಪಾಲುಧನ ಸದಸ್ಯರಿಂದ | 1,43,76,800-00 |
| 9,58,290-00 | ಷೇರು ಅಮಾನತ್ | 9,35,690-00 |
| **73,72,106-24** | **ಕಾಯ್ದಿರಿಸಿದ ನಿಧಿ** | 8105705-25 |
| **47,32,611-50** | **ಇತರೆ ನಿಧಿಗಳು** | 53,84,539-50 |
| 23,77,160-00 | ಕಟ್ಟಡ ನಿಧಿ | 23,78,160-00 |
| 3,20,584-00 | ಮುಳುಗುವ ಸಾಲದ ನಿಧಿ | 3,21,584-00 |
| 19,524-00 | ಧರ್ಮದ ನಿಧಿ | 20,524-00 |
| 58,913-00 | ಸಹಕಾರ ಅಭಿವೃದ್ಧಿ ನಿಧಿ | -- |
| 33,105-00 | ಲಾಭ ಸಮೀಕರಣ ನಿಧಿ | 20,139-00 |
| 3,68,928-00 | ಜ್ಯುಬಿಲಿ ನಿಧಿ | 11,04,073-00 |
| 11,68,266-50 | ಸದಸ್ಯರ ಮರಣ ಪರಿಹಾರ ನಿಧಿ | 11,57,266-50 |
| 54,500-00 | ಸಾಮಾನ್ಯ ಕ್ಷೇಮ ನಿಧಿ | 55,500-00 |
| 5,100-00 | ಪ್ರಚಾರ ನಿಧಿ | -- |
| 2,56,282-00 | ಹೂಡಿಕೆ ಏರಿಳಿತ ನಿಧಿ | 2,57,282-00 |
| 68,011-00 | ಸಿಬ್ಬಂದಿ ಕ್ಷೇಮ ನಿಧಿ | 69,011-00 |
| 1,000-00 | ವೃತ್ತಿ ತೆರಿಗೆ | 1,000-00 |
| 1,238-00 | ಕರ್ನಾಟಕ ರಾಜ್ಯ ಮಹಾಮಂಡಳ ನಿಧಿ | -- |
| **19,42,88,355-61** | **ಠೇವಣಿಗಳು** | **18,49,53,255-93** |
| 4,21,40,965-22 | ಉಳಿತಾಯ ಠೇವಣಿ | 4,10,49,883-83 |
| 99,53,816-00 | ಅಂಬಾಭವಾನಿ ನಿತ್ಯ ನಿಧಿ ಠೇವಣಿ | 12,08,9547-00 |
| 2,82,34,701-00 | ಅಂಬಾಭವಾನಿ ಕ್ಯಾಷ್ ಸರ್ಟಿಫಿಕೇಟ್ ವ್ಯಕ್ತಿಗಳಿಂದ | 3,07,78,466-00 |
| 17,83,820-00 | ಅಂಬಾಭವಾನಿ ಕ್ಯಾಷ್ ಸರ್ಟಿಫಿಕೇಟ್ ಸಂಸ್ಥೆಗಳಿಂದ | 17,66,424-00 |
| 1,45,33,168-15 | ಚಾಲ್ತಿ ಠೇವಣಿ-ವ್ಯಕ್ತಿಗಳಿಂದ | 64,51,460-36 |
| 34,64,340-24 | ಚಾಲ್ತಿ-ಠೇವಣಿ-ಸಂಸ್ಥೆಗಳಿಂದ | 41,06,715-74 |
| 6,65,37,902-00 | ಖಾಯಂ ಠೇವಣಿ-ವ್ಯಕ್ತಿಗಳಿಂದ | 6,08,09,200-00 |
| 14,74,008-00 | ಖಾಯಂ ಠೇವಣಿ-ಸಂಸ್ಥೆಗಳಿಂದ | 14,17,196-00 |
| 32,42,687-00 | ಸಂಚಿತ ಠೇವಣಿ | 35,61,415-00 |
| 2,29,22,948-00 | ಜ್ಯುಬಲಿ ಠೇವಣಿ | 22,922,948-00 |
| **2,31,478-00** | **ಸಿಬ್ಬಂದಿ ಜವಾಬ್ದಾರಿಗಳು :** | **3,36,841-00** |
| 31,478-00 | ಸಿಬ್ಬಂದಿ ಭವಿಷ್ಯ ನಿಧಿ ಸಸ್ಪೆನ್ಸ್ | 32,254-00 |
| 2,00,000-00 | ಕೊಡಬೇಕಾದ ನೌಕರರ ಸಂಬಳ | 3,04,587-00 |
| **44,79,633-00** | **ಇತರೆ ಜವಾಬ್ದಾರಿಗಳು** | **52,14,925-00** |
| 7,82,916-00 | ಷೇರು ಡಿವಿಡೆಂಡ್ | 5,76,872-00 |
| 76,085-00 | ಟಿಡಿಎಸ್ | 59,279-00 |
| 1,00,000-00 | ಡಿಡಿ ಆಕ್ಷೇಪಣಾ ಅಮಾನತ್ತು | 1,00,000-00 |
| - | ಷೇರು ಅಮಾನತ್ತು | 2,000-00 |
| 3,722-00 | ಸಿಬ್ಬಂದಿ ಸಂಬಳ ಉಳಿತಾಯ ಯೋಜನೆ | 3,722-00 |
| 12,77,910-00 | ಸಾಲಗಳಿಂದ ಸುಸ್ತಿಯಾದ ಬಡ್ಡಿ | 21,04,052-00 |
| 22,39,000-00 | ಸದಸ್ಯರ ಮರಣೋತ್ತರ ವಂತಿಗೆ ನಿಧಿ | 23,69,000-00 |
| **82,77,452-85** | **ಅವಕಾಶಗಳು :** | **93,86,235-43** |
| 40,08,811-00 | ಕೊಡಬೇಕಾದ ಬಡ್ಡಿ | 47,64,546-00 |
| 76,050-00 | ಕೊಡಬೇಕಾದ ಲೆಕ್ಕಪರಿಶೋಧನಾ ಶುಲ್ಕ | 78,300-00 |
| 19,69,322-00 | ಅನುತ್ಪಾದಕ ಆಸ್ತಿಯ ಅವಕಾಶ (ಎನ್.ಪಿ.ಎ.) | 22,93,196-00 |
| | ಆದಾಯ ತೆರಿಗೆಯ ಕಾಯ್ದೆ ಕಲಂ 36(vi) | |
| 13,99,110-00 | ವಿಶೇಷ ಅವಕಾಶ | 13,99,110-00 |
| 3,95,543-00 | ಉತ್ಪಾದನಾ ಆಸ್ತಿಯ ನಿಧಿ | 3,95,543-00 |
| 85,058-91 | ಅನುತ್ಪಾದನಾ ಆಸ್ತಿಯ ಹೂಡಿಕೆಯ ಅವಕಾಶ | 85,058-91 |
| 93,396-00 | ಕೊಡಬೇಕಾದ ಅವಧಿ ಮುಗಿದ ಠೇವಣಿಗಳ ಬಡ್ಡಿ | 1,05,649-00 |
| 43,826-00 | ಬ್ಯಾಂಕರ್ಸ್ ಚೆಕ್ | 85,148-00 |
| 7,500-00 | ಕ್ಲಿಯರಿಂಗ್ ಹೌಸ್ ಬಾಡಿಗೆ | 7,500-00 |
| 83,835-94 | ಕೊಡಬೇಕಾದ GST ಸರಕು ಸೇವಾ ತೆರಿಗೆ | 35,684-52 |
| 1,15,000-00 | ವಿಮಾ ಪಾಲಿಸಿ | 1,36,500-00 |
| | **ನಿವ್ವಳ ಲಾಭ :** | |
| **22,91,373-01** | ನಿವ್ವಳ ಲಾಭ | 26,64,297-78 |
| **23,66,22,400-21** | ಒಟ್ಟು | **23,13,58,289-89** |

| 31.03.2019 | ಆಸ್ತಿಗಳು ಮತ್ತು ಮೂಲಗಳು | ಮೊಬಲಗು ರೂ. ಪೈ |
|---|---|---|
| **70,14,000-00** | **ನಗದು ಶಿಲ್ಕು** | **34,51,993-00** |
| **3,74,42,733-82** | **ಬ್ಯಾಂಕಿನಲ್ಲಿ ಶಿಲ್ಕು** | **1,59,35,621-76** |
| 38,208-12 | ಆಂಧ್ರ ಬ್ಯಾಂಕ್ ಚಾಲ್ತಿ ಖಾತೆ | 38,208-12 |
| 7,66,433-00 | ಅಪೆಕ್ಸ್ ಬ್ಯಾಂಕ್ ಚಾಲ್ತಿ ಖಾತೆ | 39,156-00 |
| 37,25,019-40 | ದಾ.ಜಿ.ಕೇಂ.ಸ.ಬ್ಯಾಂಕ್ ಚಾಲ್ತಿ ಖಾತೆ | 4,03,749-40 |
| 50,000-00 | ಕ.ರಾ.ಪ.ಸ.ಬ್ಯಾ. ಈ ಸ್ಟ್ಯಾಂಪ್ ಭದ್ರತಾ ಠೇವಣಿ | 50,000-00 |
| 11,81,068-56 | ಎಸ್‌ಬಿಎಂ ಬ್ಯಾಂಕ್ ಚಾಲ್ತಿ ಖಾತೆ | 16,46,953-56 |
| 88,39,286-74 | ಐಡಿಬಿಐ ಬ್ಯಾಂಕ್ ಚಾಲ್ತಿ ಖಾತೆ | 56,01,395-24 |
| 39,17,746-48 | ಆಕ್ಸಿಸ್ ಬ್ಯಾಂಕ್ ಚಾಲ್ತಿ ಖಾತೆ | 45,92,489-68 |
| 49,78,197-90 | ಆಕ್ಸಿಸ್ ಬ್ಯಾಂಕ್ ಕ್ಲಿಯರಿಂಗ್ ಚಾಲ್ತಿ ಖಾತೆ | 23,84,949-03 |
| 21,12,664-94 | ಕೆನರಾ ಬ್ಯಾಂಕ್ ಚಾಲ್ತಿ ಖಾತೆ | 12,664-94 |
| 1,37,242-62 | ಹೆಚ್.ಡಿ.ಎಫ್.ಸಿ. ಚಾಲ್ತಿ ಖಾತೆ, ದಾವಣಗೆರೆ. | 1,37,242-62 |
| 1,16,96,866-06 | ಹೆಚ್.ಡಿ.ಎಫ್.ಸಿ. ಚಾಲ್ತಿ ಖಾತೆ, ಬೆಂಗಳೂರು | 10,28,813-17 |
| **32,02,198-60** | **ವಿನಿಯೋಗಗಳು :** | **31,35,623-60** |
| 23,08,732-00 | ಅಪೆಕ್ಸ್ ಬ್ಯಾಂಕ್ ಕಾಯ್ದಿಟ್ಟ ನಿಧಿ ಠೇವಣಿ | 24,87,271-00 |
| 8,93,466-60 | ದಾಜಿಕೇಂಸ ಬ್ಯಾಂಕ್ ಕಾಯ್ದಿಟ್ಟ ನಿಧಿ ಠೇವಣಿ | 6,48,352-60 |
| **7,27,05,264-00** | **ಇತರೆ ವಿನಿಯೋಗಗಳು** | **8,00,99,161-00** |
| 25,000-00 | ದಾಜಿಕೇಂಸ ಬ್ಯಾಂಕ್ ಪಾಲುಧನ | 25,000-00 |
| 5,58,49,004-00 | ಸರ್ಕಾರಿ ಸಾಲಪತ್ರಗಳ ಧನ ವಿನಿಯೋಗ | 6,59,92,901-00 |
| 3,31,260-00 | ಅಪೆಕ್ಸ್ ಬ್ಯಾಂಕ್ ನಗದು ಠೇವಣಿ | 10,81,260-00 |
| 50,00,000-00 | ರಿಲಾಯನ್ಸ್ ಡೈವಸರಿ ಫಂಡ್ ಪ್ಲಾನ್ | -- |
| 1,15,00,000-00 | ಮ್ಯುಚ್ಯುವಲ್ ಫಂಡ್ & ಲಿಕ್ವಿಡ್ ಫಂಡ್ | 1,30,00,000-00 |
| | **ಸದಸ್ಯರ ಸಾಲಗಳು :** | |
| **1,94,93,946-86** | **ಅಲ್ಪಾವಧಿ ಸಾಲಗಳು :** | **2,37,41,247-86** |
| 38,40,701-00 | ಬಂಗಾರದ ಮೇಲೆ ಸಾಲ | 76,10,802-00 |
| 1,54,02,098-86 | ಕ್ಯಾಷ್ ಕ್ರೆಡಿಟ್ ಸಾಲ | 1,55,84,445-86 |
| 2,51,147-00 | ಶ್ರೀ ಅಂಬಾಭವಾನಿ ನಿತ್ಯನಿಧಿ ಠೇವಣಿ ಸಾಲ | 5,46,000-00 |
| **8,57,59,865-95** | **ಮಧ್ಯಮಾವಧಿ ಸಾಲಗಳು :** | **9,26,57,020-95** |
| 9,69,567-00 | ಜಾಮೀನು ಸಾಲ | 14,35,811-00 |
| 21,64,153-00 | ಖಾಯಂ ಠೇವಣಿ ಸಾಲ | 20,96,763-00 |
| 21,29,082-00 | ಅಂಬಾಭವಾನಿ ಕ್ಯಾಷ್ ಸರ್ಟಿಫಿಕೇಟ್ ಸಾಲ | 16,41,226-00 |
| 1,78,149-95 | ಸಂಬಳಾಧಾರಿತ ಸಾಲ | 1,01,838-95 |
| 4,47,607-00 | ಹೈಪಾಥಿಕೇಷನ್ ಸಾಲ | 14,95,588-00 |
| 39,73,706-00 | ವಾಹನ ಸಾಲ | 51,44,722-00 |
| 5,71,67,811-00 | ಮಾರ್ಟ್‌ಗೇಜ್ ಸಾಲ | 6,44,98,197-00 |
| 1,81,758-00 | ಸಂಚಿತ ಠೇವಣಿ ಸಾಲ/ಎನ್.ಎಸ್.ಸಿ. ಸಾಲ | 1,22,900-00 |
| 46,051-00 | ಎಲ್.ಐ.ಸಿ. ಬಾಂಡ್ ಸಾಲ | 88,752-00 |
| 13,03,952-00 | ಸಿಬ್ಬಂದಿ ಸಂಬಳಾಧಾರಿತ ಸಾಲ | 15,84,859-00 |
| 1,53,58,984-00 | ಹೌಸಿಂಗ್ ಸಾಲ | 1,23,27,535-00 |
| 18,39,045-00 | ಜ್ಯುಬಿಲಿ ಠೇವಣಿ ಸಾಲ | 21,18,829-00 |
| **7,04,264-00** | **ಮುಂಗಡಗಳು** | **9,36,964-00** |
| 3,63,164-00 | ಮುಂಗಡ | 6,03,264-00 |
| 1,66,700-00 | ಬಾಡಿಗೆ ಮುಂಗಡ | 1,66,700-00 |
| 1,74,400-00 | ಹಬ್ಬದ ಮುಂಗಡ (ಪಿಗ್ಮಿ+ಸಿಬ್ಬಂದಿ ವರ್ಗ) | 1,67,000-00 |
| **35,79,627-00** | **ಬರತಕ್ಕ ಮೂಲಗಳು :** | **48,22,429-00** |
| 1,00,000-00 | ಡಿ.ಡಿ. ಆಕ್ಷೇಪಣಾ ಅಮಾನತ್ತು | 1,00,000-00 |
| 16,96,610-00 | ಸಾಲಪತ್ರಗಳ ವಿನಿಯೋಗದಿಂದ ಬರತಕ್ಕ ಬಡ್ಡಿ | 18,86,041-00 |
| 3,87,166-00 | ಇ-ಸ್ಟ್ಯಾಂಪಿಂಗ್ ಕರೆನ್ಸಿ | 4,44,545-00 |
| 1,17,941-00 | ವಿಮಾ ಪಾಲಿಸಿ | 1,17,941-00 |
| 12,77,910-00 | ಸಾಲಗಳಿಂದ ಬರತಕ್ಕ ಬಡ್ಡಿ | 21,04,052-00 |
| -- | ಮುಂಗಡ ಆದಾಯ ತೆರಿಗೆ/ತೆರಿಗೆ ಬರತಕ್ಕದ್ದು | 1,69,850-00 |
| **65,11,108-00** | **ಚರಾಸ್ತಿಗಳು** | **64,05,194-56** |
| 11,23,297-00 | ಪೀಠೋಪಕರಣಗಳು | 10,10,967-00 |
| 1,34,690-00 | ಕಂಪ್ಯೂಟರ್ | 1,23,514-56 |
| 1,04,326-00 | ಜನರೇಟರ್ | 1,25,227-00 |
| 22,125-00 | ನೋಟ್ ಕೌಂಟಿಂಗ್ ಮಷೀನ್ | 18,806-00 |
| 51,26,680-00 | ನಿವೇಶನ | 51,26,680-00 |
| **2,09,392-48** | **ಇತರೆ ಆಸ್ತಿ** | **1,73,034-16** |
| 1,87,611-00 | ಮುದ್ರಣ ಮತ್ತು ಲೇಖನ ಸಾಮಗ್ರಿ | 1,62,611-00 |
| 1,188-00 | ಟಿಡಿಎಸ್ ಬರಬೇಕಾದ್ದು | 1,188-00 |
| 20,593-48 | ಜಿಎಸ್ ಟಿ ಬರಬೇಕಾದದ್ದು | 9,235-16 |
| **23,66,22,400-21** | ಒಟ್ಟು | **23,13,58,289-89** |

| 31-03-2019 | Contingent Liabilities | 31-03-2020 | 31-03-2019 | Contingent Liabilities | 31-03-2020 |
|---|---|---|---|---|---|
| 98450-50 | Deaf RBI Account Liability/ಡೆಫ್ ಖಾತೆ | 98450-00 | 98450-50 | Deaf RBI Account Liability/ಡೆಫ್ ಖಾತೆ | 98450-00 |
| 98450-50 | Total Contingent Liabilities | 98450-00 | 98450-50 | Total Contingent Liabilities | 98450-00 |

## ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಮೇಲ್ಕಂಡ ಆಸ್ತಿ-ಜವಾಬ್ದಾರಿ ತಃಖ್ತೆಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳ ಬಗ್ಗೆ ಟಿಪ್ಪಣಿಗಳು.

1) ದಿನಾಂಕ 31.03.2020ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇ. 27.46 ರಷ್ಟು ಇರುವುದು. ಈ ಪ್ರಮಾಣವು ಕಳೆದ ಸಾಲಿನ ವರ್ಷಾಂತ್ಯಕ್ಕೆ ಶೇ. 29.16ರಷ್ಟು ಇದ್ದು, ಈ ಸಾಲಿನಲ್ಲಿ ಶೇ.1.70 ರಷ್ಟು ಕಡಿಮೆಯಾಗಿರುತ್ತದೆ.

2) ತೊಡಗಣೆಗಳ ಮುಖ ಬೆಲೆ ರೂ.665.00 ಲಕ್ಷಗಳು, ಪುಸ್ತಕದ ಬೆಲೆ ರೂ.659.93 ಲಕ್ಷಗಳು ಮತ್ತು ಮಾರುಕಟ್ಟೆ ಬೆಲೆ ರೂ. 659.93 ಲಕ್ಷಗಳು ಇದ್ದು, ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.

3) (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲ ಕೊಟ್ಟಿರುವುದಿಲ್ಲ. (ಆ) ಗೃಹ ನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಹೌಸಿಂಗ್ ಸಾಲವು ರೂ.123.28 ಲಕ್ಷ ಇರುತ್ತದೆ.

4) ಷೇರು ಡಿಬೆಂಚರ್ಸ್ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ.

5) (ಅ) ಬ್ಯಾಂಕಿನ ನಿರ್ದೇಶಕರಿಗೆ, ಮಂಡಳಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಭದ್ರತಾ ಆಧಾರಗಳ ಮೇಲೆ ದಿನಾಂಕ 31.03.2020ಕ್ಕೆ ಯಾವ ಸಾಲವೂ ಇರುವುದಿಲ್ಲ. ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಗಳಿಗೆ ಯಾವುದೇ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ.

6) 2019-20ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಸರಾಸರಿ ಬಡ್ಡಿ ವೆಚ್ಚವು (Cost of Deposit) ಶೇ. 6.23% ರಷ್ಟು ಇದೆ.

7) ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳ ಹಿಂದಿನ ಸಾಲಿನ ಅನುತ್ಪಾದಕ ಆಸ್ತಿಗಳೊಂದಿಗೆ ತುಲನೆ ಮಾಡಿದ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| ದಿನಾಂಕ | ಮೊಬಲಗು ರೂ. | ಒಟ್ಟು ಸಾಲಗಳಿಗೆ ಶೇಕಡವಾರು | ಮೊಬಲಗು ರೂ. | ಶೇಕಡ ವಾರು |
| 31.03.2019 | 44.85 | 4.26 | 21.95 | 2.13 |
| 31.03.2020 | 47.04 | 4.04 | 20.89 | 1.84 |
| ವ್ಯತ್ಯಾಸ | 2.19 | (-) 0.22 | (-) 1.06 | (-) 0.29 |

8) 2019-20ನೇ ಸಾಲಿನಲ್ಲಿ ಬ್ಯಾಂಕಿನ ಲಾಭ ಗಳಿಕೆ ಈ ಕೆಳಕಂಡಂತೆ ಇರುತ್ತದೆ.
- ✦ ಬ್ಯಾಂಕಿನ ಬಡ್ಡಿ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇ. 7.13 ಇರುತ್ತದೆ.
- ✦ ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ 0.41 ಇರುತ್ತದೆ.
- ✦ ಬ್ಯಾಂಕಿನ ಲಾಭವು ದುಡಿಯುವ ಬಂಡವಾಳದ ಮೇಲೆ ಶೇಕಡ 1.35 ಇರುತ್ತದೆ.
- ✦ ಬ್ಯಾಂಕಿನ ಹೂಡಿಕೆ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡ 3.17 ಇದೆ.
- ✦ ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ.2412.42 ಲಕ್ಷ ಇದೆ.
- ✦ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. 5.33 ಲಕ್ಷ ಇರುತ್ತದೆ.

9) ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು ದಿನಾಂಕ 30.11.2019ನೇ ಮತ್ತು 31.03.2020 ರಂದು ಒಟ್ಟು ರೂ. 2,07,675-00 ಡಿಪಾಜಿಟ್ ಇನ್ಸೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿಯನ್ನು ಕಾರ್ಪೊರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.

10) ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ಯಾವುದೇ (Bank Guarantee) ಬ್ಯಾಂಕ್ ಖಾತರಿಯನ್ನು ಕೊಟ್ಟಿರುವುದಿಲ್ಲ.

11) ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತವೆ.

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ವಿಶೇಷ ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಗುಂತಾಯಗಳ ಸವಕಳಿ ನಿಧಿ | ಗುಂತಾಯಗಳ ಏರಿಳಿತ ನಿಧಿ |
|---|---|---|---|---|
| 31.03.2019 | 3.20 | 19.69 | 0.85 | 2.56 |
| 31.03.2020 | 3.22 | 22.93 | 0.85 | 2.57 |
| ವ್ಯತ್ಯಾಸ | 0.02 | 03.24 | 0.00 | 0.01 |

12) ಬ್ಯಾಂಕ್ ಯಾವುದೇ ರೀತಿಯ NON-SLR ನಿಧಿಗಳ ಹೂಡಿಕೆ ಮಾಡಿರುವುದಿಲ್ಲ.

**ದಿನಾಂಕ: 25.09.2020 ರ ಮಾಸಿಕ ಸಭೆಯಲ್ಲಿ ಪರಿಶೀಲಿಸಲಾಗಿದೆ.**

| ಅಧ್ಯಕ್ಷರು | ಉಪಾಧ್ಯಕ್ಷರು | ನಿರ್ದೇಶಕರು | ನಿರ್ದೇಶಕರು | ಲೆಕ್ಕಾಧಿಕಾರಿ | ವ್ಯವಸ್ಥಾಪಕರು |
|---|---|---|---|---|---|
| **ಡಾ. ತಿಪ್ಪೇಸ್ವಾಮಿ ಏಕಬೋಟೆ** | **ಎಂ.ಎಸ್. ವಿಠಲ್** | **ಎ.ಕಿರಣ್‌ಕುಮಾರ್** ಚಾರ್ಟರ್ಡ್ ಅಕೌಂಟೆಂಟ್ | **ಮಾಲತೇಶರಾವ್ ಡಿ.** | **ಅನಿಲ್ ಟಿ. ಮಾಳದಕರ್** | **ನಾಗರಾಜ್ ಗೌಡನಕಟ್ಟಿ** |

### ಲೆಕ್ಕ ಪರಿಶೋಧನಾ ದೃಢೀಕರಣ ಪತ್ರ :

ಶ್ರೀ ಅಂಬಾಭವಾನಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ ಇದರ 2019-2020ನೇ ಸಾಲಿನ ಲೆಕ್ಕ ಪತ್ರಗಳನ್ನು ನಾನು ಪರಿಶೀಲಿಸಿರುತ್ತೇನೆ. ಲೆಕ್ಕ ಪರಿಶೋಧನೆಗೆ ಅಗತ್ಯವಿದ್ದ ಮಾಹಿತಿಗಳನ್ನು ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತೇನೆ. ಇವುಗಳನ್ನು ನನ್ನ ಅನುಭವ ಮತ್ತು ತಿಳುವಳಿಕೆ ಮಟ್ಟಿಗೆ ತೃಪ್ತಿಕರವಾಗಿದೆ. ನನಗೆ ಒದಗಿಸಿದ ಮಾಹಿತಿಗಳ ಆಧಾರದ ಮೇರೆಗೆ 2019-2020ನೇ ಸಾಲಿನ ಲಾಭ-ನಷ್ಟದ ತಃಖ್ತೆ ಮತ್ತು ದಿನಾಂಕ 31.03.2020ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆಯು ಇದರೊಂದಿಗೆ ಲಗತ್ತಿಸಿದ ನನ್ನ ಪ್ರತ್ಯೇಕ ಲೆಕ್ಕ ಪರಿಶೋಧನಾ ವರದಿ ಒಳಪಟ್ಟಂತೆ ಈ ಸಹಕಾರ ಸಂಸ್ಥೆಯ ನೈಜ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು, ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ದಾವಣಗೆರೆ
ದಿನಾಂಕ : 18.09.2020

'ಪರಿಶೀಲಿಸಿದೆ'
(ಅನ್ನಪೂರ್ಣ ಎಂ.ಆರ್.)
ಸನ್ನದು ಲೆಕ್ಕಪರಿಶೋಧಕರು, ದಾವಣಗೆರೆ.

ವಿಶೇಷ ಸೂಚನೆ : 1) ಬ್ಯಾಂಕಿನ ಸದಸ್ಯರು, ಗ್ರಾಹಕರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ನೂತನವಾಗಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯ ಒದಗಿಸಲಾಗಿದೆ. ಇದರ ಸದುಪಯೋಗ ಪಡೆಯಲು ವಿನಂತಿ.

# ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

DAVANAGERE URBAN CO-OPERATIVE BANK LTD.


ಪ್ರಧಾನ ಕಚೇರಿ : ಅಂಚೆ ಪೆಟ್ಟಿಗೆ ಸಂಖ್ಯೆ 217, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ - 577 002. ಫೋ. : 272540, 272541

## ಕಾರ್ಯನಿರ್ವಾಹಕ ಮಂಡಲಿ ಸದಸ್ಯರು :


ಶ್ರೀ ಕೋಗುಂಡಿ ಬಕ್ಕೇಶಪ್ಪ
ಅಧ್ಯಕ್ಷರು



ಶ್ರೀಮತಿ ಐ. ವಸಂತಕುಮಾರಿ
ಉಪಾಧ್ಯಕ್ಷರು



ಶ್ರೀ ಬಿ.ಸಿ.ಉಮಾಪತಿ
ನಿರ್ದೇಶಕರು


ಶ್ರೀ ಮತ್ತಿಹಳ್ಳಿ ವೀರಣ್ಣ
ನಿರ್ದೇಶಕರು


ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ
ನಿರ್ದೇಶಕರು


ಶ್ರೀ ಅಂದನೂರು ಮುಪ್ಪಣ್ಣ
ನಿರ್ದೇಶಕರು


ಶ್ರೀ ಎಂ. ಚಂದ್ರಶೇಖರ್
ನಿರ್ದೇಶಕರು


ಶ್ರೀ ಟಿ.ಎಸ್. ಜಯರುದ್ರೇಶ್
ನಿರ್ದೇಶಕರು


ಶ್ರೀ ದೇವರಮನೆ ಶಿವಕುಮಾರ್
ನಿರ್ದೇಶಕರು


ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್
ನಿರ್ದೇಶಕರು


ಶ್ರೀಮತಿ ಸುರೇಖ
ಎಂ. ಚಿಗಟೇರಿ
ನಿರ್ದೇಶಕರು


ಶ್ರೀ ಕಂಚಿಕೇರಿ ಮಹೇಶ್
ನಿರ್ದೇಶಕರು


ಶ್ರೀ ಎಸ್. ರಾಘವೇಂದ್ರ
ನಿರ್ದೇಶಕರು


ಶ್ರೀ ಇ.ಎಂ. ಮಂಜುನಾಥ
ನಿರ್ದೇಶಕರು


ಶ್ರೀ ಎಂ. ವಿಕ್ರಮ್
ನಿರ್ದೇಶಕರು


ಶ್ರೀ ಮುಂಡಾಸ ವೀರೇಂದ್ರ
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು


ಶ್ರೀ ವಿ. ಲಿಂಗರಾಜು
ಚಾರ್ಟರ್ಡ್ ಅಕೌಂಟೆಂಟ್
ವೃತ್ತಿಪರ ನಿರ್ದೇಶಕರು


ಶ್ರೀ ಬೆಳ್ಳೂಡಿ ಮಂಜುನಾಥ್
ವಿಶೇಷ ಆಹ್ವಾನಿತರು


ಶ್ರೀ ಎಂ. ದೊಡ್ಡಪ್ಪ
ವಿಶೇಷ ಆಹ್ವಾನಿತರು


ಶ್ರೀ ಡಿ.ವಿ. ಆರಾಧ್ಯಮಠ್
ಪ್ರಧಾನ
ವ್ಯವಸ್ಥಾಪಕರು


ಶ್ರೀ ಬಿ.ಎಸ್. ಮಲ್ಲೇಶ್
ಉಪ ಪ್ರಧಾನ
ವ್ಯವಸ್ಥಾಪಕರು

## ದಿನಾಂಕ 31.03.2020ಕ್ಕೆ ಇದ್ದಂತೆ ಲಾಭ-ಹಾನಿ ಪತ್ರಿಕೆ

| 31-03-2019 ರೂ. ಪೈ. | ಖರ್ಚು | | 31-03-2020 ರೂ. ಪೈ. |
|---|---|---|---|
| 20,01,22,623-43 | ಠೇವಣಿಗಳ ಮತ್ತು ತಂದ ಸಾಲಗಳ ಮೇಲೆ ಕೊಟ್ಟ ಬಡ್ಡಿ | | 23,17,43,788-97 |
| 3,80,34,054-00 | ಸಂಬಳ, ಭತ್ಯೆ, ಭವಿಷ್ಯ ನಿಧಿ ಮತ್ತು ಇತರೆ | | 4,29,89,143-00 |
| 1,32,500-00 | ಆಡಳಿತ ಮಂಡಲಿಯ ಸದಸ್ಯರುಗಳ ಭತ್ಯೆ | | 2,87,000-00 |
| 78,05,028-00 | ಬಾಡಿಗೆ, ತೆರಿಗೆಗಳು, ವಿಮೆ ಮತ್ತು ವಿದ್ಯುಚ್ಛಕ್ತಿ ಖರ್ಚುಗಳು | | 59,90,760-25 |
| 2,95,980-00 | ಕಾನೂನು ಖರ್ಚುಗಳು | | 1,60,000-00 |
| 2,44,644-90 | ಅಂಚೆ, ತಂತಿ ಮತ್ತು ದೂರವಾಣಿ ಖರ್ಚು | | 1,25,409-32 |
| 13,04,830-00 | ಲೆಕ್ಕ ಪರಿಶೋಧಕರ ಮತ್ತು ಮಾರಾಟಾಧಿಕಾರಿಗಳ ಸಂಬಳ | | 11,05,555-00 |
| 48,25,160-08 | ಆಸ್ತಿಗಳ ಮೇಲೆ ಸವಕಳಿ ಮತ್ತು ದುರಸ್ತಿ ಖರ್ಚು | | 60,99,523-66 |
| 1,47,561-76 | ಮುದ್ರಣ, ಲೇಖನ ಸಾಮಗ್ರಿಗಳು ಮತ್ತು ಜಾಹೀರಾತು | | 4,68,448-56 |
| 37,02,995-00 | ಲಕ್ಷ್ಮಿ ಠೇವಣಿ ಸಂಗ್ರಹಕಾರರ ಕಮೀಷನ್ | | 38,82,998-00 |
| 18,81,998-40 | ವಾರ್ಷಿಕ ಮಹಾಸಭೆಯ ಖರ್ಚು | | 8,22,789-00 |
| 45,75,044-39 | ಇತರೆ ಖರ್ಚುಗಳು | | 54,44,868-19 |
| **8,15,37,226-48** | **ಲಾಭ (ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳಿಗೆ ವಜಾ ಮಾಡುವ ಮೊದಲು)** | | 8,94,57,085-87 |
| **34,46,09,646-44** | **ಜುಮ್ಲಾ** | | **38,85,77,369-82** |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1) ಆದಾಯ ತೆರಿಗೆಗೆ ಅವಕಾಶ | 2,50,00,000-00 | |
| | 2) ಕರಡು ಸಾಲದ ನಿಧಿಗೆ ಅವಕಾಶ [ಆದಾಯ ತೆರಿಗೆ ಸೆ.36 (1)(Viia)] | 75,00,000-00 | |
| | 3) ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ -[ಸೆ.36(1)(Viii)] | 55,00,000-00 | |
| | 4) ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 15,00,000-00 | |
| | 5) ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,50,000-00 | |
| | 6) ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 53,16,462-00 | |
| 3,90,36,022-00 | | | 4,51,66,462.00 |
| **4,25,01,204-48** | **ನಿವ್ವಳ ಲಾಭ** | | **4,42,90,623.87** |
| **8,15,37,226-48** | **ಜುಮ್ಲಾ** | | **8,94,57,085.87** |

| 31-03-2019 ರೂ. ಪೈ. | ಆದಾಯ | 31-03-2020 ರೂ. ಪೈ. |
|---|---|---|
| 24,24,65,363-61 | ಸಾಲ ಮತ್ತು ಮುಂಗಡಗಳ ಮೇಲೆ ಬಂದ ಬಡ್ಡಿ | 27,83,27,537-78 |
| 9,39,53,438-78 | ವಿನಿಯೋಗಗಳ ಮೇಲೆ ಬಂದ ಆದಾಯ | 10,51,20,433-77 |
| 81,90,844-05 | ಇತರೆ ಜಮಾಗಳು | 51,29,398-27 |
| **34,46,09,646-44** | **ಜುಮ್ಲಾ** | 38,85,77,369-82 |
| **8,15,37,226-48** | ಲಾಭ ಮೇಲಿನಂತೆ ಬಂದಂತೆ | 8,94,57,085-87 |
| **8,15,37,226-48** | **ಜುಮ್ಲಾ** | **8,94,57,085-87** |

## ದಿನಾಂಕ 31.03.2020ಕ್ಕೆ ಇದ್ದಂತೆ ಅಢಾವೆ ಪತ್ರಿಕೆ

| 31-03-2019 ರೂ. ಪೈ. | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2020 ರೂ. ಪೈ. |
|---|---|---|---|
| **9,81,14,250-00** | **ಷೇರು ಬಂಡವಾಳ** | | **10,70,25,200-00** |
| | ವ್ಯಕ್ತಿಗತ ಮತ್ತು ಪಾಲುದಾರಿಕೆ ಸಂಸ್ಥೆಗಳಿಂದ ರೂ.100 ಮೌಲ್ಯದ 1070252 ಷೇರುಗಳು | | |
| **44,24,95,278-30** | **ಆಪದ್ಧನ ಮತ್ತು ಇತರೆ ನಿಧಿಗಳು** | | **47,65,27,685-78** |
| **42,75,82,584-32** | | **45,98,76,452-80** | |
| 17,69,05,173-32 | ಆಪದ್ಧನ ನಿಧಿ | 21,44,99,041-80 | |
| 4,30,00,000-00 | ಕಟ್ಟಡ ನಿಧಿ | 4,50,00,000-00 | |
| 46,00,000-00 | ಲಾಭಾಂಶ ಸಮನ್ವಯ ನಿಧಿ | 50,00,000-00 | |
| 10,00,00,000-00 | ಕರಡು ಸಾಲದ ನಿಧಿ | 8,10,00,000-00 | |
| 4,28,77,411-00 | ಕರಡು ಸಾಲದ ನಿಧಿ {ಆದಾಯ ತೆರಿಗೆ ಸೆಕ್ಷನ್ 36 (1)(viia)} | 5,03,77,411-00 | |
| 3,50,00,000-00 | ಗುಂತಾಯಿಸಿದ ಹಣದ ಮೇಲೆ ಸವಕಳಿ ನಿಧಿ | 3,60,00,000-00 | |
| 1,62,00,000-00 | ಗುಂತಾಯಿಸಿದ ಹಣದ ಮೇಲೆ ಏರಿಳಿತ ನಿಧಿ | 1,75,00,000-00 | |
| 90,00,000-00 | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 1,05,00,000-00 | |
| **1,49,12,693-98** | **ಇತರೆ ನಿಧಿಗಳು ಮತ್ತು ಕಾಯ್ದಿರಿಸಿದ ನಿಧಿಗಳು** | **1,66,51,232-98** | |
| 1,19,56,869-75 | ಸಿಬ್ಬಂದಿ ಸೌಕರ್ಯ ನಿಧಿ | 1,28,71,929-75 | |
| 14,00,000-00 | ಸಾರ್ವಜನಿಕ ಒಳಿತು ನಿಧಿ | 14,65,000-00 | |
| 1,44,824-23 | ಧರ್ಮನಿಧಿ | 61,303-23 | |
| 9,61,000-00 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 13,53,000-00 | |
| 4,50,000-00 | ಜುಬಿಲೀ ನಿಧಿ | 9,00,000-00 | |
| **330,32,59,119-16** | **ಠೇವಣಿಗಳು ಮತ್ತು ಇತರೆ ಖಾತೆಗಳು** | | **376,78,14,046-58** |
| **247,54,82,448-20** | **ಖಾಯಂ ಠೇವಣಿಗಳು** | **297,18,05,917-25** | |
| 234,21,22,227-20 | ವ್ಯಕ್ತಿಗಳಿಂದ | 275,39,18,629-25 | |
| 13,33,60,221-00 | ಇತರೆ ಸಂಸ್ಥೆಗಳಿಂದ | 21,78,87,288-00 | |
| **59,86,62,307-90** | **ಉಳಿತಾಯ ಠೇವಣಿಗಳು** | **59,50,25,401-30** | |
| 59,84,42,952-70 | ವ್ಯಕ್ತಿಗಳಿಂದ | 59,46,76,284-10 | |
| 2,19,355-20 | ಇತರೆ ಸಂಸ್ಥೆಗಳಿಂದ | 34,117-20 | |
| **22,79,02,075-83** | **ಚಾಲ್ತಿ ಠೇವಣಿಗಳು** | **19,97,70,850-88** | |
| 22,45,26,144-15 | ವ್ಯಕ್ತಿಗಳಿಂದ | 119,93,41,840-12 | |
| 33,75,931-68 | ಇತರೆ ಸಂಘಗಳಿಂದ | 4,29,010-76 | |
| **12,12,287-23** | **ಇತರೆ ಠೇವಣಿಗಳು** | **12,11,877-15** | |
| 12,12,287-23 | ವಾಯಿದೆ ಮೀರಿದ ಠೇವಣಿ | 12,11,877-15 | |
| **0-00** | **ಪಡೆದ ಸಾಲಗಳು** | | **0-00** |
| - | ಅಲ್ಪಾವಧಿ ಸಾಲಗಳು | -- | |
| - | ಮಧ್ಯಮಾವಧಿ ಸಾಲಗಳು | -- | |
| **34,220-00** | **ವಸೂಲಾಗತಕ್ಕ ಮತ್ತು ವಸೂಲಿಗೆ ಬಂದಿರುವ ಬಿಲ್ಲುಗಳು** | | **0-00** |
| **30,12,167-00** | **ಶಾಖೆಗಳ ಹೊಂದಾಣಿಕೆ** | | **0-00** |
| **6,16,66,032-10** | **ಕಟ್ಟುಬಾಕಿ ಬಡ್ಡಿ ಮೀಸಲು** | | **6,32,87,148-89** |
| **21,95,438-89** | **ಕೊಡಬೇಕಾದ ಬಡ್ಡಿ** | | **22,97,639-89** |
| **3,67,29,589-69** | **ಇತರೆ ಜವಾಬ್ದಾರಿಗಳು** | | **4,44,99,468-28** |
| 11,75,543-11 | ಪಾವತಿಯಾಗಬೇಕಾಗಿದ್ದ ಹುಂಡಿಗಳು | 13,70,299-92 | |
| 20,47,640-00 | ಪಡೆದಿರುವ ಲಾಭಾಂಶ | 21,39,503-00 | |
| 15,10,558-02 | ಸಂಡ್ರಿ ಬಾಬ್ತುಗಳು | 15,35,023-02 | |
| 3,71,000-00 | ಆಡಿಟ್ ಫೀ ಪಾವತಿಯಾಗಬೇಕಾದದ್ದು | 3,54,000-00 | |
| 22,30,019-00 | ಆದಾಯ ತೆರಿಗೆ ಅವಕಾಶ | 22,30,019-00 | |
| 54,86,022-00 | ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 53,16,462-00 | |
| 1,79,17,000-00 | ದೀರ್ಘಾವಧಿ ಸಾಲದ ಮೇಲೆ ಬಂದಂತಹ ಆದಾಯದ ಮೇಲೆ ಅವಕಾಶ | 2,34,17,000-00 | |
| 4,640-70 | ಬಿಲ್ಸ್ ಫಾರ್ ಕಲೆಕ್ಷನ್ | 3,632-70 | |
| 20,93,504-00 | ಟಿ.ಡಿ.ಎಸ್. ಪೇಯಬಲ್ | 26,58,693-60 | |
| 8,93,662-86 | ಸರಕು ಸೇವಾ ತೆರಿಗೆ | 4,74,835-04 | |
| 30,00,000-00 | ಸಿಬ್ಬಂದಿಗಳ ನಿವೃತ್ತಿ ಸಮಯದ ಗಳಿಕೆ ರಜೆ ನಗದೀಕರಣದ ಅವಕಾಶ | 50,00,000-00 | |
| **4,25,01,204-48** | **ಲಾಭ-ನಷ್ಟ ಖಾತೆ** | | **4,42,90,623-87** |
| | ಕಳೆದ ವರ್ಷದ ಅಢಾವೆ ಪತ್ರಿಕೆ ಲಾಭ | 4,25,01,204-48 | |
| | ವಿನಿಯೋಗಿಸಿದ್ದು | 4,25,01,204-48 | |
| | ಈ ಸಾಲಿನ ನಿವ್ವಳ ಲಾಭ | **4,42,90,623-87** | |
| | **ಷರಾ : ಈ ಸಾಲಿನಲ್ಲಿ ಗಳಿಸಿದ ಲಾಭ** | 8,94,57,085-87 | |
| | **ಆದಾಯ ತೆರಿಗೆ ಹಾಗೂ ಇತರೆ ಅವಕಾಶಗಳು** | | |
| | 1. ಆದಾಯ ತೆರಿಗೆ ಅವಕಾಶ | 2,50,00,000-00 | |
| | 2. ಕರಡು ಸಾಲದ ನಿಧಿ {ಆದಾಯ ತೆರಿಗೆ ಸೆಕ್ಷನ್ 36 (1)(viia)} | 75,00,000-00 | |
| | 3. ದೀರ್ಘಾವಧಿ ಸಾಲದ ಮೇಲೆ ಬಂದಂತಹ | 55,00,000-00 | |
| | ಆದಾಯದ ಮೇಲೆ ಅವಕಾಶ -ಸೆಕ್ಷನ್ 36 (1)(viii) | 15,00,000-00 | |
| | 4. ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | 35,00,000-00 | |
| | 5. ಆಡಿಟ್ ಫೀ ಪಾವತಿಯಾಗಬೇಕಾದದ್ದು | 53,16,462-00 | |
| | 6. ಸಿಬ್ಬಂದಿಗೆ ಎಕ್ಸ್‌ಗ್ರೇಷಿಯಾ ಅವಕಾಶ | 4,51,66,462-00 | |
| | **ನಿವ್ವಳ ಲಾಭ** | **4,42,90,623-87** | |
| **399,00,07,299-62** | **ಜುಮ್ಲಾ** | | **450,57,41,813-29** |
| **86,31,569-99** | **ಘಟನಾಪೇಕ್ಷ ಬಾಧ್ಯತೆಗಳು** | | **87,61,767-99** |
| | ಸ್ವೀಕಾರ ಸಮ್ಮತಿ ಲೇಖ ಮತ್ತು ಇತರೆ ಜವಾಬ್ದಾರಿಗಳು | | |
| 86,31,569-00 | ಆಧಾರ ಸಹಿತ | 87,61,767-99 | |
| 0-00 | ಆಧಾರ ರಹಿತ | 0-00 | |

| 31-03-2019 ರೂ. ಪೈ. | ಸ್ವತ್ತು ಮತ್ತು ಆಸ್ತಿ | | 31-03-2020 ರೂ. ಪೈ. |
|---|---|---|---|
| **24,58,01,104-27** | **ನಗದು ಮತ್ತು ಇತರೆ ಬ್ಯಾಂಕಿನಲ್ಲಿರುವ ಶಿಲ್ಕು** | | **27,03,48,980-85** |
| 3,59,81,484-00 | ಬ್ಯಾಂಕಿನಲ್ಲಿರುವ ನಗದು | 3,26,23,549-00 | |
| | ಎಸ್.ಬಿ.ಐ. ಮತ್ತು ಇತರೆ ಸಮವರ್ತಿ ಬ್ಯಾಂಕುಗಳಲ್ಲಿ ಹಾಗೂ ಕೆ.ಎಸ್.ಸಿ. ಅಪೆಕ್ಸ್ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ | | |
| 3,23,76,416-27 | ಚಾಲ್ತಿ ಖಾತೆ | 6,02,82,227-85 | |
| 17,74,43,204-00 | ಖಾಯಂ ಠೇವಣಿ | 17,74,43,204-00 | |
| **38,90,18,238-68** | **ಇತರೆ ಬ್ಯಾಂಕಿನಲ್ಲಿ ಶಿಲ್ಕು** | | **55,45,34,780-77** |
| 16,95,23,238-68 | ಚಾಲ್ತಿ ಖಾತೆ | 22,45,39,780-77 | |
| 21,94,95,000-00 | ಖಾಯಂ ಠೇವಣಿ | 32,99,95,000-00 | |
| 0-00 | ಕಾಲ್‌ಮನಿ ಹೂಡಿಕೆ | | **0-00** |
| **97,13,57,962-00** | **ಸಂಚಯಗಳು** | | **95,12,47,555-00** |
| **71,11,55,462-00** | ಕೇಂದ್ರ/ರಾಜ್ಯ ಸರ್ಕಾರದ ಭದ್ರತಾ ಪತ್ರಗಳು | **68,10,45,055-00** | |
| 71,11,55,462-00 | ಪುಸ್ತಕ ಬೆಲೆ | 68,10,45,055-00 | |
| 71,00,00,000-00 | ಮುಖಬೆಲೆ | 68,00,00,000-00 | |
| 70,35,89,000-00 | ಮಾರುಕಟ್ಟೆ ಬೆಲೆ | 69,30,72,000-00 | |
| **2,02,500-00** | ಸಹಕಾರಿ ಸಂಘಗಳ ಷೇರುಗಳು | **2,02,500-00** | |
| **26,00,00,000-00** | ಇತರೆ | **27,00,00,000-00** | |
| **225,83,91,717-27** | **ಸಾಲಗಳು** | | **260,24,47,665-48** |
| **108,82,50,522-97** | **ಅಲ್ಪಾವಧಿ ಸಾಲಗಳು ರೋಖ ಪತ್ರಗಳು ಓವರ್ ಡ್ರಾಫ್ಟ್‌ಗಳು** | **127,29,29,750-81** | |
| 107,51,77,717-27 | ಬಿಲ್ಲುಗಳು ಸೋಡಿ ಅವುಗಳಲ್ಲಿ ವಾಸ್ತವಿಕ ಭದ್ರತೆಗಳ ಮೇಲೆ | 126,15,65,750-81 | |
| 108,82,50,522-97 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 127,29,29,750-81 | |
| 2,04,16,457-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 6,72,61,709-00 | |
| **18,94,83,442-82** | **ಮಧ್ಯಮಾವಧಿ ಸಾಲಗಳು** | **11,69,74,675-66** | |
| 18,94,83,442-82 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 11,69,74,675-66 | |
| 18,94,83,442-82 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 11,69,74,675-66 | |
| 52,97,565-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 1,01,88,208-00 | |
| **98,06,57,751-48** | **ದೀರ್ಘಾವಧಿ ಸಾಲಗಳು** | **121,25,43,239-01** | |
| 98,06,57,751-48 | ಅವುಗಳಲ್ಲಿ ಸ್ವತ್ತುಗಳ ಆಧಾರದ ಮೇಲೆ | 121,25,43,239-01 | |
| 98,06,57,751-48 | ಅವುಗಳಲ್ಲಿ ವ್ಯಕ್ತಿಗಳಿಂದ ಬರಬೇಕಾದ ಬಾಕಿ | 121,25,43,239-01 | |
| 1,58,80,628-00 | ಅವುಗಳಲ್ಲಿ ಸುಸ್ತಿಯಾದ ಬಾಕಿ | 90,91,681-00 | |
| **34,220-00** | ವಸೂಲಾಗತಕ್ಕ ಮತ್ತು ವಸೂಲಿಗೆ ಕಳಿಸಿರುವ ಬಿಲ್ಲುಗಳು | | **0-00** |
| **1,71,64,000-00** | ಕಟ್ಟಡಗಳು (ಸವಕಳಿ ತೆಗೆದು) | | **1,55,13,400-00** |
| **81,06,900-00** | ಪೀಠೋಪಕರಣಗಳು ಮತ್ತು ಮುಟ್ಟುಗಳು | | **73,19,300-00** |
| **6,16,66,032-10** | ಬರಬೇಕಾದ ಬಡ್ಡಿ | | **6,32,87,148-89** |
| **0-00** | ಶಾಖೆಗಳ ಹೊಂದಾಣಿಕೆ | | **18,775-00** |
| **3,84,67,125-30** | **ಇತರೆ ಆಸ್ತಿಗಳು** | | **4,10,24,207-30** |
| 17,41,500-00 | ಗಣಕ ಯಂತ್ರಗಳು (ಕಂಪ್ಯೂಟರ್) | 17,46,000-00 | |
| 2,56,740-00 | ಮುಂಗಡ ಖಾತೆ | 1,64,002-00 | |
| 19,379-60 | ದೂರವಾಣಿ ಖಾತೆ | 1,8,837-50 | |
| 5,40,156-00 | ಆದಾಯ ತೆರಿಗೆ (ಟಿ.ಡಿ.ಎಸ್.) | 5,40,156-00 | |
| 2,17,92,901-00 | ತೊಡಗಣೆ ಮೇಲೆ ಬರಬೇಕಾದ ಬಡ್ಡಿ | 2,83,21,309-00 | |
| 1,50,000-00 | ಜೆರಾಕ್ಸ್ ಯಂತ್ರ | 1,07,528-00 | |
| 30,01,518-70 | ಮುದ್ರಣ ಮತ್ತು ಲೇಖನ ಸಾಮಗ್ರಿಗಳ ದಾಸ್ತಾನು | 26,06,246-80 | |
| 1,68,680-00 | ಕೆ.ಇ.ಬಿ. ಠೇವಣಿ | 1,68,680-00 | |
| 51,84,740-00 | ಮುಂಗಡ ಆದಾಯ ತೆರಿಗೆ | 51,84,740-00 | |
| 7,44,000-00 | ಯಂತ್ರೋಪಕರಣ | 15,16,200-00 | |
| 50,508-00 | ಇ-ಸ್ಟ್ಯಾಂಪ್ ಠೇವಣಿ ಮತ್ತು ಮುಂಗಡ | 50,508-00 | |
| 11,46,000-00 | ಕಂಪ್ಯೂಟರ್ ತಂತ್ರಾಂಶ | 6,00,000-00 | |
| 36,71,002-00 | ಆದಾಯ ತೆರಿಗೆ ಮರುಪಾವತಿ | 0-00 | |
| **399,00,07,299-62** | **ಜುಮ್ಲಾ** | | **450,57,41,813-29** |
| **86,31,569-99** | **ಸಾದಿಲ್ವಾರು ಜವಾಬ್ದಾರಿ** | | **8761767-99** |
| | ಸಂಘಟಿಕ ಜವಾಬ್ದಾರಿ ಸ್ವೀಕೃತ ಮತ್ತು ಇತರೆ ಬಾಧ್ಯತೆ | | |
| 86,31,569-99 | ಆಧಾರ ಸಹಿತ | 8,76,167-99 | |
| 0-00 | ಆಧಾರ ರಹಿತ | 0-00 | |

(5ನೇ ಪುಟಕ್ಕೆ)

# ಹೃದಯಕ್ಕಾಗಿ ಹೃದಯವಂತಿಕೆಯಿಂದ ನಮ್ಮ ಹೃದಯವನ್ನು ಗೆಲ್ಲೋಣ

ಹೃದ್ರೋಗವು ವಿಶ್ವದಲ್ಲಿ ಸಂಭವಿಸುವ ಸಾವಿನ ಪ್ರಮುಖ ಕಾರಣವಾಗಿದೆ. ಧೂಮಪಾನ, ಮಧುಮೇಹ, ಹೈಪರ್ ಟೆನ್ಷನ್, ಬೊಜ್ಜು ಮತ್ತು ವಾಯು ಮಾಲಿನ್ಯ ಹೃದಯ ಸಮಸ್ಯೆಗಳಿಗೆ ಕಾರಣವಾಗುತ್ತವೆ.

ಕೋವಿಡ್-19 ಸಾಂಕ್ರಾಮಿಕದ ಕಾಲಘಟ್ಟದಲ್ಲಿ ಸಿವಿಡಿ (Cardiovascular Diseases) ರೋಗಿಗಳು ಎರಡು ಅಲುಗಿನ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಹಾಗೂ ತಮ್ಮ ಹೃದಯದ ಆರೈಕೆಗೆ ತೆರಳಲು ಭಯಪಡುತ್ತಾರೆ.

ಆರೋಗ್ಯಕರ ಹೃದಯವನ್ನು ಹೊಂದಲು ಮತ್ತು ಆ ಜ್ಞಾನಕ್ಕೆ ಅನುಗುಣವಾಗಿ ನಡೆದುಕೊಳ್ಳಲು ನಮ್ಮ ನಡವಳಿಕೆಯನ್ನು ಬದಲಾಯಿಸಿಕೊಳ್ಳುವ ಅಗತ್ಯವಿದೆ. ಈ ಮೂಲಕ ಉತ್ತಮ ಗುಣಮಟ್ಟದ ಜೀವನವನ್ನು ಈಗ ಹಾಗೂ ಭವಿಷ್ಯದಲ್ಲಿ ಹೊಂದಬಹುದಾಗಿದೆ.

+ ವ್ಯಕ್ತಿಗಳಾಗಿ ನಾವು ನಮ್ಮ ಪ್ರೀತಿ ಪಾತ್ರರಿಗೆ ನಾವು ನಿದರ್ಶನವನ್ನು ತೋರಿಸಿಕೊಡಬೇಕು

+ ಆರೋಗ್ಯಸೇವಾ ವೃತ್ತಿಪರರಾಗಿ ನಮ್ಮ ರೋಗಿಗಳಿಗೆ ಅವರ ಹೃದಯ ಆರೋಗ್ಯಕ್ಕಾಗಿ ಧನಾತ್ಮಕ ಬದಲಾವಣೆಗಳನ್ನು ತರಲು ನೆರವಾಗಬೇಕು.

+ ಒಬ್ಬ ಉದ್ಯೋಗದಾತರಾಗಿ ತಮ್ಮ ಉದ್ಯೋಗಿಗಳ ಹೃದಯ ಆರೋಗ್ಯದ ಮೇಲೆ ಹೂಡಿಕೆ ಮಾಡಬೇಕು.

+ ನೀತಿ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುವ ಸರ್ಕಾರವಾಗಿ, ಸಮಾಜದ ಹೃದಯ ಆರೋಗ್ಯವನ್ನು ಉತ್ತಮಪಡಿಸಲು ಸಕ್ಕರೆ ತೆರಿಗೆ, ಧೂಮಪಾನ ನಿಷೇಧ ಹಾಗೂ ಮಾಲಿನ್ಯ ಕಡಿಮೆ ಮಾಡುವತ್ತ ಗಮನ ಹರಿಸಬೇಕು.

ನಮ್ಮ ಸ್ವಾರ್ಥದಿಂದಾಚೆಗೆ ದೃಷ್ಟಿ ಹರಿಸಬೇಕು ಮತ್ತು ಸಮಾಜದಲ್ಲಿ ತೀರಾ ದುರ್ಬಲರಾದವರಿಗೆ ಬೆಂಬಲ ನೀಡುವ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬೇಕು. ಕೋವಿಡ್ -19 ಕಾಲಘಟ್ಟದಲ್ಲಿ ಹೃದಯ ಸಂಬಂಧಿ ಸಮಸ್ಯೆಗಳಿರುವವರಿಗೆ ಅಪಾಯ ಸಾಧ್ಯತೆ ಹೆಚ್ಚು.

**ಉತ್ತಮ ಆಯ್ಕೆಗಳಿಗಾಗಿ ಹೃದಯ ಬಳಸಿ :** ಆರೋಗ್ಯಕರ ಆಹಾರ ಸೇವನೆ, ತಂಬಾಕು ತ್ಯಜಿಸುವುದು, ಮದ್ಯಪಾನ ಚಟಕ್ಕೆ ಅಂಟಿಕೊಳ್ಳದಿರುವುದು, ನಮ್ಮ ಮಕ್ಕಳು ಹಾಗೂ ಪ್ರೀತಿ ಪಾತ್ರರಿಗೆ ಉತ್ತಮ ನಿದರ್ಶನವಾಗಿ ಸಾಕಷ್ಟು ವ್ಯಾಯಾಮವನ್ನು ಮಾಡುವುದು. ಹೀಗೆ ನಾವೆಲ್ಲರೂ ನಮ್ಮ ಹೃದಯವನ್ನು ನೋಡಿಕೊಂಡು ಮತ್ತು ಸಿವಿಡಿ (Cardiovascular Diseases) ಯನ್ನು ತಡೆಯಲು ನೆರವಾಗಬೇಕು.

**ನಿಮ್ಮ ಹೃದಯವನ್ನು ಆಲಿಸಲು ಹೃದಯ ಬಳಸಿ**

ಹೃದ್ರೋಗ, ಹೃದಯ ವೈಫಲ್ಯ, ಮಧುಮೇಹ, ಅಧಿಕ ರಕ್ತದ ಒತ್ತಡ ಮತ್ತು ಬೊಜ್ಜಿನಂಥ ಸಮಸ್ಯೆಗಳಿದ್ದಲ್ಲಿ, ನಿಮ್ಮ ನಿಯಮಿತವಾದ ಆರೋಗ್ಯ ತಪಾಸಣೆಗೆ ಹಾಜರಾಗುವುದಕ್ಕೆ ಕೋವಿಡ್ -19 ಅಡ್ಡಿಯಾಗಬಾರದು. ಅಗತ್ಯವಿದ್ದಲ್ಲಿ ತುರ್ತು ಸೇವೆಗಳನ್ನು ಎಂದೂ ತಪ್ಪಿಸಿಕೊಳ್ಳಬೇಡಿ. ಅದು ಸುರಕ್ಷಿತ ಹಾಗೂ ವೈದ್ಯರು ನಿಮಗಾಗಿ ಇರುತ್ತಾರೆ.

**ಸಮಾಜಕ್ಕಾಗಿ, ನಿಮ್ಮ ಪ್ರೀತಿ ಪಾತ್ರರಿಗಾಗಿ & ನಿಮಗಾಗಿ ನಿಮ್ಮ ಹೃದಯ ಬಳಸಿ :** ವ್ಯಕ್ತಿಗಳು, ಸಮುದಾಯಗಳು ಮತ್ತು ವ್ಯಾಪಾರಸ್ಥರು ನಂಬಲಸಾಧ್ಯ ವಿಧಾನದ ಮೂಲಕ ಸಾಂಕ್ರಾಮಿಕದ ಅವಧಿಯಲ್ಲಿ ಸ್ಪಂದಿಸಬೇಕು. ವೃತ್ತಿಪರರು ಮತ್ತು ಸಮಾಜದ ದುರ್ಬಲರು ಪರಸ್ಪರ ನೆರವಾಗಬೇಕು. ವೈಯಕ್ತಿಕ ಮಟ್ಟದಿಂದ ಹಿಡಿದು ನಮ್ಮ ದೈನಂದಿನ ಆಯ್ಕೆಗಳ ಹಂತದವರೆಗೆ ಉತ್ತಮ ಆಯ್ಕೆಗಳನ್ನು ಮಾಡಬೇಕು. ನೀತಿಗಳಿಗೆ ಅನುಸಾರ ಆಯ್ಕೆಗಳನ್ನು ಸರ್ಕಾರ ಸ್ವೀಕರಿಸುತ್ತದೆ.

**ವೈದ್ಯರಿಗೆ ಕೃತಜ್ಞತೆ ಸಲ್ಲಿಸಲು ನಿಮ್ಮ ಹೃದಯ ಬಳಸಿ ಮತ್ತು ಪಾಲ್ಗೊಳ್ಳಲು ಹೃದಯ ಬಳಸಿ :** 2020ರ ವಿಶ್ವ ಹೃದಯ ದಿನಾಚರಣೆ ಹಿಂದೆಂದಿಗಿಂತಲೂ



ಇಂದು ವಿಶ್ವ ಹೃದಯ ದಿನ

ಪರಿಣಾಮಕಾರಿಯಾಗಲು ನಮಗೆ ನೆರವಾಗಿ, ಇದು ಜನ ದೀರ್ಘಾಯುಷಿಗಳಾಗಲು, ಉತ್ತಮ ಆರೋಗ್ಯಕರ ಜೀವನ ಸಾಗಿಸುವಂತೆ ಧನಾತ್ಮಕ ಬದಲಾವಣೆಗಳಿಗೆ ಇದು ಪ್ರಭಾವಿ ವೇದಿಕೆ. ಇವೆಲ್ಲವೂ ಸಾಧಾರಣವಾಗಿ ನಾವು ಮಾಡಬೇಕಾದ ಸಾಧನೆಗಳು.

ಹಾಗಾದರೆ ನಾವು ರೋಗ ರಹಿತವಾಗಿ ಜೀವಿಸಲು ಸಾಧ್ಯವೇ ? ಎಂಬ ಪ್ರಶ್ನೆಗೆ 12ನೇ ಶತಮಾನದಲ್ಲೇ ನಮ್ಮ ಬಸವಾದಿ ಶರಣರು ಹೇಳಿದ್ದಾರೆ. ವೈದ್ಯ ಸಂಗಣ್ಣನವರು, ತಾಯಿ ಅಕ್ಕಮಹಾದೇವಿಯವರು ತಮ್ಮ ವಚನಗಳಲ್ಲಿ ರೋಗಗಳು ಬರದಂತೆ ಮುನ್ನೆಚ್ಚರಿಕೆ ವಹಿಸುವ ಹಾಗೂ ರೋಗರಹಿತ ಜೀವನವನ್ನು ನಿರ್ವಹಿಸುವ ಮಹತ್ವವಾದ ವಿಚಾರವನ್ನು ತಿಳಿಸಿದ್ದಾರೆ. ಆದರೆ, ಅವರು ಹೇಳಿರುವ ಮಾತನ್ನು ಪಾಲಿಸುವುದು ಸುಲಭವಲ್ಲ, ಕಷ್ಟಸಾಧ್ಯ. ಪ್ರಯತ್ನ ಮತ್ತು ಶ್ರದ್ಧೆ ಎಂಬ ಆಯುಧಗಳಿಂದ ಇದನ್ನು ಗೆಲ್ಲಬಹುದು.

ಆದರೆ ಈಗಿನ ಪರಿಸ್ಥಿತಿಯಲ್ಲಿ ಎಲ್ಲರಿಗು ಸಂಪತ್ತನ್ನು ಗಳಿಸುವುದೇ ದೊಡ್ಡ ಕೆಲಸವಾಗಿದೆ. ಸಿರಿಗರ ಹೊಡೆದವನ ಹೇಗೆ ಎಚ್ಚರಿಸುವುದು. ಮನುಷ್ಯ ತನ್ನ ಅಹಂಕಾರವನ್ನು ಬಿಟ್ಟು ಸಕಲ ಜೀವರಾಶಿಗಳಿಗೆ ಒಳ್ಳೆಯದನ್ನೇ ಬಯಸುತ್ತಾ, ಎಲ್ಲರನ್ನು ತನ್ನಂತೆ ಕಂಡು, ಎಲ್ಲರಲ್ಲಿ ವಿನಯದಿಂದ ವರ್ತಿಸುತ್ತಾ ಮತ್ತು ಪಾರಮಾರ್ಥದ ಹಾದಿಯಲ್ಲಿ ನಡೆಯಬೇಕು. ಆಗ ಆ ಮಹಾಶಕ್ತಿಯಾದ ಸಕಲ ಚೈತನ್ಯಾತ್ಮಕ ಸೃಷ್ಟಿಕರ್ತನಾದ ಆ ದೇವರ ಕರುಣೆಯಿಂದ ತಾನು ತನ್ನವರು ಎಲ್ಲರು ಸುಖಮಯವಾದ, ರೋಗವಿಲ್ಲದ (ದೈಹಿಕವಲ್ಲ ಮಾನಸಿಕ ರೋಗದಿಂದ ಕೂಡಾ ಹೊರಬಂದು) ಶಾಶ್ವತವಾದ ಜೀವನವನ್ನು ನಡೆಸಬಹುದು ಎಂಬ ಮಾತನ್ನು ಅಕ್ಕಮಹಾದೇವಿಯವರ ವಚನದಲ್ಲಿ ಸುಂದರವಾಗಿ ವಿವರಿಸಿದ್ದಾರೆ.

ಕೊನೆಗೆ ಚನ್ನಮಲ್ಲಿಕಾರ್ಜುನನೊಲಿಸುವ ಈ ದೇಹವನ್ನು ಕೆಡದಂತೆ ಕಾಪಾಡಿಕೊಳ್ಳುವ ವಿಧಾನವನ್ನು ತಿಳಿಸಿದ್ದಾರೆ. ಆದರೆ ಎಲ್ಲರು ಬರಿ ದೇಹದಿಂದಲೇ ನಡೆಯುವ ಕಾರ್ಯಗಳಿಗೆ ತುತ್ತಾಗುತ್ತಾರೆ. ಮುಖ್ಯವಾಗಿ ಮಾನಸಿಕವಾಗಿ, ಭಾವನಾತ್ಮಕವಾಗಿ ಯಾರೂ ಜೀವನವನ್ನು ನಡೆಸುವುದಿಲ್ಲ. ಎಲ್ಲವು ತನ್ನದೇ, ತನಗಾಗಿಯೇ ಆಗಬೇಕು, ಹೇಗಾದರು ಸರಿಯೇ ಎಂಬ ದುರಾಸೆಯಿಂದ, ಅಹಂಕಾರದಿಂದ ವರ್ತಿಸುತ್ತಾ ಮತ್ತೆ ಈ ಭವರೋಗಕ್ಕೆ ತುತ್ತಾಗುತ್ತಾರೆ.

ಇದರಲ್ಲಿ ಮುಖ್ಯವಾಗಿ ಈಗಿನ ವಿದ್ಯಾಭ್ಯಾಸವು ಕೂಡ ನಮ್ಮನ್ನು ಚೆನ್ನಾಗಿ ಸಂಪಾದಿಸಲು ಕಲಿಸುತ್ತದೆ, ಆದರೆ ಹೇಗೆ ನಿರೋಗದಿಂದ ಬದುಕಬೇಕು ಎಂಬುದಕ್ಕೆ ಹೆಚ್ಚು ಒತ್ತು ಕೊಟ್ಟಿಲ್ಲ ಹಾಗೂ ಶಾಲೆಗಳಲ್ಲಿ ಹೆಚ್ಚಾಗಿ ದೈವತ್ವದ ಕಡೆ ಗಮನಹರಿಸಿ ಎಲ್ಲರು ಎಲ್ಲ ಮಾನವರನ್ನು ದೇವರನ್ನಾಗಿಸುವ ಪರಿಯನ್ನು ಹೆಚ್ಚು ಹೆಚ್ಚಾಗಿ ಅಳವಡಿಸಿಕೊಳ್ಳುವ ಹಾಗೆ ಮಾಡಬೇಕು. ಅದಕ್ಕೆ ನಮ್ಮ ಉಪಾಧ್ಯಾಯರುಗಳು ಮೊದಲು ಆ ಭಾವನೆಯಲ್ಲಿದ್ದು, ಅದರಂತೆ ಮಕ್ಕಳು ನಡೆದುಕೊಳ್ಳುವ ಹಾಗೆ ಮಾಡಬೇಕು.

ನಮ್ಮ ಶಾಲಾ - ಕಾಲೇಜುಗಳಲ್ಲಿ ಸಂಪತ್ತು ಗಳಿಸುವುದೇ ಮುಖ್ಯವಲ್ಲ, ಒಬ್ಬ ವ್ಯಕ್ತಿ ಜೀವನದಲ್ಲಿ ಹೇಗೆ ಮಾನವೀಯ ಮೌಲ್ಯಗಳಿಂದ ಬದುಕುತ್ತಾನೆ ಮತ್ತು ಎಲ್ಲರನ್ನು ಹೇಗೆ ಕಾಣಬೇಕು ಅನ್ನುವುದು ಮುಖ್ಯ, ಅದನ್ನು ಮನವರಿಕೆ ಮಾಡಿಕೊಡಬೇಕು

ಆದ್ದರಿಂದ ಸ್ನೇಹಿತರೆ, ಎಲ್ಲರು ಎಲ್ಲರನ್ನು ಗೌರವಿಸಿ, ಆನಂದದಿಂದ ಬದುಕಲು ಕಲಿತರೆ, ಮನಸ್ಸು, ಭಾವನೆಗಳು ಆನಂದಮಯವಾಗಿ ನಾವು ಯಾವ ರೋಗಗಳಿಗೂ ತುತ್ತಾಗುವುದಿಲ್ಲ. ಇದರಿಂದ ನಮ್ಮ ಕುಟುಂಬ, ಸಮಾಜ ಮತ್ತು ದೇಶ ಎಲ್ಲವು ಆರೋಗ್ಯಕರವಾಗಿ ಎಲ್ಲರ ವಿಕಾಸಕ್ಕೆ ಕಾರಣವಾಗುತ್ತದೆ. ಎಲ್ಲರು ಇದಕ್ಕಾಗಿ ಪ್ರಯತ್ನಿಸೋಣ, ಈಗಾಗಲೇ ಅನಾರೋಗ್ಯದಿಂದ್ದವರು ವೈದ್ಯರಿಂದ ಸಲಹೆ ಪಡೆದು, ಔಷಧ ಸೇವನೆ ಮತ್ತು ತಮ್ಮ ಜೀವನದ ವೈಖರಿ ಮತ್ತು ಭಾವನೆಗಳನ್ನು ತಿದ್ದಿಕೊಂಡು ಅವರು ಸಹ ಆರೋಗ್ಯವಂತರಾಗಲಿ ಎಂದು ನಾನು ಹಾರೈಸುತ್ತೇನೆ. ಈ ಜಾಗತಿಕ ಹೃದಯ ದಿನಾಚರಣೆಯ ದಿನದಂದು ತಮ್ಮೆಲ್ಲರಿಗೂ ಹೃದಯಪೂರಕ ಶುಭಾಶಯಗಳು.

ನಾವೆಲ್ಲರು ನಮ್ಮ ಹೃದಯವನ್ನು ಹೃದಯಕ್ಕಾಗಿ ಹೃದಯವಂತಿಕೆಯಿಂದ ಗೆಲ್ಲೋಣ



**- ಡಾ|| ಪ್ರಕಾಶ್ ಹಿರೇಮಠ್**
ಹಿರಿಯ ಹೃದಯ ಶಸ್ತ್ರ ಚಿಕಿತ್ಸಾ ತಜ್ಞರು,
ಎಸ್. ಎಸ್. ನಾರಾಯಣ
ಹಾರ್ಟ್ ಸೆಂಟರ್, ದಾವಣಗೆರೆ.
ಮೊ. 99864-43042

## ಬಾರದ ಲೋಕಕ್ಕೆ ಬಾಲು

ಬಾಲು ಇನ್ನೂ ನೆನಪು ಮಾತ್ರ
ಮುತ್ತು ಮುತ್ತು ನೀರ ಹನಿಯ ಹರಸಿ ದಾತ
ಆಕಾಶದೀಪ ವಾದ ಗಾನ ಗಾರುಡಿಗ
ನೋಟದಾಗೆ ನಗೆಯ ಮೀಟಿ ಹೊರಟರು ಬಾಲು

ಧಣಿ ವಿಲ್ಲದೆ ಐದು ದಶಕಗಳ ನಿರಂತರ ಗಾಯನ
ನಕ್ಕರೆ ಅದೇ ಸ್ವರ್ಗ ಎಂದವರು ಇನ್ನಿಲ್ಲ
ಆ ಸುಂದರ ಬೆಳದಿಂಗಳಲ್ಲಿ ಲೀನವಾದ ಬಾಲಣ್ಣ
ಅನಾಥವಾಯಿತು ಸಂಗೀತ ಲೋಕ ಕಳಚಿತು
ಕೊಂಡಿ

ಪ್ರೇಮಲೋಕದ ಪಾರಿಜಾತ ನೆನಪು ಮಾತ್ರ
ಸ್ವರ ನಿಲ್ಲಿಸಿದ ಸ್ವರ ಬ್ರಹ್ಮ
ಸಿನಿಮಾರಂಗದಿಂದ ಸ್ವಾತಿಮುತ್ತು ದೂರವಾಯಿತು
ಸ್ನೇಹದ ಕಡಲು ತೊರೆದ ಪ್ರೇಮದ ಹೂಗಾರ

ಒಲವೇ ಮರೆಯದ ಮಮಕಾರ ಹೇಳಿ ಹೊರಟರು
ಮುದ್ದಿನ ಹುಡುಗಿ ಚಿನ್ನ ಎಂದವರು
75 ಚಿತ್ರಗಳಲ್ಲಿ ಬಣ್ಣ ಹಚ್ಚಿದ
ಏಕೈಕ ಗಾಯಕ ಬಾಲಣ್ಣ

ಭೂಮಿಯಿಂದ ಮರೆಯಾದ
ನಗುವ ನಯನ ಎಂದು ಕಣ್ಣುಮುಚ್ಚಿದ
ಸುಮಧುರ ಗಾಯಕ
ಬಡವಾಯಿತು ಸಂಗೀತ ಲೋಕ

ಬದುಕಿರುವಾಗಲೇ ದಂತಕಥೆಯಾದ ವ್ಯಕ್ತಿ
ಎಲ್ಲಾ ಕಾಲಕ್ಕೂ ಅನ್ವಯದ ಸಂಗೀತಗಾರ
ಗಾನ ನಿಲ್ಲಿಸಿದ ಗಾನ ಗಂಧರ್ವ
ಎಲ್ಲಾ ಭಾಷೆಗಳಲ್ಲೂ ಎದೆ ತುಂಬಿ ಹಾಡಿದರು

ಸ್ವರಗಳ ಏರಿಳಿತ ಅರಿತಿದ್ದ ಬಾಲು
ಸ್ವರ ಮಾಧುರ್ಯದಲ್ಲಿ ತನ್ಮಯತೆ
40000 ಹಾಡು ಹಾಡಿದ ಸರದಾರ
16 ಭಾಷೆಗಳಲ್ಲಿ ಗಾಯನದ ಮೋಡಿಗಾರ

ಹಾಡಿನ ಮೂಲಕವೇ ಜಗ ಮೆಚ್ಚಿದ ಮಗ
ಸಂಗೀತ ಲೋಕಕ್ಕೆ ಬಾಲು ದೇವರು ಕೊಟ್ಟ ವರ
ನೂರೊಂದು ನೆನಪು ಬಿಟ್ಟುಹೋದ ಬಾಲು
ಮತ್ತೊಮ್ಮೆ ಹುಟ್ಟಿ ಬಾ ಭವ್ಯ ಭಾರತದಲಿ

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

## ಕಾಂಗ್ರೆಸ್ ರಾಜ್ಯಗಳ ಕ್ರಮ

**(1ನೇ ಪುಟದಿಂದ)** ತಿಳಿಸಿದ್ದಾರೆ.

ಕಾಂಗ್ರೆಸ್ ಆಡಳಿತದ ಪಂಜಾಬ್ ಸೇರಿದಂತೆ ಹಲವು ರಾಜ್ಯಗಳಲ್ಲಿ ಕೃಷಿ ಕಾಯ್ದೆಗಳಿಗೆ ತರಲಾದ ತಿದ್ದುಪಡಿಗಳಿಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ.

# 'ಅನ್ನದಾತನ ಬಂದ್'ಗೆ ಉತ್ತಮ ಸ್ಪಂದನೆ



### ಸರ್ಕಾರಿ ಸಾರಿಗೆ ನಂಬಿ ಅತಂತ್ರರಾದ ಪ್ರಯಾಣಿಕರು

**(1ನೇ ಪುಟದಿಂದ)** ಬೆಂಗಳೂರಿಗೆ ತೆರಳಲು ಬೆಳಿಗ್ಗೆ 7 ಗಂಟೆಯ ಬಸ್ ಹತ್ತಿದ್ದೆ. ಬೆಂಗಳೂರಿನ ಬದಲು ಮುಂದಿನ ಊರಿನ ಟಿಕೆಟ್ ಮಾತ್ರ ಕೊಡುತ್ತಿದ್ದರು. ದಾವಣಗೆರೆಯಲ್ಲಿ ಇಳಿಸಿ ಬಸ್ ನಿಲ್ಲಿಸಿದ್ದಾರೆ ಎಂದು ತಿಳಿಸಿದರು. ಬಸ್ ಸಂಚಾರಕ್ಕೆ ನಾವೆಲ್ಲರೂ ಸಿದ್ಧವಾಗಿದ್ದೇವೆ. ಆದರೆ, ಪ್ರತಿಭಟನೆಯಿಂದಾಗಿ ಬಸ್ ನಿಲ್ಲಿಸಲಾಗಿದೆ. ಪ್ರತಿಭಟನೆ ತಿಳಿಯಾದ ಮೇಲೆ ಬಸ್ ಹೊರಡಲಿದೆ ಎಂದು ಸಾರಿಗೆ ನಿಗಮದ ಅಧಿಕಾರಿಗಳು ಪ್ರಯಾಣಿಕರಿಗೆ ತಿಳಿಸುತ್ತಿದ್ದುದು ಕಂಡು ಬಂತು.

**(1ನೇ ಪುಟದಿಂದ)** ಜಯದೇವ ವೃತ್ತ ಹಾಗೂ ಅಂಬೇಡ್ಕರ್ ವೃತ್ತದ ಬಳಿ ಹಲವಾರು ಸಂಘಟನೆಗಳ ಮುಖಂಡರು ಧರಣಿ ನಡೆಸಿ, ಸರ್ಕಾರದ ನೀತಿಗಳು ರೈತರಿಗೆ ಮಾರಕವಾಗುವಂತಿವೆ. ಇದರಿಂದಾಗಿ ಕಂಪನಿಗಳು ಬಲವಾಗಲಿದ್ದರೆ, ಕೃಷಿಕರು ಬಡವಾಗುತ್ತಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಚಿತ್ರ ಹಾಗೂ ಪ್ರತಿಕೃತಿಗಳನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಲಾಯಿತು.

ಮುಖ್ಯ ರಸ್ತೆಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಅಂಗಡಿ - ವ್ಯವಹಾರಗಳು ಬಹುತೇಕ ಎಂದಿನಂತೆ ನಡೆದವು. ಇದರಿಂದಾಗಿ ಮುಷ್ಕರ ನಡೆಯದ ಪ್ರದೇಶಗಳಲ್ಲಿ ಜನ ಸಂಚಾರವೂ ಸಾಮಾನ್ಯದ ಹಂತದಲ್ಲೇ ಇತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕ್ರಮಗಳನ್ನು ತೆಗೆದುಕೊಂಡಿದ್ದರು.

ಹೆದ್ದಾರಿಯಲ್ಲಿ ಬೆಳಗಿನ ಜಾವ ಬಂದ್‌ಗೆ ಮುಂದಾಗಿದ್ದ ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ್ ಶಿವಗಂಗಾ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರು.

ರೈತ ಸಂಘಟನೆಗಳ ಬಂದ್‌ನಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಅಖಿಲ ಭಾರತ ಕಿಸಾನ್ ಸಭಾ, ಕರ್ನಾಟಕ ಪ್ರಾಂತ ರೈತ ಸಂಘ, ಎ.ಐ.ವೈ.ಎಫ್., ಕನ್ನಡ ರಕ್ಷಣಾ ವೇದಿಕೆ ಮತ್ತಿತರೆ ಸಂಘಟನೆಗಳು ಭಾಗವಹಿಸಿದ್ದವು. ಕಾಂಗ್ರೆಸ್, ಜೆಡಿಎಸ್, ಆಮ್ ಆದ್ಮಿ ಪಾರ್ಟಿಗಳು ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದವು.

ಬಂದ್ ಅಂಗವಾಗಿ ಜಯದೇವ ವೃತ್ತದಲ್ಲಿ ನಡೆಸಲಾದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಎ. ನಾಗರಾಜ್, ದೇವರಮನಿ ಶಿವಕುಮಾರ್, ಡಿ. ಬಸವರಾಜ್, ಕೆ.ಎಸ್. ಬಸವಂತಪ್ಪ, ಗಡಿಗುಡಾಳ್ ಮಂಜುನಾಥ್, ಅನಿತಾ ಬಾಯಿ ಮಾಲತೇಶ್, ವಿನಾಯಕ ಪೈಲ್ವಾನ್, ಉಮೇಶ್, ಮುದೇಗೌಡ್ರ ಗಿರೀಶ್, ಚಮನ್ ಸಾಬ್, ಇಟ್ಟಿಗುಡಿ ಮಂಜುನಾಥ್, ಆಶಾ ಮುರಳಿ, ಸವಿತಾ ಚಂದ್ರಶೇಖರ್, ಸುಷ್ಮಾ ಪಾಟೀಲ್, ಶುಭಮಂಗಳ ಭಾಗವಹಿಸಿದ್ದರು.

ಕಮ್ಯುನಿಸ್ಟ್ ಮುಖಂಡ ಹೆಚ್.ಕೆ. ರಾಮಚಂದ್ರಪ್ಪ, ರಾಜ್ಯ ರೈತ ಸಂಘದ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಅಖಿಲ ಭಾರತ ಕಿಸಾನ್ ಸಭಾದ ಹೆಚ್.ಜಿ. ಉಮೇಶ್, ಕರ್ನಾಟಕ ಪ್ರಾಂತ ರೈತ ಸಂಘದ ಶ್ರೀನಿವಾಸ್, ರೈತ ಮುಖಂಡರಾದ ತೇಜಸ್ವಿ ಪಟೇಲ್, ಮುನಿಯಪ್ಪ, ಚನ್ನಬಸಪ್ಪ, ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಮಂಜುನಾಥ ಕೈದಾಳೆ, ಮಂಜುನಾಥ ಕುಕ್ಕುವಾಡ, ತಿಪ್ಪೇಸ್ವಾಮಿ, ಮಧು ತೊಗಲೇರಿ, ಲೋಕೇಶ್ ನೀರ್ಥಡಿ, ಭಾರತಿ, ಸೌಮ್ಯ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಎಪಿಎಂಸಿ ಮುಚ್ಚುವ ಪ್ರಶ್ನೆಯೇ ಇಲ್ಲ : ಸಿಎಂ

**(1ನೇ ಪುಟದಿಂದ)** ಅನ್ಯ ಬಳಕೆಯಾಗುವುದಿಲ್ಲ. 18 ರಿಂದ 20 ಲಕ್ಷ ಹೆಕ್ಟೇರ್ ಬಂಜರು ಭೂಮಿ ಇದೆ. ಆ ಭೂಮಿಯನ್ನು ಮಾತ್ರ ಕೈಗಾರಿಕೆಗಳ ಅಭಿವೃದ್ದಿಗೆ ಬಳಕೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು. ಶೇ. 1 ರಷ್ಟು ಭೂಮಿ ಮಾತ್ರ ಕೈಗಾರಿಕಾ ಅಭಿವೃದ್ಧಿಗೆ ಬಳಸಲಾಗುವುದು. ನಿರುದ್ಯೋಗ ಸಮಸ್ಯೆ ನಿವಾರಿಸಲು ಮತ್ತು ರಾಜ್ಯದ ಸಂಪನ್ಮೂಲ ಕ್ರೋಢೀಕರಣಕ್ಕೆ ಕೈಗಾರಿಕೆಗಳ ಸ್ಥಾಪನೆ ಅತ್ಯವಶ್ಯ. ಈ ಹಿನ್ನೆಲೆಯಲ್ಲಿ ಭೂ ಸುಧಾರಣೆ ಕಾಯ್ದೆ ತಂದಿದ್ದೇವೆ.

ಅದು 54 ಎಕರೆ ಮಾತ್ರ ಭೂಮಿ ಖರೀದಿ ಮಾಡಬಹುದು. ನೀರಾವರಿ ಭೂಮಿಯನ್ನು ಅನ್ಯ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳುವಂತಿಲ್ಲ. ಅಲ್ಲಿ ಕೃಷಿ ಚಟುವಟಿಕೆ ಮಾಡಬೇಕು ಎಂದರು.

ಕಾಂಗ್ರೆಸ್‌ನವರು ಕೆಲವು ಸಂಘಟನೆಗಳು ಹಾಗೂ ರೈತರನ್ನು ಗೊಂದಲಕ್ಕೆ ತಳ್ಳುತ್ತಿದ್ದಾರೆ. ಕಾಂಗ್ರೆಸ್ ನಾಯಕರ ಮಾತುಗಳಿಗೆ ಕಿವಿಗೊಡಬಾರದು ಎಂದರು.

## ಸಚಿವ ಸುರೇಶ್ ಅಂಗಡಿ ನಿಧನಕ್ಕೆ ಶಾಸಕ ಪೂಜಾರ್ ಸಂತಾಪ

ರಾಣೇಬೆನ್ನೂರು, ಸೆ.28- ಕೇಂದ್ರ ರೈಲ್ವೆ ರಾಜ್ಯ ಸಚಿವ ಸುರೇಶ್ ಅಂಗಡಿ ಅವರ ಅಕಾಲಿಕ ನಿಧನಕ್ಕೆ ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಶ್ರೀ ಗಳು, ಶಾಸಕ ಅರುಣ್‌ಕುಮಾರ್ ಪೂಜಾರ್, ಮುಖಂಡರುಗಳಾದ ಡಾ. ಬಸವರಾಜ ಕೇಲಗಾರ್, ಎ.ಬಿ.ಪಾಟೀಲ್, ಕುಮಾರ ಜಂಬಗಿ, ಭಾರತಿ ಜಂಬಗಿ, ಬಿಜೆಪಿ ಅಧ್ಯಕ್ಷ ಬಸವರಾಜ್ ಕೇಲಗಾರ್, ಕೆ.ವಿ.ಶ್ರೀನಿವಾಸ್, ಬಿ.ಎನ್.ಪಾಟೀಲ್ ಮತ್ತಿತರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ಎಸ್.ಪಿ.ಬಿ ಅವರೊಂದಿಗೆ ಸಂತಸದ ಕ್ಷಣದಲ್ಲಿ ಡಾ. ಶಿವಯೋಗಿ ಸ್ವಾಮಿ



ದಾವಣಗೆರೆ,ಸೆ.28- ಹಿರಿಯ ಗಾಯಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ನಿಧನಕ್ಕೆ ಶೋಕ ವ್ಯಕ್ತಪಡಿಸಿರುವ ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ನಗರದಲ್ಲಿ ನಡೆದ ಕಾರ್ಯಕ್ರಮದ ವೇದಿಕೆಯನ್ನು ಸುಬ್ರಹ್ಮಣ್ಯಂ ಅವರೊಂದಿಗೆ ಹಂಚಿಕೊಂಡ ಕ್ಷಣವನ್ನು ಮೆಲುಕು ಹಾಕಿದ್ದಾರೆ.

2020, ಜನವರಿ 12ರಂದು ಸೋಮೇಶ್ವರ ವಿದ್ಯಾಲಯದಲ್ಲಿ ಆಯೋಜನೆಗೊಂಡಿದ್ದ ಸೋಮೇಶ್ವರೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇ ಬಾಲಸುಬ್ರಹ್ಮಣ್ಯಂ ಅವರ ದಾವಣಗೆರೆಯ ಕೊನೆ ಭೇಟಿ ಕಾರ್ಯಕ್ರಮವಾಯಿತು ಎಂದು ಶಿವಯೋಗಿಸ್ವಾಮಿ ಹೇಳಿದ್ದಾರೆ.

ಈ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಬಾಲಸುಬ್ರಹ್ಮಣ್ಯಂ ಅವರು ಅಂದು ತಮ್ಮ ನಿವಾಸದಲ್ಲೇ ತಂಗಿದ್ದರು. ಈ ಸಂದರ್ಭದಲ್ಲಿ ಅವರೊಂದಿಗೆ ಕಳೆದ ಕ್ಷಣಗಳನ್ನು ಸ್ಮರಿಸಿರುವ ಡಾ. ಸ್ವಾಮಿ, ಬಾಲಸುಬ್ರಹ್ಮಣ್ಯಂ ಅವರ ವ್ಯಕ್ತಿತ್ವ ಮತ್ತು ತಮ್ಮ ಕಂಠ ಸಿರಿ ಮೂಲಕ ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಮೆಲುಕು ಹಾಕಿದ್ದಾರೆ.

## ಐಸಿಆರ್ ತರಳಬಾಳು ಕೃಷಿ ಕೇಂದ್ರದಿಂದ ಶೇಂಗಾ ಬೆಳೆಯಲ್ಲಿ ಕ್ಷೇತ್ರೋತ್ಸವ



ನ್ಯಾಮತಿ, ಸೆ.28- ದಾವಣಗೆರೆಯ ಐಸಿಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದಿಂದ ನ್ಯಾಮತಿ ತಾಲ್ಲೂ ಕಿನ ರಾಮೇಶ್ವರ ಗ್ರಾಮದಲ್ಲಿ ಶೇಂಗಾ ಬೆಳೆಯಲ್ಲಿ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು. ಬೇಸಾಯ ತಜ್ಞ ಮಲ್ಲಿಕಾರ್ಜುನ್ ಮಾತನಾಡಿ, ಶೇಂಗಾ ತಳಿಗಳಾದ GPBD 4 ಹಾಗೂ G-2-52 ಉತ್ತಮವಾಗಿದ್ದು, ಮುಂದಿನ ದಿನಗಳಲ್ಲಿ ಈ ತಳಿಗಳನ್ನು ರೈತ ಬಾಂಧವರು ನ್ಯಾಮತಿ ತಾಲ್ಲೂಕಿನಲ್ಲಿ ಬೆಳೆಯಬಹುದು. ಎರಡು ತಳಿಗಳು ಉತ್ತಮ ಕಾಯಿ ಇಳುವರಿ ಕೊಡುವ ಜೊತೆಗೆ ಮೇವಿನ ಇಳುವರಿಯು ಕೂಡ ಉತ್ತಮವಾಗಿದ್ದು, ಕಟಾವು ಮಾಡುವ ಸಮಯದಲ್ಲಿ ಇನ್ನೂ ಹಸಿರಾಗಿ ಇರುತ್ತದೆ.

ಕೇಂದ್ರದ ವಿಸ್ತರಣಾ ತಜ್ಞ ರಘುರಾಜ್ ಮಾತನಾಡಿ, ಈ ತಳಿಗಳನ್ನು ಬೀಜೋತ್ಪಾದನೆ ಮಾಡುವುದು ಉತ್ತಮ ಎಂದರು.

ರಾಮೇಶ್ವರ ಗ್ರಾಮದ ಪ್ರಗತಿಪರ ರೈತ ಮಲ್ಲೇಶಪ್ಪ ಅವರು, ಶೇಂಗಾ ತಳಿಗಳು ಉತ್ತಮವಾಗಿ ಬಂದಿದ್ದು, ನಮಗೆ ದನಕರುಗಳಿಗೆ ಉತ್ತಮ ಮೇವು ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.


# ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

DAVANAGERE URBAN CO-OPERATIVE BANK LTD.

**ಪ್ರಧಾನ ಕಚೇರಿ : ಅಂಚೆ ಪೆಟ್ಟಿಗೆ ಸಂಖ್ಯೆ 217, ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ದಾವಣಗೆರೆ - 577 002. ಫೋ. : 272540, 272541**

(4ನೇ ಪುಟದಿಂದ)

**ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ ಆಸ್ತಿ-ಜವಾಬ್ದಾರಿ ತಃಖ್ತೆಗಳಿಗೆ ತೋರಿಸಿದ ಅಂಶಗಳ ಬಗ್ಗೆ ಟಿಪ್ಪಣಿಗಳು :**

1) ದಿನಾಂಕ **31.03.2020**ಕ್ಕೆ ಬ್ಯಾಂಕಿನ ಸಿ.ಆರ್.ಎ.ಆರ್. (Capital to Risk Asset Ratio) ಪ್ರಮಾಣವು ಶೇಕಡ **16.01**ರಷ್ಟು ಇರುವುದು.
2) ತೊಡಗಣೆಗಳ ಮುಖಬೆಲೆ, ಪುಸ್ತಕ ಬೆಲೆ ಮತ್ತು ಮಾರುಕಟ್ಟೆ ಬೆಲೆಗಳನ್ನು ಅಥಾವೆ ಪತ್ರಿಕೆಯಲ್ಲಿ ನಮೂದಿಸಿದೆ.
3) (ಅ) ರಿಯಲ್ ಎಸ್ಟೇಟ್ ಮತ್ತು ಕನ್‌ಸ್ಟ್ರಕ್ಷನ್‌ರವರಿಗೆ ಈ ಸಾಲಿನಲ್ಲಿ ಸಾಲವನ್ನು ಕೊಟ್ಟಿರುವುದಿಲ್ಲ.
(ಆ) ಗೃಹ ನಿರ್ಮಾಣ/ಖರೀದಿ/ನವೀಕರಣ ಮುಂತಾದ ಉದ್ದೇಶಗಳಿಗೆ ಕೊಟ್ಟ ಸಾಲವು ರೂ.**1494.42** ಲಕ್ಷ ಇರುತ್ತದೆ.
4) ಷೇರು, ಡಿಬೆಂಚರುಗಳ ಮೇಲೆ ಸಾಲವನ್ನು ಕೊಟ್ಟಿರುವುದಿಲ್ಲ. 5) (ಅ) ಬ್ಯಾಂಕಿನ ನಿರ್ದೇಶಕ ಮಂಡಲಿಯ ಸದಸ್ಯರಿಗೆ ಮತ್ತು ಅವರ ಹತ್ತಿರದ ಸಂಬಂಧಿಗಳಿಗೆ ಠೇವಣಿಗಳ ಆಧಾರದ ಮೇಲೆ ನೀಡಿರುವ ಸಾಲದ ಒಟ್ಟು ಮೊತ್ತವು ದಿನಾಂಕ: **31.03.2020**ಕ್ಕೆ ರೂ.**702.70** ಲಕ್ಷ ಇರುತ್ತದೆ. (ಆ) ಈ ಸಾಲಿನಲ್ಲಿ ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ಯಾವುದೇ ಆಧಾರ ರಹಿತ ಬ್ಯಾಂಕ್ ಗ್ಯಾರಂಟಿ ಮತ್ತು ಖಾತರಿ ಪತ್ರಗಳನ್ನು ಕೊಟ್ಟಿರುವುದಿಲ್ಲ. 6) **2019-20**ನೇ ಸಾಲಿಗೆ ಬ್ಯಾಂಕಿನ ಠೇವಣಿಗಳ ಮೇಲೆ ಬಡ್ಡಿಯ ವೆಚ್ಚವು ಶೇಕಡಾ **6.49**ರಷ್ಟು ಇದೆ. 7) ಬ್ಯಾಂಕಿನ ಪ್ರಸಕ್ತ ಸಾಲಿನ ಅನುತ್ಪಾದಕ ಆಸ್ತಿಗಳು ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಒಟ್ಟು ಅನುತ್ಪಾದಕ ಆಸ್ತಿಗಳು | | ನಿವ್ವಳ ಅನುತ್ಪಾದಕ ಆಸ್ತಿಗಳು | |
|---|---|---|---|---|
| | ಮೊಬಲಗು | ಶೇಕಡವಾರು | ಮೊಬಲಗು | ಶೇಕಡವಾರು |
| 31.03.2020 | 691.83 | 2.66% | -621.94 | 0.00% |
| 31.03.2019 | 537.27 | 2.38% | -891.30 | 0.00% |
| **ವ್ಯತ್ಯಾಸ** | **154.56** | **0.28%** | **-269.36** | **0.00%** |

8) **2019-20ನೇ ಸಾಲಿನಲ್ಲಿ ಬ್ಯಾಂಕಿನ ಲಾಭ ಗಳಿಕೆ ಈ ಕೆಳಕಂಡಂತಿದೆ.** * ಬ್ಯಾಂಕಿನ ಬಡ್ಡಿಯ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **8.63** ಇರುತ್ತದೆ. * ಇತರೆ ಆದಾಯವು ದುಡಿಯುವ ಬಂಡವಾಳದ ಮೇಲೆ ಶೇಕಡಾ **0.12** ಇರುತ್ತದೆ. * ಬ್ಯಾಂಕಿನ ಒಟ್ಟು ಗಳಿಕೆಯು ದುಡಿಯುವ ಬಂಡವಾಳದ ಮೇಲೆ ಶೇಕಡಾ **2.01** ಇರುತ್ತದೆ. * ಬ್ಯಾಂಕಿನ ಆಸ್ತಿಗಳ ಮೇಲೆ ಬಂದ ಗಳಿಕೆಯ ಪ್ರಮಾಣವು ಶೇಕಡಾ **1.00** ಇರುತ್ತದೆ. * ಬ್ಯಾಂಕಿನ ವ್ಯವಹಾರವು ಪ್ರತಿ ಸಿಬ್ಬಂದಿಗೆ ರೂ. **910.04** ಲಕ್ಷ ಇರುತ್ತದೆ. * ನಿವ್ವಳ ಲಾಭವು ಪ್ರತಿ ಸಿಬ್ಬಂದಿಗೆ ಹೋಲಿಸಿದಲ್ಲಿ ರೂ. **6.33** ಲಕ್ಷ ಇದೆ.
9) ಠೇವಣಿಗಳ ಮೇಲೆ ವಿಮೆಯ ಪ್ರೀಮಿಯಂನ್ನು **ದಿನಾಂಕ 29.05.2019** ಮತ್ತು **29.11.2019** ರಂದು ಒಟ್ಟು ರೂ.**40.22** ಲಕ್ಷ. ಡಿಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಮುಂಗಡವಾಗಿ ಜಮಾ ಮಾಡಿದೆ ಮತ್ತು ಅವರಿಗೆ ಕೊಡಬೇಕಾದ ಪ್ರೀಮಿಯಂ ಬಾಕಿ ಇರುವುದಿಲ್ಲ.
10) ಬ್ಯಾಂಕು ಸಾಲಾಂತ್ಯಕ್ಕೆ ಠೇವಣಾತಿ ಮತ್ತು ಭದ್ರತೆಗಳ ಆಧಾರದ ಮೇಲೆ ರೂ. **87.62**ಲಕ್ಷಗಳಿಗೆ ಬ್ಯಾಂಕ್ ಖಾತರಿ (Bank Guarantee)ಯನ್ನು ಕೊಟ್ಟಿರುತ್ತದೆ.
11) ಎನ್.ಪಿ.ಎ. :- ಪ್ರಸಕ್ತ ಸಾಲಿನ ಅಂತ್ಯಕ್ಕೆ ಇರುವಂತಹ ಈ ಕೆಳಕಂಡ ನಿಧಿಗಳ ಮೊಬಲಗನ್ನು ಹಿಂದಿನ ಸಾಲಿನಲ್ಲಿದ್ದ ನಿಧಿಗಳ ಮೊಬಲಗುಗಳೊಂದಿಗೆ ತುಲನೆ ಮಾಡಿದ ಹೋಲಿಕೆಯ ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ದಿನಾಂಕ | ಕರಡು ಮತ್ತು ಸಂಶಯಾತ್ಮಕ ಸಾಲಗಳ ನಿಧಿ | ಉತ್ಪಾದನಾ ಆಸ್ತಿಯ ಮೇಲೆ ಘಟನಾಪೇಕ್ಷ ಬಾಧ್ಯತೆ ನಿಧಿ | ಗುಂತಾಯಿಸಿದ ಹಣದ ಮೇಲಿನ ಸವಕಳಿ ನಿಧಿ |
|---|---|---|---|
| 31.03.2020 | 1313.77 | 105.00 | 360.00 |
| 31.03.2019 | 1428.77 | 90.00 | 350.00 |
| **ವ್ಯತ್ಯಾಸ** | **-115.00** | **15.00** | **10.00** |

12) ಡೆಫ್ ಖಾತೆಗೆ ವರ್ಗಾವಣೆಯಾಗಿರುವ ಮೊತ್ತ ರೂ. **75.99** ಲಕ್ಷ.

**ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ :**

ನಾನು, ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ, ಇದರ ಕೇಂದ್ರ ಕಛೇರಿ ಮತ್ತು ಆರು ಶಾಖೆಗಳ (ಕ್ರೋಢೀಕೃತ) **2019-20**ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಲೆಕ್ಕಪತ್ರದ ಪುಸ್ತಕಗಳು, ಒದಗಿಸಿದ ವಿವರಗಳು ಹಾಗೂ ಸ್ಪಷ್ಟೀಕರಣಗಳ ಮೇರೆಗೆ ನನ್ನ ತಿಳುವಳಿಕೆ ಹಾಗೂ ನಂಬಿಕೆ ಮೇರೆಗೆ ಇದರ ಜೊತೆಗೆ ಲಗತ್ತಿಸಿರುವ ಆಸ್ತಿ-ಜವಾಬ್ದಾರಿ ತಃಖ್ತೆ ಮತ್ತು ಲಾಭ-ನಷ್ಟ ತಃಖ್ತೆಯು ದಿನಾಂಕ: **31.03.2020**ಕ್ಕೆ ಇದ್ದಂತೆ ನನ್ನ ವರದಿಯಲ್ಲಿನ ಷರಾಗಳಿಗೆ ಒಳಪಟ್ಟು ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಗತಿಯನ್ನು ಪ್ರತಿಬಿಂಬಿಸುತ್ತದೆಂದು ದೃಢೀಕರಿಸುತ್ತೇನೆ.

ಸಹಿ/-
**ಚನ್ನಬಸವಣ್ಣ ಎನ್.**
ಚಾರ್ಟರ್ಡ್ ಅಕೌಂಟೆಂಟ್
ಎಂ.ನಂ. 213853,
ಮಾಲೀಕರು-ಮೆ|| ಚನ್ನಬಸವಣ್ಣ & ಕಂ.
ದಾವಣಗೆರೆ. ಎಫ್‌ಆರ್. ನಂ. 010580S

ದಿನಾಂಕ : 10.09.2020
ಸ್ಥಳ: ದಾವಣಗೆರೆ

**ಬಿ.ಎಸ್. ಮಲ್ಲೇಶ್** ಉಪ ಪ್ರಧಾನ ವ್ಯವಸ್ಥಾಪಕರು | **ಡಿ.ವಿ. ಆರಾಧ್ಯಮಠ್** ಪ್ರಧಾನ ವ್ಯವಸ್ಥಾಪಕರು | **ಮುಂಡಾಸ್ ವೀರೇಂದ್ರ** ಚಾರ್ಟೆಡ್ ಅಕೌಂಟೆಂಟ್, ನಿರ್ದೇಶಕರು | **ಮತ್ತಿಹಳ್ಳಿ ವೀರಣ್ಣ** ನಿರ್ದೇಶಕರು | **ಟಿ.ಎಸ್. ಜಯರುದ್ರೇಶ್** ನಿರ್ದೇಶಕರು | **ಸುರೇಖಾ ಎಂ. ಚಿಗಟೇರಿ** ನಿರ್ದೇಶಕರು | **ಕೋಗುಂಡಿ ಬಕ್ಕೇಶಪ್ಪ** ಅಧ್ಯಕ್ಷರು

## ಎಸ್.ಪಿ.ಬಿ.ಗೆ ಹಾಡಿನ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದ ಬಸವಂತಪ್ಪ



ದಾವಣಗೆರೆ, ಸೆ.28- ಹಿರಿಯ ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ ನಿಧನಕ್ಕೆ ಅವರು ಹಾಡಿರುವ ಹಾಡುಗಳನ್ನು ಹಾಡುವ ಮೂಲಕ ಜಿ.ಪಂ. ಸದಸ್ಯ ಕೆ.ಎಸ್. ಬಸವಂತಪ್ಪ ಅವರು ಶ್ರದ್ಧಾಂಜಲಿ ಸಲ್ಲಿಸಿದರು.

ಪ್ರೇಮ್ ರೆಕಾರ್ಡಿಂಗ್ ಸ್ಟುಡಿಯೋದಲ್ಲಿ ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಬಹುತೇಕ ಭಾಷೆಗಳನ್ನು ಕರಗತ ಮಾಡಿಕೊಂಡು, ಆಯಾ ಭಾಷೆಗಳಲ್ಲಿಯೇ ಹಾಡುವುದರ ಮೂಲಕ ಜನತೆಯ ಮೆಚ್ಚಿನ ಗಾಯಕರಾಗಿದ್ದ ಅವರು ದೇಶಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ ಎಂದರು.

ಸರ್ಕಾರ ಎಸ್.ಪಿ.ಬಿ. ಹೆಸರಿನಲ್ಲಿ ಸಂಗೀತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಒತ್ತಾಯಿಸಿದರು. 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದ ಮೂಲಕ ಅನೇಕ ಯುವ ಪ್ರತಿಭೆಗಳಿಗೆ ತಮ್ಮಲ್ಲಿರುವ ಹಾಡಿನ ಕಲೆಗಾರಿಕೆಯನ್ನು ಹೊರತರಲು ಅವಕಾಶ ಮಾಡಿಕೊಟ್ಟ ಎಸ್.ಪಿ.ಬಿ. ಅವರನ್ನು ಸ್ಮರಿಸಿದ ಅವರು, ಬಡ ಕಲಾವಿದರಿಗೆ ಹಾಗೂ ಗಾಯಕರಿಗೆ ಅವಕಾಶ ಮಾಡಿಕೊಟ್ಟ ಅವರನ್ನು ಸ್ಮರಿಸಬೇಕೆಂದರು. ಅವರು ಬೆಳೆಸಿರುವ ಪ್ರತಿಭೆಗಳಿಗೆ ನಾವು ಕಾರ್ಯಕ್ರಮಗಳಲ್ಲಿ ಅವಕಾಶ ಮಾಡಿಕೊಟ್ಟು ಅವರನ್ನು ನೆನಪಿಸಿಕೊಳ್ಳುವ ಮೂಲಕ ಅವರನ್ನು ನೆನೆಯಬೇಕಾಗಿದೆ ಎಂದರು.

ಗಾಯಕರುಗಳಾದ ಕೆ. ಸುರೇಶ್, ಜೀವನ್, ಕೆ. ವಾಗೀಶ್, ಜ್ಯೂನಿಯರ್ ವಿಷ್ಣುವರ್ಧನ್ ಪರಮೇಶ್, ಸುದರ್ಶನ್, ಕಾಂತರಾಜ್, ನಾಟಕ ಕಲಾವಿದರಾದ ದುರುಗೇಶ್, ಪರಶುರಾಮ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ರೈತರು, ಕಾರ್ಮಿಕರನ್ನು ಕೆಣಕುವ ಸರ್ಕಾರಗಳಿಗೆ ಉಳಿಗಾಲವಿಲ್ಲ

### ರೈತ, ಕಾರ್ಮಿಕ ಮುಖಂಡರ ಎಚ್ಚರಿಕೆ

ದಾವಣಗೆರೆ, ಸೆ. 28 - ರೈತರು, ಕಾರ್ಮಿಕರು ಹಾಗೂ ದಲಿತರನ್ನು ಕೆಣಕುವ ಸರ್ಕಾರಗಳಿಗೆ ಉಳಿಗಾಲವಿಲ್ಲ ಎಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ರೈತ ಹಾಗೂ ಕಾರ್ಮಿಕ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ರಾಜ್ಯ ರೈತ ಸಂಘ, ಹಸಿರು ಸೇನೆ, ಸಿಪಿಐ ಇತರೆ ಸಂಘಟನೆಗಳ ಸಹಯೋಗದಲ್ಲಿ ಜಯದೇವ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ನಡೆಸಿ ಚಾಮರಾಜಪೇಟೆ ವೃತ್ತದಲ್ಲಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾತನಾಡಿರುವ ಹಲವು ಮುಖಂಡರು, ಸರ್ಕಾರ ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದಿದೆ ಎಂದು ಆರೋಪಿಸಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ವಿರೋಧಿ ಕಾಯ್ದೆ ತಿದ್ದುಪಡಿಗಳನ್ನು ಕೈಬಿಡದಿದ್ದರೆ, ರೈತರು ಎಂಥದ್ದೇ ಹೋರಾಟಕ್ಕೂ ಸಜ್ಜಾಗಲಿದ್ದಾರೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯದರ್ಶಿ ತೇಜಸ್ವಿ ಪಟೇಲ್ ಎಚ್ಚರಿಸಿದ್ದಾರೆ.

ಮನ್ ಕೀ ಬಾತ್ ರೇಡಿಯೋ ಕಾರ್ಯಕ್ರಮದಲ್ಲಿ ಕೇವಲ ತಮ್ಮ ಮಾತುಗಳನ್ನು ಹೇಳುವ ಪ್ರಧಾನಿ ನರೇಂದ್ರ ಮೋದಿ, ದೇಶದ ಜನರ, ರೈತ-ಕಾರ್ಮಿಕರ ಮನದ ಮಾತುಗಳನ್ನೂ ಆಲಿಸಲಿ ಎಂದು ಆಗ್ರಹಿಸಿದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಹೆಚ್.ಕೆ. ರಾಮಚಂದ್ರಪ್ಪ ಮಾತನಾಡಿ, ದೇಶದಲ್ಲಿ ರೈತರ ಜತೆಗೆ ಬೀದಿ ಬದಿ ವ್ಯಾಪಾರಿಗಳು, ಕಾರ್ಮಿಕರು ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ನಮ್ಮ ಹೋರಾಟದ ಉದ್ದೇಶ ಸರ್ಕಾರಗಳ ಸೊಕ್ಕು ಅಡಗಿಸುವುದಾಗಿದೆ ಎಂದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಬೆಂಬಲ ಬೆಲೆಗಿಂತಲೂ ಕಡಿಮೆ ದರಕ್ಕೆ ಖರೀದಿಸುವ ವರ್ತಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಸರ್ಕಾರ ಮುಂದಾಗಬೇಕಿತ್ತು ಎಂದರಲ್ಲದೇ, ರೈತರ ವ್ಯಾಜ್ಯಗಳನ್ನು ಸುಲಭವಾಗಿ ಪರಿಹರಿಸುವ ಅಂಶಗಳಿಗೆ ಎ.ಪಿ.ಎಂ.ಸಿ. ಕಾಯ್ದೆ ತಿದ್ದುಪಡಿಗಳಲ್ಲಿ ಇದಕ್ಕೆ ಅವಕಾಶ ನೀಡಿಲ್ಲ ಎಂದು ಆಕ್ಷೇಪಿಸಿದರು.

ಎ.ಐ.ಎಂ.ಎಸ್.ಎಸ್. ರಾಜ್ಯ ಘಟಕದ ಅಧ್ಯಕ್ಷೆ ಬಿ.ಆರ್.ಅಪರ್ಣಾ ಮಾತನಾಡಿ, ಕೊರೊನಾ ಹಿನ್ನೆಲೆಯಲ್ಲಿ ಅನೇಕ ಕಾರ್ಖಾನೆಗಳು ಉದ್ಯೋಗ ನಾಶವಾಗಿದೆ.

ಇಂತಹ ಸಂದರ್ಭದಲ್ಲಿ ಪಿತೂರಿ ಮಾಡಿ ತಿದ್ದುಪಡಿಗಳನ್ನು ತರುವುದು ಅಗತ್ಯವಿರಲಿಲ್ಲ ಎಂದರು.

ಎಸ್‌ಯುಸಿಐ ಜಿಲ್ಲಾ ಕಾರ್ಯದರ್ಶಿ ಕೈದಾಳೆ ಮಂಜುನಾಥ್ ಮಾತನಾಡಿ, ಸರ್ಕಾರ ಏಕಪಕ್ಷೀಯವಾಗಿ ಕಾಯ್ದೆಗಳ ಬದಲಾವಣೆಗೆ ಕೈ ಹಾಕಿದ್ದು ಇದರಿಂದ ರೈತರು, ಕಾರ್ಮಿಕರು ಮಾತ್ರವಲ್ಲದೆ ಜನಸಾಮಾನ್ಯರ ಮೇಲೂ ದುಷ್ಪರಿಣಾಮ ಬೀರಲಿದೆ ಎಂದು ಹೇಳಿದರು.

ಮುಖಂಡರಾದ ಹೆಚ್.ಜಿ.ಉಮೇಶ್, ಕೆ.ಭಾರತಿ, ನೀರ್ಥಡಿ ತಿಪ್ಪೇಸ್ವಾಮಿ, ಗುಮ್ಮನೂರು ಬಸವರಾಜ್, ತಿಪ್ಪೇಶನಾಯ್ಕ, ಆವರಗೆರೆ ವಾಸು ಸೇರಿದಂತೆ ಎಐಡಿಎಸ್‌ಓ, ಎಐಡಿವೈಓ, ಎಐಕೆಎಸ್, ಆರ್‌ಕೆಎಸ್, ಎಐಎಂಎಸ್‌ಎಸ್ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.



### ರೈತ ಮುಖಂಡರು - ರೈತನ ನಡುವಿನ ಚಕಮಕಿ ದೃಶ್ಯ ವೈರಲ್

ದಾವಣಗೆರೆ, ಸೆ. 28 – ರೈತ ಸಂಘಟನೆಗಳು ಕರೆ ನೀಡಿದ್ದ ಬಂದ್ ಸಮಯದಲ್ಲಿ ನಗರದ ತರಕಾರಿ ಮಾರುಕಟ್ಟೆಯಲ್ಲಿ ತರಕಾರಿ ಮಾರಲು ಬಂದಿದ್ದ ರೈತ ಹಾಗೂ ರೈತ ಮುಖಂಡರ ನಡುವಿನ ಜಟಾಪಟಿ ದೃಶ್ಯ ವೈರಲ್ ಆಗಿದೆ.

ರೈತರ ಜಮೀನು ಕಿತ್ತುಕೊಂಡು ನಾಶ ಮಾಡಲು ಕಾನೂನು ಆಗಿದೆ. ನಿಮ್ಮ ಮೋದಿಯೇ ಕಾನೂನು ಮಾಡಿದ್ದಾರೆ ಎಂದು ರೈತ ಸಂಘದ ಮುಖಂಡರೊಬ್ಬರು ರೈತನಿಗೆ ಹೇಳಿದ್ದಾರೆ. ಅದಕ್ಕೆ ರೈತ, ನಾವಾಗಿಯೇ ಕೊಟ್ಟರೆ ನಾಶ ಮಾಡುತ್ತಾರೆ. ಮೋದಿ ಎಲ್ಲರಿಗೂ ಸಹಾಯ ಮಾಡಿದ್ದಾನೆ ಎಂದು ರೈತ ಹೇಳಿದ್ದು ವಿಡಿಯೋದಲ್ಲಿದೆ.

ಬಂದ್‌ಗೆ ಕರೆ ನೀಡಿರುವ ಸಂದರ್ಭದಲ್ಲೇ ತರಕಾರಿಗಳನ್ನು ಮಾರಲು ತಂದ ಬಗ್ಗೆ ಮುಖಂಡರು ಆಕ್ಷೇಪಿಸಿ, ಹೆಚ್ಚು ಕಡಿಮೆ ಆದರೆ ನಾವು ಜವಾಬ್ದಾರರಲ್ಲ ಎಂದು ಹೇಳಿದ್ದು ವಿಡಿಯೋದಲ್ಲಿದೆ.

ಇದಕ್ಕೆ ಬೇಸರಗೊಂಡ ರೈತ, ಈ ತರಕಾರಿಗಳನ್ನೆಲ್ಲಾ ಅವರಿಗೇ ಕೊಟ್ಟು ಬಿಡಿ. ಅವರೇ ತೆಗೆದುಕೊಂಡು ಹೋಗಲಿ ಎಂದಿದ್ದೂ ವಿಡಿಯೋದಲ್ಲಿದೆ.

ನಂತರ ರೈತ ಮುಖಂಡರು, ಇವರು ರೈತರಲ್ಲ. ತರಕಾರಿ ಮಾರಾಟಗಾರ ಅಷ್ಟೇ ಎಂದು ಹೇಳಿ ಆ ವಿಷಯವನ್ನು ಅಲ್ಲಿಗೇ ಬಿಟ್ಟು ಮುಂದೆ ನಡೆದಿದ್ದಾರೆ.

ಚಕಮಕಿ ನಡೆಸಿದ ಗುಡ್ಡಪ್ಪ ಚಿನ್ನಿಕಟ್ಟೆ ಎಂದು ಗುರುತಿಸಿ ಕೆಲವರು ಅವರಿಗೆ ಸನ್ಮಾನಿಸಿದ ಫೋಟೋಗಳೂ ಸಹ ವೈರಲ್ ಆಗಿವೆ.

## ಸಮಾನ ಕೆಲಸಕ್ಕೆ ಸಮಾನ ವೇತನ-ಸೇವಾ ಭದ್ರತೆಗೆ ಆಗ್ರಹ



### 6ನೇ ದಿನಕ್ಕೆ ಆರೋಗ್ಯ ಇಲಾಖೆ ಗುತ್ತಿಗೆ - ಹೊರಗುತ್ತಿಗೆ ನೌಕರರ ಮುಷ್ಕರ

ದಾವಣಗೆರೆ, ಸೆ.28- ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಸೇವಾ ಭದ್ರತೆ ನೀಡುವಂತೆ ಆಗ್ರಹಿಸಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಗುತ್ತಿಗೆ, ಹೊರಗುತ್ತಿಗೆ ನೌಕರರು ತಮ್ಮ ಕರ್ತವ್ಯದಿಂದ ದೂರ ಉಳಿದು ತಮ್ಮ ಮನೆಗಳಲ್ಲಿಯೇ ನಡೆಸುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ 6ನೇ ದಿನಕ್ಕೆ ಕಾಲಿಟ್ಟಿದೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ಗುತ್ತಿಗೆ, ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಅಸಹಕಾರ ಚಳುವಳಿ ನಡೆಸಲಾಗುತ್ತಿದೆ.

ಕೊರೊನಾ ವೈರಸ್ ಹಾವಳಿ ಸಂದರ್ಭದಲ್ಲಿಯೂ ಜೀವ ಪಣಕ್ಕಿಟ್ಟು ಕೆಲಸ ಮಾಡಿದರೂ ಬಡ ನೌಕರರ ಬೇಡಿಕೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಸಂಘಟನೆ ಜಿಲ್ಲಾಧ್ಯಕ್ಷ ಎನ್.ಸಿ. ಹಾಲಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ಇದೇ 24ರಿಂದ ಕೆಲಸ ಬಹಿಷ್ಕರಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆಕೊಟ್ಟ ಹಿನ್ನೆಲೆಯಲ್ಲಿ ಎಲ್ಲಾ ನೌಕರರು ಮನೆಯಲ್ಲಿಯೇ ಶಾಂತಿಯುತವಾಗಿ ಮುಷ್ಕರವನ್ನು ಮುಂದುವರೆಸುತ್ತಿದ್ದಾರೆ. ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ್ದ ಸರ್ಕಾರವು ಈಗ ಮೌನ ವಹಿಸಿ, ಅಧಿಕಾರಿಗಳ ಮೂಲಕ ಮುಷ್ಕರ ನಿರತ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರ ವಿರುದ್ಧ ಶಿಸ್ತು ಕ್ರಮಕ್ಕೆ ನಿರ್ದೇಶಿಸಿರುವುದು ಖಂಡನೀಯ ಎಂದು ಆಕ್ಷೇಪಿಸಿದ್ದಾರೆ.

ಕೋವಿಡ್ ವಿರುದ್ಧ ಕೆಲಸ ಮಾಡಿಸಿಕೊಳ್ಳುವಾಗ ಕೊರೊನಾ ವಾರಿಯರ್ಸ್ ಎಂದು ಹೇಳಿ ಚಪ್ಪಾಳೆ ತಟ್ಟಿ ಕೈ ಬಿಟ್ಟರೆ ಬಡ ನೌಕರರ ಜೀವನದ ಪಾಡು ಏನೆಂಬುದು ಅರಿಯದಂತೆ ಸರ್ಕಾರ ವರ್ತಿಸುತ್ತಿದೆ. ಕೊರೊನಾದಿಂದ ಜಾರಿಗೆ ತಂದಿದ್ದ ಲಾಕ್‌ಡೌನ್‌ನಿಂದಾಗಿ ಅಲ್ಪ ವೇತನದಲ್ಲಿ ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ ಕುಟುಂಬ ನಿರ್ವಹಣೆ ಕಷ್ಟವಾಗಿದ್ದು, ಹೆಸರಿಗಷ್ಟೇ ಕೊರೊನಾ ವಾರಿಯರ್ಸ್, ಇದೇನಾ ವಾರಿಯರ್ಸ್‌ಗೆ ನೀಡುತ್ತಿರುವ ಗೌರವ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಮುಷ್ಕರದಲ್ಲಿ ಸಂಘದ ಉಪಾಧ್ಯಕ್ಷ ಡಾ. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಡಾ. ಅಂದಾನಗೌಡ ಪಾಟೀಲ್, ಖಜಾಂಚಿ ಅಂಬರೀಷ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಂಜುನಾಥ್ ಹಾಗೂ ಸದಸ್ಯರು ಭಾಗವಹಿಸಿದ್ದಾರೆ.

## ಪೌರ ಕಾರ್ಮಿಕರ ಮಾದರಿಯಲ್ಲಿ ನೇರ ವೇತನ ಜಾರಿಗೆ ಆಗ್ರಹ


### ಪಾಲಿಕೆ ಹೊರಗುತ್ತಿಗೆ ನೌಕರರಿಂದ ಇಂದು ಪ್ರತಿಭಟನೆ

ದಾವಣಗೆರೆ, ಸೆ.28- ನಗರ ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆ ವಾಹನ ಚಾಲಕರು ಹಾಗೂ ವಾಟರ್ ಮ್ಯಾನ್‌ಗಳು, ಯುಜಿಡಿ ಹೆಲ್ಪರ್ ಗಳಿಗೆ ಪೌರ ಕಾರ್ಮಿಕರ ಮಾದರಿಯಲ್ಲಿ ನೇರ ವೇತನ ಜಾರಿಗೊಳಿಸುವಂತೆ ಆಗ್ರಹಿಸಿ ದಾವಣಗೆರೆ ಮಹಾನಗರ ಪಾಲಿಕೆಯ ಹೊರ ಗುತ್ತಿಗೆ ನೌಕರರು ಘನತಾಜ್ಯ ವಿಲೇವಾರಿ ವಾಹನ ಚಾಲ ಕರ ಸಂಘದ ವತಿಯಿಂದ ನಾಳೆ ದಿನಾಂಕ 29ರ ಮಂಗ ಳವಾರ ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಪಟ್ಟಣ ಪಂಚಾಯ್ತಿ, ಪುರಸಭೆ, ನಗರಸಭೆ ಹಾಗೂ ಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ತ್ಯಾಜ್ಯ ಸಾಗಿಸುವ ವಾಹನ ಚಾಲಕರು ಹಾಗೂ ವಾಟರ್ ಮ್ಯಾನ್ ಗಳು ಮತ್ತು ಯುಜಿಡಿ ಹೆಲ್ಪರ್‌ಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಹೊರಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ನೇರ ವೇತನ ಜಾರಿ ಮಾಡುವಂತೆ ಅಂದು ಆಯಾ ನಗರದ ಸ್ಥಳೀಯ ಸಂಸ್ಥೆಗಳ ಮುಂದೆ ಪ್ರತಿಭಟನಾ ಧರಣಿ ನಡೆಸಿ ಸರ್ಕಾರದ ಗಮನ ಸೆಳೆಯುವುದಾಗಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಎಂ. ವೀರೇಶ್ ತಿಳಿಸಿದರು. ಗುತ್ತಿಗೆ ಪದ್ಧತಿ ರದ್ದುಪಡಿಸಿ ನೇರ ವೇತನ ಜಾರಿಗೊಳಿಸಬೇಕು. ಹುಬ್ಬಳ್ಳಿ ನಗರಪಾಲಿಕೆಯಲ್ಲಿ 3 ತಿಂಗಳ ವೇತನವನ್ನು ನೀಡಿಲ್ಲ. ಈ ಬಗ್ಗೆ ಕೇಳಲು ಮುಂದಾದಾಗ ಏಕಾಏಕಿ 52 ತ್ಯಾಜ್ಯ ಚಾಲಕರನ್ನು ಕೆಲಸದಿಂದ ವಜಾಗೊಳಿಸಲಾಗಿದ್ದು, ಮರು ಕೆಲಸಕ್ಕೆ ನೇಮಿಸಿಕೊಳ್ಳುವಂತೆ ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ್, ಎಂ.ಆರ್. ದುಗ್ಗೇಶ್, ಪ್ರಭು, ಕಿರಣ್ ಕುಮಾರ್ ಸೇರಿದಂತೆ ಇತರರಿದ್ದರು.

## ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆ : ಯಾದವ ಮಹಾಸಭಾ ಸ್ವಾಗತ



ದಾವಣಗೆರೆ, ಸೆ.28- ರಾಜ್ಯದ ಯಾದವ ಸಮುದಾಯಗಳ ಬಹುದಿನಗಳ ಬೇಡಿಕೆ ಯಾಗಿದ್ದ ಗೊಲ್ಲ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ಪ್ರಾರಂಭಿಸಲು ಮುಖ್ಯಮಂತ್ರಿ ಬಿಎಸ್.ಯಡಿಯೂರಪ್ಪ ಅವರು ಆದೇಶಿಸಿರುವುದನ್ನು ಜಿಲ್ಲಾ ಯಾದವ ಮಹಾಸಭಾದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಸ್ವಾಗತಿಸಿದ್ದಾರೆ.

ಚುನಾವಣೆಯ ಸಂದರ್ಭದಲ್ಲಿ ಭರವಸೆ ನೀಡಿದ್ದ ಸಂಸದ ಜಿ.ಎಂ. ಸಿದ್ದೇಶ್ವರ ಅವರು, ತಮ್ಮ ಮನವಿ ಪತ್ರದೊಂದಿಗೆ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡಿದ್ದನ್ನು ಇಲ್ಲಿ ಸ್ಮರಿಸುತ್ತಾ ರಾಜಕೀಯ, ಶೈಕ್ಷಣಿಕ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ನಿಗಮ ಮಂಡಳಿ ಸಹಕಾರಿಯಾಗಿದೆ ಎಂದು ಯಾದವ ಮಹಾಸಭಾದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಅಭಿಪ್ರಾಯ ಪಟ್ಟಿದ್ದಾರೆ. ಕೇಂದ್ರ ಸರ್ಕಾರದ ಅಂಗಳದಲ್ಲಿರುವ ಗೊಲ್ಲ ಸಮಾಜ ಪರಿಶಿಷ್ಟ ಪಂಗಡಕ್ಕೆ ಸೇರಿಸುವ ರಾಜ್ಯ ಸರ್ಕಾರದಿಂದ ಶಿಫಾರಸ್ಸಾಗಿರುವ ಪತ್ರ ಇದ್ದು, ತಕ್ಷಣ ಪರಿಶಿಷ್ಟ ಪಂಗಡಕ್ಕೆ ಗೊಲ್ಲ ಸಮಾಜವನ್ನು ಅನುಮೋದಿಸುವಂತೆ ಆನಂದರಾಜ್ ಒತ್ತಾಯಿಸಿದ್ದಾರೆ.

## ತೊಗಟವೀರ ಸಮಾಜದ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ, ಸೆ. 28 -ನಗರದ ತೊಗಟವೀರ ಸಮಾಜದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲುದ್ದೇಶಿಸಲಾಗಿದ್ದು, 2019-20ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಯಲ್ಲಿ ಶೇ. 75ಕ್ಕಿಂತ ಹೆಚ್ಚು ಅಂಕ ಪಡೆದವರು ಅರ್ಹರಾಗಿರುತ್ತಾರೆ. ಆಸಕ್ತರು ಅಕ್ಟೋಬರ್ 10ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗಿ ತೊಗಟವೀರ ಸಮಾಜ ಸೇವಾ ಸಮಿತಿ ಟ್ರಸ್ಟ್ ತಿಳಿಸಿದೆ. ತೊಗಟವೀರ ಸಮುದಾಯ ಭವನದಲ್ಲಿ ವ್ಯವಸ್ಥಾಪಕರಿಗೆ ಅರ್ಜಿ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : 9743098298, 9844216408, ದೂರವಾಣಿ : 08192-226292.

## ಅರ್ಬನ್ ಬ್ಯಾಂಕಿಗೆ ಮುಪ್ಪಣ್ಣ ಉಪಾಧ್ಯಕ್ಷ

**(1ನೇ ಪುಟದಿಂದ)** ಸಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ನಿರ್ದೇಶಕ ಇ.ಎಂ.ಮಂಜುನಾಥ ಕೂಡಾ ಮಾತನಾಡಿದರು.

ನಿರ್ದೇಶಕರುಗಳಾದ ಮತ್ತಿಹಳ್ಳಿ ವೀರಣ್ಣ, ಎಂ. ಚಂದ್ರಶೇಖರ್, ಶ್ರೀಮತಿ ಸುರೇಖಾ ಎಂ.ಚಿಗಟೇರಿ, ಕಂಚಿಕೇರಿ ಮಹೇಶ್, ನಲ್ಲೂರು ಎಸ್.ರಾಘವೇಂದ್ರ, ವಿ.ವಿಕ್ರಮ್ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಹಕಾರ ಸಂಘಗಳ ದಾವಣಗೆರೆ ಉಪವಿಭಾಗದ ಸಹಾಯಕ ನಿಬಂಧಕ ಎಂ.ದಕ್ಷಿಣಾಮೂರ್ತಿ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಡಿ.ವಿ.ಆರಾಧ್ಯಮಠ್, ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್.ಮಲ್ಲೇಶ್ ಸಭೆಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸಿದರು.

ಬ್ಯಾಂಕಿನ ಆಡಳಿತ ಮಂಡಳಿ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ, ನಿರ್ದೇಶಕರುಗಳಾದ ಪಲ್ಲಾಗಟ್ಟೆ ಶಿವಾನಂದಪ್ಪ, ಅಜ್ಜಂಪುರ ಶೆಟ್ರು ವಿಜಯಕುಮಾರ್, ವೃತ್ತಿಪರ ನಿರ್ದೇಶಕ ಮುಂಡಾಸ್ ವೀರೇಂದ್ರ, ವಿಶೇಷ ಆಹ್ವಾನಿತರುಗಳಾದ ಎಂ.ದೊಡ್ಡಪ್ಪ, ಬೆಳ್ಳೂಡಿ ಮಂಜುನಾಥ್ ಅವರುಗಳು ಮುಪ್ಪಣ್ಣ ಅವರನ್ನು ಅಭಿನಂದಿಸಿದ್ದಾರೆ.

## ಒಂದು ಭೂಮಿ, ಒಂದು ಮನೆ ಆನ್‌ಲೈನ್ ಕಾರ್ಯಕ್ರಮ

ದಾವಣಗೆರೆ, ಸೆ. 28- ಡಬ್ಲ್ಯುಡಬ್ಲ್ಯುಎಫ್-ಇಂಡಿಯಾ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಇವರ ಸಂಯುಕ್ತಾಶ್ರಯದಲ್ಲಿ ರಾಜ್ಯದ 1 ರಿಂದ 8ನೇ ತರಗತಿ ಸರ್ಕಾರಿ ಮತ್ತು ಅನುದಾನಿತ ಶಾಲೆಯ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವ 'ಒಂದು ಭೂಮಿ ಒಂದು ಮನೆ' ಎಂಬ ಆನ್‌ಲೈನ್ ಕಾರ್ಯಕ್ರಮವನ್ನು ನಡೆಸಲಾಗುವುದು.

ಗೂಗಲ್ ಜಾಲತಾಣದಲ್ಲಿ ಲಿಂಕ್ ಬಳಸಿ ನೋಂದಣಿ ಮಾಡಿಕೊಂಡು ಸೆಪ್ಟೆಂಬರ್ ನಿಂದ ನವೆಂಬರ್‌ವರೆಗೆ ಪ್ರತಿ ವಾರ ಅರ್ಧ ಗಂಟೆ ನಡೆಯುವ ಈ ಕಾರ್ಯಕ್ರಮವನ್ನು ದಿಕ್ಷಾ ಅಥವಾ ಫೇಸ್‌ಬುಕ್‌ನಲ್ಲಿಯೂ ವೀಕ್ಷಿಸಬಹುದು. ಕಾರ್ಯಕ್ರಮದ ನಂತರ ಕೇಳುವ ಸರಳ ಪ್ರಶ್ನೆಗಳಿಗೆ ಉತ್ತರಿಸಿ ಫೀಡ್‌ಬ್ಯಾಕ್ ನೀಡಬೇಕಾಗುತ್ತದೆ. ಶಿಕ್ಷಕರ ಅಥವಾ ಪೋಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ವಿನಂತಿಸಲಾಗಿದೆ.

ಉಚಿತವಾಗಿ ಭಾಗವಹಿಸಬಹುದಾದ ಈ ಕಾರ್ಯಕ್ರಮದ ಕುರಿತ ವಿವರಗಳಿಗೆ ಮೊ ಸಂ: 94488 57122, 9845402299 ನ್ನು ಸಂಪರ್ಕಿಸಬಹುದು.

## ಎಸ್ ಪಿ ಬಾಲಸುಬ್ರಹ್ಮಣ್ಯಂ ನಿಧನಕ್ಕೆ ತೆಗ್ಗಿನಮಠ ಶ್ರೀಗಳ ಸಂತಾಪ



ಹರಪನಹಳ್ಳಿ, ಸೆ.28 -ಸಂಗೀತ ಲೋಕದ ಸ್ವರಮಾಂತ್ರಿಕ ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರ ಅಗಲಿಕೆಯಿಂದ ಸಾಂಸ್ಕೃತಿಕ ಲೋಕ ಬಡವಾಗಿದೆ ಎಂದು ತೆಗ್ಗಿನಮಠ ಸಂಸ್ಥಾನದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ಸುಮಾರು 50 ವರ್ಷಗಳಿಗೂ ಹೆಚ್ಚಿನ ಕಾಲ ಬಹುಭಾಷಾ ಗಾಯಕರಾಗಿ ಅಭಿಮಾನಿಗಳನ್ನು ರಂಜಿಸಿದ ಗಾನಗಂಧರ್ವ ಎಸ್.ಪಿ. ಬಾಲಸುಬ್ರಹ್ಮಣ್ಯಂ ನಮ್ಮನ್ನಗಲಿ ಹೋಗಿರುವುದು ಅತ್ಯಂತ ದುಃಖದ ವಿಚಾರ. ಕೊನೆಗೂ ಕೋಟ್ಯಂತರ ಅಭಿಮಾನಿಗಳ ಪ್ರಾರ್ಥನೆ ಫಲಿಸದೇ ಹೋದದ್ದು ದುರದೃಷ್ಟಕರ. ಮಧುರ ಕಂಠದ ಮೂಲಕ ಹಾಡಿಗೆ ಜೀವ ತುಂಬುತ್ತಿದ್ದ ಎಸ್ಪಿಬಿ ಗಾಯನ ಇನ್ನು ನೆನಪು ಮಾತ್ರ. ಗಾನ ಗಾರುಡಿಗ 'ಎಸ್‌ಪಿಬಿ' ಆತ್ಮಕ್ಕೆ ಭಗವಂತ ಶಾಂತಿ ನೀಡಲಿ ಎಂದಿದ್ದಾರೆ.




**9ನೇ ವರ್ಷದ ಪುಣ್ಯಸ್ಮರಣೆ**

**ಶ್ರೀಮತಿ ಕೆ.ಸಿ. ಗಂಗಮ್ಮ**

*ನೀವು ನಮ್ಮನ್ನು ಅಗಲಿ*
*ಇಂದಿಗೆ ಒಂಭತ್ತು ವರ್ಷಗಳಾದವು.*
*ಸದಾ ನಿಮ್ಮ ಸ್ಮರಣೆಯಲ್ಲಿರುವ*

**ಎಂ. ಆರ್. ಮಹೇಶ್ವರಪ್ಪ**
**ಚಂದನ್ - ಚೇತನ್**


### ಕುಂದೂರು ಸಣ್ಣನಿಂಗಪ್ಪರ ಪರಮೇಶ್ವರಪ್ಪ ನಿಧನ



ಹೊನ್ನಾಳಿ ತಾಲ್ಲೂಕು ಕುಂದೂರು ಗ್ರಾಮದ ವಾಸಿ, **ಸಣ್ಣನಿಂಗಪ್ಪರ ಪರಮೇಶ್ವರಪ್ಪ** ಅವರು ದಿನಾಂಕ 28.09.2020ರ ಸೋಮವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.09.2020ರ ಮಂಗಳವಾರ ಬೆಳಿಗ್ಗೆ 12.30ಕ್ಕೆ ಕುಂದೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**- ದುಃಖತಪ್ತ ಕುಟುಂಬ ವರ್ಗ, ಮೊ. : 9900217990, 9880246390**

### ನಾಗನೂರು ಗೌಡ್ರು ಶಿವಮ್ಮ ನಿಧನ



ದಾವಣಗೆರೆ ತಾಲ್ಲೂಕು ಶಿರಮಗೊಂಡನಹಳ್ಳಿ ಗ್ರಾಮದ ವಾಸಿ ದಿ.ನಾಗನೂರು ಗೌಡ್ರು ಗಂಗಾಧರಪ್ಪ ಇವರ ಧರ್ಮಪತ್ನಿ, ಬಾಪೂಜಿ ಬ್ಯಾಂಕ್ ನೌಕರರಾದ ಎನ್.ಜಿ ಮಂಜುನಾಥ್ ಇವರ ತಾಯಿ

**ಗೌಡ್ರು ಶಿವಮ್ಮ** (74)

ಇವರು, ದಿನಾಂಕ 28.09.2020ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 29.09.2020ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಶಿರಮಗೊಂಡನಹಳ್ಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ : 98440 45442**

### ಹುಚ್ಚಣ್ಣನವರ ಬಸಪ್ಪ ನಿಧನ



ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಶಂಕರನಹಳ್ಳಿ ಗ್ರಾಮದ ವಾಸಿ ಹುಚ್ಚಣ್ಣನವರ ಬಸಪ್ಪ (83) ಅವರು ದಿನಾಂಕ 28.09.2020 ರ ಸೋಮವಾರ ಸಂಜೆ 6.10 ಕ್ಕೆ ನಿಧನರಾದರು. ಮೂವರು ಪುತ್ರರು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.9.2020 ರ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಶಂಕರನಹಳ್ಳಿ ಗ್ರಾಮದಲ್ಲಿ ನಡೆಯಲಿದೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

॥ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ನಗರ ವಾಸಿ
**ಶ್ರೀ ಜಿ.ಪಿ. ಗಂಗಾಧರಯ್ಯ ಮತ್ತು ಸಹೋದರರು ಹಾಗೂ ಮಕ್ಕಳು, ಚಿಕ್ಕಜಾಜೂರು.**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 22.09.2020ನೇ ಮಂಗಳವಾರ ಸಂಜೆ 04.15ಕ್ಕೆ ನನ್ನ ಸಹೋದರ **ದಿ॥ ವೇಮನಾರಾಧ್ಯ ಶ್ರೀಮತಿ ಸುಧಾವೇಮಾನಾರಾಧ್ಯ** ಇವರ ಮಗನಾದ


**ಶ್ರೀ ಜಿ.ವಿ. ಗಿರೀಶ್**
**ಅಸಿಸ್ಟೆಂಟ್ ಪ್ರೊಫೆಸರ್, ಜೆ.ಎನ್.ಎನ್.ಸಿ. ಶಿವಮೊಗ್ಗ.**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆಯನ್ನು"**
**ದಿನಾಂಕ : 30.09.2020ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ 18ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆಯಲ್ಲಿ ನೆರವೇರಿಸಲು** ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಸುಧಾ ದಿ॥ ವೇಮಾನಾರಾಧ್ಯ, ಶ್ರೀಮತಿ ರೇಖಾ ಗಿರೀಶ್, ಡಾ॥ ಗಾಯಿತ್ರಿ ಸೋಮಶೇಖರ್, ಚಿ॥ ಸಮರ್ಥ, ಚಿ॥ ಸಮೃದ್ಧ ಗುಂಜಿಗನೂರು ವಂಶಸ್ಥರು, ಗೌಡರ ವಂಶಸ್ಥರು, ಹುಚ್ಚವ್ವನಹಳ್ಳಿ, ಚಿಕ್ಕಜಾಜೂರು ಹಾಗೂ ಬಂಧು-ಮಿತ್ರರು. ಫೋ. : 98865 93224**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಹರ ಹರ ಮಹಾದೇವ ॥



**ಶ್ರೀ ಶ್ರೀ ಶ್ರೀ 2008 ಲಿಂ॥ ಡಾ.**
**ಶ್ರೀ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳು,**
**ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠ**
ಹರಿಹರ, ದಾವಣಗೆರೆ ಜಿಲ್ಲೆ.

**83ನೇ ವರ್ಷದ ಜಯಂತ್ಯೋತ್ಸವ**

ಸಮಾಜ ಬಾಂಧವರು ಹಾಗೂ ಭಕ್ತಾದಿಗಳು ಆಗಮಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ದಿನಾಂಕ : 29-09-2020, ಮಂಗಳವಾರ, ಸಮಯ : ಮಧ್ಯಾಹ್ನ 12.00 ಗಂಟೆಗೆ
ಸ್ಥಳ : ಆಶಾಕಿರಣ ಟ್ರಸ್ಟ್, ಎಸ್.ಎಸ್. ಬಡಾವಣೆ, ದಾವಣಗೆರೆ.
'ಅನ್ನ ಸಂತರ್ಪಣೆ'

ಸಮಯ : ಬೆಳಿಗ್ಗೆ 12.30 ಗಂಟೆಗೆ
ಸ್ಥಳ : ಮೈತ್ರಿ ವೃದ್ಧಾಶ್ರಮ, ಸಕ್ಕರೆ ಕಾರ್ಖಾನೆ ರಸ್ತೆ, ದೊಡ್ಡಬಾತಿ.
'ದಾಸೋಹ-ಬಟ್ಟೆ ವಿತರಣೆ'

ಕಾರ್ಯಕ್ರಮಕ್ಕೆ ಶುಭ ಕೋರುವವರು :
**ಲಿಂ. ಡಾ॥ ಶ್ರೀ ಮಹಾಂತ ಶಿವಾಚಾರ್ಯ ಮಹಾಸ್ವಾಮಿಗಳವರ ಭಕ್ತವೃಂದ**

**ಶ್ರೀ ಬಸವೇಶ್ವರ ಟ್ರಾನ್ಸ್‌ಪೋರ್ಟ್ ಕಂ.**
ಶ್ರೀ ಸಂಗಮೇಶ್ವರ ಕಾಂಪ್ಲೆಕ್ಸ್, ಬಿ.ಟಿ. ಲೇ ಔಟ್, ಆರ್.ಎಂ.ಸಿ. ಲಿಂಕ್ ರೋಡ್, ದಾವಣಗೆರೆ.
ಫೋ. : 08192-275287, ಮೊ. 94483 39312

**ಸುವರ್ಣ ಕರ್ನಾಟಕ ವೇದಿಕೆ (ರಿ.)**
**ಮತ್ತು ಎಲ್ಲಾ ಪದಾಧಿಕಾರಿಗಳು**

# ಐಪಿಪಿಬಿ ಮಹಾ ಲಾಗಿನ್ : ಅಂಚೆ ಇಲಾಖೆಯಿಂದ ಆನ್‌ಲೈನ್ ಸೌಲಭ್ಯ

ದಾವಣಗೆರೆ, ಸೆ.28 - ಭಾರತೀಯ ಅಂಚೆ ಇಲಾಖೆಯ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ವ್ಯವಸ್ಥೆಯು ಡಿಜಿಟಲ್ ಆನ್‌ಲೈನ್ ಸೌಲಭ್ಯಗಳನ್ನು ಮನೆ ಮನೆಗೆ ತಲುಪಿಸಲು ಮುಂದಾಗಿದ್ದು, ನಾಳೆ ದಿನಾಂಕ 29 ರ ಮಂಗಳವಾರ ಐಪಿಪಿಬಿ ಮಹಾ ಲಾಗಿನ್ ಷೆಡ್ಯೂಲ್ ಹಮ್ಮಿಕೊಳ್ಳಲಾಗಿದೆ.

ಇತರೆ ಬ್ಯಾಂಕ್ ಖಾತೆಗಳಿಂದ ತಮ್ಮ ಹಣ ಶುಲ್ಕವಿಲ್ಲದೇ ಎಇಪಿಎಸ್ ಮೂಲಕ ಬಿಡಿಸಿಕೊಳ್ಳುವುದರ ಜೊತೆಗೆ ಖಾತೆಗಳಿಂದ ಹಣ ವರ್ಗಾವಣೆ, ನೆಫ್ಟ್ ಮೊಬೈಲ್ ರೀಚಾರ್ಜ್, ಡಿಜಿಟಲ್ ರೀಚಾರ್ಜ್ ಹಾಗೂ ಆನ್‌ಲೈನ್ ಮೂಲಕ ಅಂಚೆ ಕಚೇರಿಯ ಆರ್.ಡಿ, ಪಿ.ಪಿ.ಎಫ್, ಸುಕನ್ಯಾ ಸಮೃದ್ಧಿ ಖಾತೆಗಳಿಗೆ ಹಣ ಜಮೆ ಮಾಡುವಂತಹ ಸೌಲಭ್ಯಗಳಿವೆ.

ವಿಧವಾ ವೇತನ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ವಿಕಲಚೇತನ, ಸರ್ಕಾರದ ಸ್ಕಾಲರ್‌ಶಿಪ್, ಕಿಸಾನ್ ಸಮ್ಮಾನ್, ಗ್ಯಾಸ್ ಸಬ್ಸಿಡಿ ಹೀಗೆ ಸರ್ಕಾರದ ಹಲವು ಯೋಜನೆಗಳ ಪ್ರಯೋಜನವನ್ನು ಪಡೆಯಲು ಈ ಖಾತೆಯನ್ನು ಬಳಸಬಹುದು.

**ಖಾತೆ ಮಾಡಿಸುವ ವಿಧಾನ :** ಐಪಿಪಿಬಿ ಖಾತೆ ಮಾಡಿಸಲು ಸಾರ್ವಜನಿಕರು ತಮ್ಮ ಆಧಾರ್ ಸಂಖ್ಯೆ, ಮೊಬೈಲ್ ಹಾಗೂ ರೂ.100 ಗಳೊಂದಿಗೆ ಸಮೀಪದ ಯಾವುದೇ ಅಂಚೆ ಕಚೇರಿ ಅಥವಾ ಪೋಸ್ಟ್‌ಮ್ಯಾನನ್ನು ಭೇಟಿಯಾಗಬಹುದು ಹಾಗೂ ಯಾವುದೇ ಅರ್ಜಿಯನ್ನು ತುಂಬುವ ಅಗತ್ಯವಿರುವುದಿಲ್ಲ.

ಚಿತ್ರದುರ್ಗ ವಿಭಾಗದ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಸಾರ್ವಜನಿಕರು ನಾಳೆ ದಿನಾಂಕ 29 ರ ಮಂಗಳವಾರ ವಿಶೇಷವಾಗಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದೆಂದು ಚಿತ್ರದುರ್ಗ ವಿಭಾಗದ ಅಂಚೆ ಅಧೀಕ್ಷಕ ಓ.ವಿರೂಪಾಕ್ಷಪ್ಪ ತಿಳಿಸಿದ್ದಾರೆ.

## 2ಕ್ಕೆ ಮಾಂಸ ಮಾರಾಟವಿಲ್ಲ

ದಾವಣಗೆರೆ, ಸೆ. 28- ಬರುವ ಅಕ್ಟೋಬರ್ 2 ರಂದು ಗಾಂಧಿ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಆದ್ದರಿಂದ ಅಂದು ಮಾಂಸ ಮಾರಾಟ ಮಾಡಬಾರದು. ತಪ್ಪಿದಲ್ಲಿ ಕ್ರಮ ಜರುಗಿಸ ಲಾಗುವುದು ಎಂದು ಪಾಲಿಕೆಯ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

### ರಾಣೇಬೆನ್ನೂರು : 24×7 ಕುಡಿಯುವ ನೀರು ಸರಬರಾಜು ಯೋಜನೆ

# ದೇಶದ 3 ಹಾಗೂ ರಾಜ್ಯದ 2 ನೇ ಅತ್ಯುತ್ತಮ ಯೋಜನೆ

ರಾಣೇಬೆನ್ನೂರು, ಸೆ. 28- ನನ್ನ ಕ್ಷೇತ್ರದ ರಾಣೇಬೆನ್ನೂರು ನಗರದಲ್ಲಿ ಕೈಗೊಳ್ಳಲಾಗಿರುವ 24×7 ಕುಡಿಯುವ ನೀರು ಸರಬರಾಜು ಯೋಜನೆ ದೇಶದಲ್ಲಿ 3 ನೇ ಹಾಗೂ ರಾಜ್ಯದಲ್ಲಿ 2ನೇ ಅತ್ಯುತ್ತಮ ಯೋಜನೆಯಾಗಿದೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.



ಇಂದು ಬೆಳಿಗ್ಗೆ ಅಧಿಕಾರಿಗಳ ಜೊತೆ ಕಾಮಗಾರಿ ವೀಕ್ಷಿಸಿ ನಂತರ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಪುರಸ್ಕೃತ ಅಮೃತ್ ಯೋಜನೆಯ 118 ಕೋಟಿ ವೆಚ್ಚದ ಈ ಕಾಮಗಾರಿ ಶೇ. 90 ರಷ್ಟು ಮುಗಿದಿದೆ. ಈ ಯೋಜನೆಯಿಂದ ನಗರದಾದ್ಯಂತ ಹಾಳಾಗಿರುವ ರಸ್ತೆ ಮುಂತಾದವುಗಳನ್ನು ನಗರಸಭೆ ರಿಪೇರಿ ಮಾಡಲಿದ್ದು, 5 ನೇ ವಿಭಾಗ ದಲ್ಲಿನ ಎರಡು ರಸ್ತೆಗಳನ್ನು ಹೊಸದಾಗಿ ಮಾಡುವ ಜವಾಬ್ದಾರಿಯನ್ನು ಗುತ್ತಿಗೆದಾರರಿಗೆ ಕೊಡಲಾಗಿದೆ ಎಂದು ಶಾಸಕರು ಹೇಳಿದರು.

ನವದೆಹಲಿ ಮೆ.ವಿವೋಲಿಯಾ ಇಂಡಿಯಾ ಕಂಪನಿ ನವೀನ ಹಾಗೂ ವಿಶೇಷ ತಂತ್ರಜ್ಞಾನದೊಂದಿಗೆ ಈ ಯೋಜನೆಯ ಕಾಮಗಾರಿಯನ್ನು 115 ಕೋಟಿಗೆ ಗುತ್ತಿಗೆ ಹಿಡಿದಿದ್ದು, ಕಾಮಗಾರಿ ಪೂರ್ಣಗೊಂಡ ಮೇಲೆ 8 ವರ್ಷ ಆ ಕಂಪನಿಯವರೇ ಉಸ್ತುವಾರಿ ವಹಿಸಿಕೊಂಡು ನಂತರ ನಗರಸಭೆಗೆ ಹಸ್ತಾಂತರ ಮಾಡುವುದರಿಂದ ಕಾಮಗಾರಿ ಗುಣಮಟ್ಟ ದಿಂದಲೇ ಕೂಡಿರುತ್ತದೆ ಎಂದು ಶಾಸಕರು ಅಭಿಪ್ರಾಯಿಸಿದರು.

ಶಾಸಕರ ಜೊತೆ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ನಗರ ಸಭೆ ಆಯುಕ್ತ ಡಾ. ಮಹಾಂತೇಶ, ಅಭಿಯಂತರರಾದ ಬಿ.ಎಚ್. ಪಾಟೀಲ, ಉಮೇಶ, ಎ.ಸಿ ಹಾದಿಮನಿ, ಗುತ್ತಿಗೆದಾರ ಕಂಪನಿಯ ಮ್ಯಾನೇಜರ್ ವಾಸುದೇವ ಮತ್ತಿತರರಿದ್ದರು.

## ಧರಣಿ ಬೇಕಿರಲಿಲ್ಲ : ಶಾಸಕ ಪೂಜಾರ್

24×7 ನೀರು ಸರಬರಾಜು ಕಾಮಗಾರಿ ಎಲ್ಲಿ ಕಳಪೆ ಆಗಿದೆ ಎಂಬುದನ್ನು ತೋರಿಸಿದರೆ ಅದನ್ನು ಸರಿಪಡಿಸಬಹುದು. ನನ್ನ ನಗರ ಸಂಚಾರ ಸಂದರ್ಭದಲ್ಲಿ ಕೆಲ ಸದಸ್ಯರು, ಸಾರ್ವಜನಿಕರು ನನ್ನ ಗಮನಕ್ಕೆ ತಂದ ನ್ಯೂನತೆಗಳನ್ನು ಸರಿಮಾಡಿಸಿದ್ದೇನೆ.

ಈ ಸದಸ್ಯರು ಸಹ ಕಳಪೆ ಕಾಮಗಾರಿ ಎಲ್ಲಿ ನಡೆದಿದೆ ಎಂಬುದನ್ನು ಹೇಳಿದರೆ ಗುತ್ತಿಗೆದಾರರಿಗೆ ಹೇಳಿ ಸರಿಪಡಿಸಬಹುದು. ಇದಕ್ಕಾಗಿ ಧರಣಿ ಅನಾವಶ್ಯ ಎಂದು ನಗರಸಭೆ ಎದುರು ಕೆಲ ಸದಸ್ಯರು ನಡೆಸುತ್ತಿರುವ ಧರಣಿಗೆ ಶಾಸಕ ಅರುಣಕುಮಾರ ಪೂಜಾರ ಪ್ರತಿಕ್ರಿಯಿಸಿದರು.

# ಟ್ರಂಪ್ ಪಾವತಿಸಿದ ತೆರಿಗೆ ಕೇವಲ 750 ಡಾಲರ್

### ಲಕ್ಷಾಂತರ ಡಾಲರ್ ವಿದೇಶಿ ಆದಾಯ ಹೊಂದಿದ್ದರೂ ಅತಿ ಕಡಿಮೆ ತೆರಿಗೆ ಪಾವತಿಸಿದ್ದು ಬಹಿರಂಗ

ವಾಷಿಂಗ್ಟನ್, ಸೆ. 28 – ಡೊನಾಲ್ಡ್ ಟ್ರಂಪ್ 2017ರಲ್ಲಿ ಅಮೆರಿಕದ ಅಧ್ಯಕ್ಷರಾದ ಮೊದಲ ವರ್ಷದಲ್ಲಿ ಕೇವಲ 750 ಡಾಲರ್‌ಗಳನ್ನು ತೆರಿಗೆಯಾಗಿ ಪಾವತಿಸಿದ್ದಾರೆ. ಅದೇ ವರ್ಷ ಅವರ ಕಂಪನಿಗಳು ಭಾರತದಲ್ಲಿ 1,45,400 ಡಾಲರ್‌ಗಳನ್ನು ತೆರಿಗೆಯಾಗಿ ಪಾವತಿಸಿವೆ ಎಂದು ಅಲ್ಲಿನ ಮಾಧ್ಯಮವೊಂದು ವರದಿ ಮಾಡಿದೆ.

ಅಧ್ಯಕ್ಷ ಸ್ಥಾನದಲ್ಲಿ ಗೆಲುವು ಸಾಧಿಸಿದಾಗ ಅವರು 750 ಡಾಲರ್ ತೆರಿಗೆ ಪಾವತಿಸಿದ್ದರು. ನಂತರದ ಒಂದು ವರ್ಷದಲ್ಲಿ ಅವರು ಮತ್ತೆ 750 ಡಾಲರ್ ತೆರಿಗೆ ಪಾವತಿಸಿದ್ದರು ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ನವೆಂಬರ್ 3ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಅದರ ಬೆನ್ನಲ್ಲೇ ಈ ವರದಿ ಪ್ರಾಮುಖ್ಯತೆ ಪಡೆದುಕೊಂಡಿದೆ. ಅದಕ್ಕೂ ಹಿಂದಿನ 15 ವರ್ಷಗಳ ಪೈಕಿ 10 ವರ್ಷಗಳಲ್ಲಿ ಟ್ರಂಪ್ ಯಾವುದೇ ತೆರಿಗೆ ಪಾವತಿಸಿಲ್ಲ. ಅವರು ಹಣ ಗಳಿಸಿದ್ದಕ್ಕಿಂತ ಕಳೆದುಕೊಂಡಿದ್ದೇ ಹೆಚ್ಚು ಎಂದು ವರದಿಯಲ್ಲಿ ತಿಳಿಸಲಾಗಿದೆ.



ಈ ವರದಿ ಸಂಪೂರ್ಣವಾಗಿ ನಕಲಿ ಸುದ್ದಿ ಎಂದು ಅಮೆರಿಕದ ಅಧ್ಯಕ್ಷ ಟ್ರಂಪ್ ತಳ್ಳಿ ಹಾಕಿದ್ದಾರೆ.

ಅಮೆರಿಕದ ಅಧ್ಯಕ್ಷರು ತಮ್ಮ ವೈಯಕ್ತಿಕ ಹಣಕಾಸು ವಿವರಗಳನ್ನು ಬಹಿರಂಗ ಪಡಿಸುವ ಅಗತ್ಯವಿಲ್ಲ. ಆದರೆ, ರಿಚರ್ಡ್ ನಿಕ್ಸನ್ ನಂತರ ಪ್ರತಿಯೊಬ್ಬರು ವೈಯಕ್ತಿಕ ಹಣಕಾಸು ವಿವರಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. ಆದರೆ, ಟ್ರಂಪ್ ಮಾತ್ರ ತಮ್ಮ ತೆರಿಗೆ ಪಾವತಿ ವಿವರಗಳನ್ನು ಗೌಪ್ಯವಾಗಿಟ್ಟುಕೊಂಡಿದ್ದಾರೆ.

ತಮ್ಮ ತೆರಿಗೆ ಕುರಿತು ಮಾಹಿತಿ ಕೇಳುವವರ ವಿರುದ್ಧ ಅವರು ನ್ಯಾಯಾಂಗದ ಮೊರೆ ಸಹ ಹೋಗಿದ್ದಾರೆ. ತೆರಿಗೆ ವಿವರ ಕೇಳಿದವರ ವಿರುದ್ಧ ಪ್ರಕರಣಗಳನ್ನೂ ದಾಖಲಿಸಲಾಗಿದೆ.

ನ್ಯೂಯಾರ್ಕ್ ಟೈಮ್ಸ್ ವರದಿಯ ಪ್ರಕಾರ, ಟ್ರಂಪ್ ಸಾರ್ವಜನಿಕವಾಗಿ ಹೇಳುತ್ತಿರುವುದಕ್ಕೂ, ವಾಸ್ತವಾಂಶಕ್ಕೂ ವ್ಯತ್ಯಾಸವಿದೆ. ಉದ್ಯಮಿಯಾಗಿ ಅವರು ದಶಲಕ್ಷಗಟ್ಟಲೆ ವ್ಯವಹಾರ ನಡೆಸುತ್ತಾರೆ. ಆದರೆ, ತೀವ್ರ ನಷ್ಟವಾಗಿದೆ ಎಂದು ಹೇಳಿ ತೆರಿಗೆ ಪಾವತಿಸುವುದನ್ನು ತಪ್ಪಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಹಣಕಾಸು ಸವಾಲುಗಳು ಹೆಚ್ಚಾಗುತ್ತಿವೆ.

ಅವರು ತಮ್ಮ ಉದ್ಯಮದಿಂದ ಹೆಚ್ಚು ಹೆಚ್ಚು ಹಣ ಗಳಿಸಬೇಕಿದೆ. ಇದು ನೇರವಾಗಿ ಅವರ ಅಧ್ಯಕ್ಷ ಹುದ್ದೆಯ ಹಿತದ ಜೊತೆಗಿನ ಸಂಘರ್ಷದಲ್ಲಿದೆ ಎಂದು ವರದಿ ತಿಳಿಸಿದೆ.

ಟ್ರಂಪ್ ಅವರ ಎರಡು ದಶಕಗಳ ತೆರಿಗೆ ಪಾವತಿ ವಿವರ ಹಾಗೂ ವಹಿವಾಟು ನಡೆಸುವ ನೂರಾರು ಕಂಪನಿಗಳ ಹಣಕಾಸು ವಿವರಗಳನ್ನು ಸಂಗ್ರಹಿಸಲಾಗಿದೆ. ಆದರೆ, ಇದರಲ್ಲಿ ಅವರು 2018, ಇಲ್ಲವೇ 2019ರಲ್ಲಿ ಗಳಿಸಿದ ವೈಯಕ್ತಿಕ ಆದಾಯದ ವಿವರ ಇಲ್ಲ ಎಂದು ತಿಳಿಸಲಾಗಿದೆ.

ಟ್ರಂಪ್ ಅಧ್ಯಕ್ಷರಾದ ಮೊದಲ ಎರಡು ವರ್ಷಗಳಲ್ಲಿ ವಿದೇಶಗಳಿಂದ 73 ದಶಲಕ್ಷ ಡಾಲರ್ ಆದಾಯ ಗಳಿಸಿದ್ದಾರೆ. ಇದರಲ್ಲಿ ಬಹುಪಾಲು ಸ್ಕಾಟ್‌ಲ್ಯಾಂಡ್ ಮತ್ತು ಐರ್ ಲ್ಯಾಂಡ್‌ಗಳಲ್ಲಿ ಅವರು ಹೊಂದಿರುವ ಗಾಲ್ಫ್ ಆಸ್ತಿಯಿಂದ ಬಂದಿದ್ದಾಗಿದೆ.

ವಿದೇಶದಿಂದ ಗಳಿಸಿದ ಆದಾಯಕ್ಕಾಗಿ 2017ರಲ್ಲಿ ಅವರು ಅಮೆರಿಕದಲ್ಲಿ 750 ಡಾಲರ್ ತೆರಿಗೆ ಪಾವತಿಸಿದ್ದಾರೆ. ಪನಾಮಾದಲ್ಲಿ ಅವರು ಹಾಗೂ ಅವರ ಕಂಪನಿಗಳು 15,598 ಡಾಲರ್, ಭಾರತದಲ್ಲಿ 1,45,400 ಡಾಲರ್ ಹಾಗೂ ಫಿಲಿಪೈನ್ಸ್‌ನಲ್ಲಿ 1,56,824 ಡಾಲರ್ ತೆರಿಗೆ ಪಾವತಿಸಿರುವುದಾಗಿ ವರದಿ ಹೇಳಿದೆ.

# 35 ರೂ.ಗಳವರೆಗೆ ರೈಲ್ವೆ ನಿಲ್ದಾಣದ ಶುಲ್ಕ

### ಅಭಿವೃದ್ಧಿಗಾಗಿ ಶುಲ್ಕ ವಸೂಲಿ ಪ್ರಸ್ತಾಪ ಸಂಪುಟದ ಅನುಮೋದನೆಗೆ ರವಾನೆ

ನವದೆಹಲಿ, ಸೆ. 28 – ರೈಲ್ವೆ ನಿಲ್ದಾಣಗಳಿಗಾಗಿ ಪ್ರಯಾಣಿಕರಿಂದ 35 ರೂ.ಗಳವರೆಗೆ ಶುಲ್ಕ ವಸೂಲಿ ಮಾಡಲು ರೈಲ್ವೆ ಇಲಾಖೆ ಪ್ರಸ್ತಾಪ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

ಟಿಕೆಟ್ ದರಕ್ಕೆ ಹೆಚ್ಚುವರಿಯಾಗಿ 10-35 ರೂ.ಗಳವರೆಗೆ ಶುಲ್ಕ ವಸೂಲಿ ಮಾಡುವ ಪ್ರಸ್ತಾಪವನ್ನು ರೈಲ್ವೆ ಅಂತಿಮಗೊಳಿಸಿದ್ದು, ಇದನ್ನು ಸಂಪುಟದ ಅನುಮೋದನೆಗೆ ರವಾನಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಬಳಕೆದಾರರ ಶುಲ್ಕ ಪ್ರತಿ ವರ್ಗದ ಪ್ರಯಾಣಿಕರಿಗೆ ಬೇರೆಯಾಗಿರಲಿದೆ. ಇದು 10 ರೂ.ಗಳಿಂದ 35 ರೂ.ಗಳವರೆಗೆ ಇರಲಿದೆ. ಎ.ಸಿ. ದರ್ಜೆ ಪ್ರಯಾಣಿಕರು ಹೆಚ್ಚು ದರ ಪಾವತಿಸಬೇಕಾಗಲಿದೆ.

ಮರು ಅಭಿವೃದ್ಧಿಯಾಗುವ ಹಾಗೂ ಹೆಚ್ಚು ಜನರು ಭೇಟಿ ನೀಡುವ ನಿಲ್ದಾಣಗಳಲ್ಲಿ ಮಾತ್ರ ಶುಲ್ಕ ವಸೂಲಿ ಮಾಡುವುದಾಗಿ ರೈಲ್ವೆ ಇಲಾಖೆ ಈ ಹಿಂದೆ ತಿಳಿಸಿತ್ತು.

ದೇಶಾದ್ಯಂತ ಇರುವ 7,000 ವಿಮಾನ ನಿಲ್ದಾಣಗಳಲ್ಲಿ 700 ರಿಂದ ಸಾವಿರ ಮಾತ್ರ ಈ ವರ್ಗಕ್ಕೆ ಬರುತ್ತವೆ ಎಂದು ತಿಳಿಸಲಾಗಿತ್ತು.

ವಿಮಾನ ನಿಲ್ದಾಣಗಳನ್ನು ಹೊರತು ಪಡಿಸಿದರೆ ರೈಲ್ವೆ ನಿಲ್ದಾಣಗಳಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯ ಶುಲ್ಕ ಜಾರಿಗೆ ತರಲಾಗುತ್ತಿದೆ.

ಪ್ರಯಾಣಿಕರಿಂದ ಪಡೆಯಲಾಗುವ ಈ ಹಣವನ್ನು, ರೈಲ್ವೆ ನಿಲ್ದಾಣದ ಅಭಿವೃದ್ಧಿಗಾಗಿ ಮಾತ್ರ ಬಳಸಲಾಗುವುದು ಎಂದು ರೈಲ್ವೆ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ.

ಈ ಶುಲ್ಕ ಸಕಾರಣ ಹಾಗೂ ಕನಿಷ್ಠ ಪ್ರಮಾಣದಲ್ಲಿರಲಿದೆ. ಇದರಿಂದ ಜನ ಸಾಮಾನ್ಯರಿಗೆ ಹೊರೆಯಾಗುವುದಿಲ್ಲ. ಹೆಚ್ಚು ಪ್ರಯಾಣಿಕರು ಬರುವ ನಿಲ್ದಾಣಗಳಲ್ಲಿ ಮಾತ್ರ ಶುಲ್ಕ ವಸೂಲಿ ಮಾಡಲಾಗುವುದು ಎಂದು ವಕ್ತಾರರು ಹೇಳಿದ್ದಾರೆ.

ಈ ವಿಷಯ ಪ್ರಸಕ್ತ ಪರಿಶೀಲನೆಯಲ್ಲಿದೆ. ಯಾವುದೇ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಆದರೆ, ಬಳಕೆದಾರರ ಶುಲ್ಕಗಳು ಕನಿಷ್ಠವಾಗಿರಲಿದ್ದು, ಯಾವುದೇ ವರ್ಗದ ಪ್ರಯಾಣಿಕರಿಗೆ ಹೊರೆಯಾಗುವುದಿಲ್ಲ ಎಂದು ವಕ್ತಾರರು ಹೇಳಿದ್ದಾರೆ.

## ಅಕ್ಟೋಬರ್ ಮೊದಲ ವಾರದಲ್ಲಿ ಸಂಪುಟ ವಿಸ್ತರಣೆಗೆ ಸಿಎಂ ಇಂಗಿತ

ಬೆಂಗಳೂರು, ಸೆ. 28 - ಅಕ್ಟೋಬರ್ ಮೊದಲ ವಾರದಲ್ಲಿ ಸಂಪುಟ ವಿಸ್ತರಿಸುವ ಇಂಗಿತವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ವ್ಯಕ್ತಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಪುಟ ವಿಸ್ತರಿಸಲಿದ್ದ, ಎಲ್ಲಾ ಅಡೆತಡೆಗಳು ನಿವಾರಣೆಯಾಗಿವೆ. ಮೂರ್ನಾಲ್ಕು ದಿನಗಳಲ್ಲೇ ದೆಹಲಿಗೆ ತೆರಳಿ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಿ, ಮಂತ್ರಿಮಂಡಲವನ್ನು ವಿಸ್ತರಿಸುವುದಾಗಿ ತಿಳಿಸಿದರು.

ವಿಧಾನಮಂಡಲದ ಅಧಿವೇಶನಕ್ಕೂ ಮುನ್ನವೇ ಸಂಪುಟ ವಿಸ್ತರಣೆ ಮಾಡುವ ಉದ್ದೇಶದಿಂದ ದೆಹಲಿಗೆ ತೆರಳಿದ್ದರು. ವರಿಷ್ಠರ ಜೊತೆ ಮಾತುಕತೆ ನಡೆಸಿದ್ದರು. ವಿಸ್ತರಣೆ ಸಾಧ್ಯವಾಗಲಿಲ್ಲ. ಈಗ ಮತ್ತೊಮ್ಮೆ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ.

# ರೈತರನ್ನು ಸ್ವತಂತ್ರರನ್ನಾಗಿಸುವಲ್ಲಿ ನೂತನ ಕೃಷಿ ಕಾಯ್ದೆಗಳು ಸಹಕಾರಿ : ಸಂಸದ ಸಿದ್ದೇಶ್ವರ

ದಾವಣಗೆರೆ, ಸೆ.28- ರೈತರನ್ನು ಸ್ವಾವಲಂಬಿಗಳನ್ನಾಗಿಸುವ ನಿಟ್ಟಿನಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮೂರು ಹೊಸ ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಿದ್ದು, ಇವುಗಳು ರೈತರನ್ನು ಸ್ವತಂತ್ರರನ್ನಾಗಿಸಲು ಸಹಕಾರಿಯಾಗಿವೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಕೃಷಿ ಕಲ್ಯಾಣ ಸಚಿವಾಲಯ ದೊಂದಿಗೆ ಹಮ್ಮಿಕೊಂಡಿದ್ದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಹೊಸ ಮಸೂದೆಗಳನ್ನು ರೈತರು ತಾವು ಬೆಳೆದ ಬೆಳೆಗಳನ್ನು ಇಷ್ಟಪಟ್ಟ ವರ್ತಕರಿಗೆ ಮಾರಬಹುದು ಎಂದರು. ರೈತರು ಇಚ್ಚಿಸಿದರೆ ಕೃಷಿ ಮಾರುಕಟ್ಟೆಯ ಒಳಗೆ ಅಥವಾ ಕೃಷಿ ಮಾರುಕಟ್ಟೆ ಹೊರಗೆ ಅವರೇ ನಿಗದಿಪಡಿಸಿದ ಬೆಲೆಗೆ ಮಾರಬಹುದಾಗಿದೆ.

ಕೆಲವು ಪಟ್ಟಭದ್ರ ಹಿತಾಸಕ್ತಿಗಳು ರೈತರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿವೆ ಎಂದು ಕಿಡಿಕಾರಿದರು.

ಮುಂಬರುವ ದಿನಗಳಲ್ಲಿ ಲೋಕಸಭಾ ಕ್ಷೇತ್ರಗಳಲ್ಲಿ ರೈತರ ಮನೆ ಬಾಗಿಲಿಗೆ ತೆರಳಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮಸೂದೆಗಳ ಕುರಿತು ರೈತರಿಗೆ ವಾಸ್ತವ ಮನವರಿಕೆ ಮಾಡುವ ಸಲಹೆ ನೀಡಿದರು. ಕೇಂದ್ರದ ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಸೂಕ್ತ ಮಾರ್ಗದರ್ಶನ ನೀಡಿದರು.

ಸಚಿವರಾದ ನರೇಂದ್ರ ಸಿಂಗ್ ತೋಮರ್, ಡಿ.ವಿ. ಸದಾನಂದಗೌಡ, ನಿರ್ಮಲಾ ಸೀತಾರಾಮನ್, ರವಿಶಂಕರ್ ಪ್ರಸಾದ್ ಹಾಗೂ ಲೋಕಸಭಾ ಸದಸ್ಯರು ಭಾಗವಹಿಸಿದ್ದರು.

## ಕೌಟುಂಬಿಕ ಕಲಹ ದಂಪತಿ ಆತ್ಮಹತ್ಯೆ

ಹರಪನಹಳ್ಳಿ, ಸೆ.28 - ತಾಲ್ಲೂಕಿನ ಶಿಂಗ್ರಿಹಳ್ಳಿ ಗ್ರಾಮದಲ್ಲಿ ಪತ್ನಿ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಕ್ಕೆ ಭಯಗೊಂಡ ಗಂಡ ಸಹ ನೇಣು ಬಿಗಿದು ಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಸೋಮವಾರ ಬೆಳಿಗ್ಗೆ ಜರುಗಿದೆ.


ಕೌಟುಂಬಿಕ ಕಲಹ ಹಾಗೂ ಮಕ್ಕಳಾಗದಿದ್ದಕ್ಕೆ ಬೇಸರಗೊಂಡು ಸುಧಾ (30) ವಿಷ ಸೇವಿಸಿ



ಮನೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದರು. ಪತ್ನಿ ಆತ್ಮಹತ್ಯೆಗೆ ಶರಣಾಗಿದ್ದರಿಂದ ಇದು ನನ್ನ ಮೇಲೆ ಎಲ್ಲಿ ಬರುತ್ತದೆಯೋ ಎಂದು ಭಯಗೊಂಡ ಗಂಡ ತೆಲುಗರ ಹನುಮಂತಪ್ಪ (33) ಸಹ ತಮ್ಮ ಜಮೀನಿಗೆ ತೆರಳಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

ಕಳೆದ 3 ವರ್ಷಗಳ ಹಿಂದೆ ಇಬ್ಬರಿಗೂ ವಿವಾಹವಾಗಿತ್ತು. ಹುಡುಗಿ ತಂದೆ ಹಾಗೂ ಹುಡುಗನ ಸಹೋದರ ಇಬ್ಬರು ಪ್ರತ್ಯೇಕವಾಗಿ ದೂರು ನೀಡಿದ್ದು, ಹಲುವಾಗಲು ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿದೆ. ತಹಶೀಲ್ದಾರ್ ಅನಿಲ್ ಕುಮಾರ ಹಾಗೂ ವೃತ್ತ ನಿರೀಕ್ಷಕ ಕುಮಾರ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

## ನಗರದಲ್ಲಿ ಎಸ್.ಪಿ.ಬಿ. ಅವರನ್ನು ಸನ್ಮಾನಿಸಿದ ಕ್ಷಣ



ದಾವಣಗೆರೆ,ಸೆ.28- ಹಿಮೋಫಿಲಿಯಾ ರೋಗಿಗಳ ಸಹಾಯಾರ್ಥವಾಗಿ ಈ ಹಿಂದೆ ನಗರದಲ್ಲಿ ಆಯೋಜನೆಗೊಂಡಿದ್ದ ಗಾನ ಸಂಜೆ ಕಾರ್ಯಕ್ರಮದಲ್ಲಿ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರನ್ನು ಸನ್ಮಾನಿಸಿದ ಸಂದರ್ಭದ ಚಿತ್ರ. ಅಂದಿನ ಜಿಲ್ಲಾಧಿಕಾರಿ ಬಿ.ಹೆಚ್. ಅನಿಲ್ ಕುಮಾರ್, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಹಿಮೋಫಿಲಿಯಾ ಸೊಸೈಟಿ ಕಾರ್ಯದರ್ಶಿ ಡಾ. ಸುರೇಶ್ ಹನಗವಾಡಿ, ಹಿರಿಯ ಕಲಾವಿದ ಆರ್. ಟಿ. ಅರುಣ್ ಕುಮಾರ್, ಪಿ.ಸಿ. ರಾಮನಾಥ್ ಮತ್ತಿತರರು ಕಾರ್ಯಕ್ರಮದ ಮುಂದಾಳತ್ವ ವಹಿಸಿದ್ದರು.

## ಸಿದ್ದಯ್ಯನಕೋಟೆಯ ಪೈಲ್ವಾನ್ ಮಹ್ಮದ್ ಷಫಿ ಸಾಬ್ ನಿಧನ



ಜಗಳೂರು ತಾಲ್ಲೂಕು ಸಿದ್ದಯ್ಯನಕೋಟೆ ಗ್ರಾಮದ ದಿ. ಪೈಲ್ವಾನ್ ಉಮ್ಮರ್‌ಸಾಬ್ ಅವರ ಹಿರಿಯ ಪುತ್ರರು ಹಾಗೂ ಜಿಲ್ಲಾ ವಕ್ಫ್ ಬೋರ್ಡ್‌ನ ಸದಸ್ಯರೂ ಆದ ದಳಪತಿ **ಪೈಲ್ವಾನ್ ಮಹ್ಮದ್ ಷಫಿ ಸಾಬ್** ಅವರು ದಿನಾಂಕ 28.9.2020 ರ ಸೋಮವಾರ ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು. ಶ್ರೀಯುತರು ಸುತ್ತಮುತ್ತಲ ಹಳ್ಳಿಗಳಲ್ಲದೇ, ಜಗಳೂರು ತಾಲ್ಲೂಕು ಮತ್ತು ಜಿಲ್ಲೆಯಾದ್ಯಂತ ಹೆಸರುವಾಸಿಯಾಗಿದ್ದರು. ಸರ್ವ ಜನಾಂಗದ ಶಾಂತಿಯ ಸಂಕೇತವಾಗಿದ್ದರು. ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.9.2020 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮದ ಖಬರಸ್ಥಾನದಲ್ಲಿ ನೆರವೇರಿಸಲಾಗುವುದು.


– ದುಃಖತಪ್ತ ಕುಟುಂಬ ವರ್ಗ, ಮೊ. : 78292 70136

## ಲಿಂ. ಡಾ. ಮಹಾಂತ ಶ್ರೀಗಳ 83ನೇ ಜಯಂತ್ಯೋತ್ಸವ ಇಂದು



ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಶ್ರೀ ಪಂಚಮಸಾಲಿ ಜಗದ್ಗುರು ಲಿಂಗೈಕ್ಯ ಡಾ. ಮಹಾಂತ ಶಿವಾಚಾರ್ಯ ಮಹಾಸ್ವಾಮೀಜಿಯವರ 83ನೇ ಜಯಂತ್ಯೋತ್ಸವವನ್ನು ಶ್ರೀಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ ಪೂಜಾ ಕಾರ್ಯಕ್ರಮ ಮತ್ತು ಮಹಾ ಮಂಗಳಾರತಿ ಮಾಡುವುದರೊಂದಿಗೆ ಇಂದು ಬೆಳಿಗ್ಗೆ 6 ಗಂಟೆಗೆ ಏರ್ಪಡಿಸಲಾಗಿದೆ.

## ಬಿಜೆಪಿ ಯುವ ಮೋರ್ಚಾದಿಂದ ಭಗತ್‌ಸಿಂಗ್ ಪುತ್ಥಳಿಗೆ ಪುಷ್ಪಾರ್ಚನೆ



ದಾವಣಗೆರೆ, ಸೆ.28- ಸ್ವತಂತ್ರ ಹೋರಾಟಗಾರ ಭಗತ್‌ಸಿಂಗ್ ಅವರ ಜನ್ಮದಿನದಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ನಗರದ ರೈಲು ನಿಲ್ದಾಣ ಮುಂಭಾಗದಲ್ಲಿರುವ ಭಗತ್‌ಸಿಂಗ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರೂ ಆದ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಆರ್.ಎಲ್. ಶಿವಪ್ರಕಾಶ್, ಯುವ ಮುಖಂಡರುಗಳಾದ ಗೌತಮ್ ಜೈನ್, ಶಂಕರಗೌಡ ಬಿರಾದಾರ್, ಗಿರೀಶ್, ಸಚಿನ್ ವೆರ್ಣೇಕರ್, ಹರೀಶ್, ರಾಕೇಶ್ ಜಾಧವ್, ಪ್ರದೀಪ್, ಕಿರಣ್, ವಿನಯ್ ಮತ್ತಿತರರು ಉಪಸ್ಥಿತರಿದ್ದರು.

# ಫೈನಾನ್ಸ್ ಕಂಪನಿಗಳು ಒತ್ತಡದಿಂದ ಹಣ ವಸೂಲಿ ಮಾಡಿದರೆ ಕ್ರಮ



**ಜಗಳೂರು**

ಜಗಳೂರು, ಸೆ. 28- ಕೊರೊನಾ ಹಿನ್ನೆಲೆಯಲ್ಲಿ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೈಕ್ರೋ ಫೈನಾನ್ಸ್ ಕಂಪನಿಗಳು ಒತ್ತಡದಿಂದ ಹಣ ವಸೂಲಿ ಮಾಡಲು ಯತ್ನಿಸಿದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ತಿಳಿಸಿದರು.

ಜಗಳೂರು ಪಟ್ಟಣದ ತಾಲ್ಲೂಕು ಕಛೇರಿ ಸಭಾಂಗಣದಲ್ಲಿ ಫೈನಾನ್ಸ್ ಹಾವಳಿ ಹೆಚ್ಚಾಗಿರುವ ವಿಚಾರವಾಗಿ ಕರೆಯಲಾಗಿದ್ದ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕೊರೊನಾ ರೋಗ ಹೆಚ್ಚಾಗಿದ್ದು, ಈ ಹಿನ್ನೆಲೆಯಲ್ಲಿ ರೈತರು, ಕೂಲಿ ಕಾರ್ಮಿಕರು ಜೀವನ ನಿರ್ವಹಣೆ ಮಾಡುವುದು ಬಹಳ ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಸಾಲ ನೀಡಿರುವ ಫೈನಾನ್ಸ್ ಕಂಪನಿಯ ಸಿಬ್ಬಂದಿಗಳು ರೈತರ ಮನೆ ಬಾಗಿಲಿಗೆ ಹೋಗಿ ಒತ್ತಾಯದಿಂದ ಹಣ ವಸೂಲಿ ಮಾಡುತ್ತಿರುವುದು ತಿಳಿದು ಬಂದಲ್ಲಿ ಅಂತಹ ಫೈನಾನ್ಸ್ ಕಂಪನಿಗಳ ವಿರುದ್ಧ ಕೇಸ್ ದಾಖಲು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಾಲ ಪಡೆದ ರೈತರು ಸ್ವ ಇಚ್ಛೆಯಿಂದ ಹಣ ಕಟ್ಟಲು ಮುಂದಾದರೆ ಕಟ್ಟಿಸಿಕೊಳ್ಳಿ. ಬಲವಂತವಾಗಿ ದೌರ್ಜನ್ಯದಿಂದ ಹಣ ವಸೂಲಿಗೆ ಮುಂದಾಗಬಾರದು. ಮಾನಸಿಕ ಕಿರುಕುಳ ನೀಡಿದರೆ ಕೇಸು ದಾಖಲು ಮಾಡಲಾಗುವುದು ಎಂದರು.

ಸಭೆಯಲ್ಲಿ ತಾಲ್ಲೂಕು ದಂಡಾಧಿಕಾರಿ ಡಾ. ನಾಗವೇಣಿ, ಸಿಪಿಐ ದುರುಗಪ್ಪ, ತಾಲ್ಲೂಕಿನ ವಿವಿಧ ಫೈನಾನ್ಸ್ ಕಂಪನಿಗಳ ಸಿಬ್ಬಂದಿಗಳು ಭಾಗವಹಿಸಿದ್ದರು.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte